# ಹೈಯರ್ ಸೆಕೆಂಡರಿ ಕೋರ್ಸ್
# HIGHER SECONDARY COURSE

## ಕನ್ನಡ
## KANNADA

**XI**

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು:
**ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)**
**ವಿದ್ಯಾಭವನ, ಪೂಜಪುರ, ತಿರುವನಂತಪುರ - 695 012**

**2026**

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - XI

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Designed by : SCERT
First Edition : 2026
Printed at : Centre for Advanced Printing and Training (C-apt), Thiruvananthapuram-695013
© Department of General Education, Government of Kerala.
ISBN 978-93-47213-13-7

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಮಾಧ್ಯಮ ಮಾತ್ರವಲ್ಲ. ಅದು ನಮ್ಮ ದೃಷ್ಟಿಯೂ, ದೃಷ್ಟಿಕೋನವೂ ಆಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷಾಶೈಲಿಯನ್ನು ಬೆಳೆಸಿಕೊಳ್ಳಲು ಭಾಷೆಯನ್ನು ಕಲಿಯಬೇಕು.

ಭಾಷಾ ಪಠ್ಯಪುಸ್ತಕವು ಮುದ್ರಿತ ಹಾಳೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕವು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತದೆ, ಒಬ್ಬರಿಗೊಬ್ಬರು ಪರಸ್ಪರ ಬೆರೆಯುವ ಗೆಳೆಯರಂತೆ ಇರುತ್ತದೆ, ಹಿತೈಷಿಗಳಂತೆ ಇರುತ್ತದೆ ಎನ್ನಬಹುದು. ಪಠ್ಯಪುಸ್ತಕವು ನಾವು ಒಳಗೊಂಡಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡುತ್ತದೆ ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

## TEXTBOOK DEVELOPMENT TEAM
## KANNADA - XI

**Advisor**

**Shiva Shankara P.**
Associate Professor, GPM Govt College Manjeshwara.

**Chairperson**

**Dr. Rathnakara M.**
Professor, Govt College Kasaragod.

**Experts**

**Dr. Subrahmanya K.**
Professor, Govt First Grade College, Bettampady, Karnataka.

**Dr. Vedavathi S.**
Associate Professor, Govt College, Kasaragod.

**Dr. Sujish S.**
Assistant Professor, GPM Govt College Manjeswara.

**Members**

**Narayana Rao. M,** Rtd. HSST Kannada, Bantwala (DK).
**Ravikumar K**, HSST Kannada, GHSS Kumbla.
**Srinivasa Ballullaya,** HSST Kannada, GVHSS Mulleria.
**Ganesha P S,** HSST Kannada, SAPHSS Agalpady.
**Sateesh Kumar A,** HSST Kannada, GHSS Angadimogar.
**Vishwanatha O,** HSST Kannada, GHSS Bekur.
**Dinesha K,** HSST Kannada, GHSS Padre.
**Preetham A K,** HSST Kannada, BARHSS Bovikkan.
**Harisha G,** HSST Kannada, SVVHSS Miyapadavu.
**Dr. Subhash Pattaje,** HSST Kannada, SSHSS Sheni.

**Academic Co-Ordinator**
**Dr. Sahaya Dhas, D.**
**Assistant Professor (Tamil), SCERT.**

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| | | |
|---|---|---|
| 1 | **ಸಂಸ್ಕೃತಿ ದರ್ಶನ** | **7 - 29** |
| | ಯೋಧ ಮತ್ತು ಹೆಂಗಸು | 8 - 11 |
| | ಆಟಿ ಅಮಾವಾಸ್ಯೆಯ ಒಂದು ನೆನಪು | 12 - 18 |
| | ಸುತ್ತೆಲ್ಲ ಜನಪದ ಹಾಡಿರಲಿ | 19 - 21 |
| | ಆಹಾ ! ಒಂದು ಕಪ್ಪು ಚಹಾ !! | 22 - 28 |
| 2 | **ಬದುಕು - ಬಾಂಧವ್ಯ** | **30 - 53** |
| | ಪರಿಸರದ ಕತೆ | 31 - 36 |
| | ನೀನಿಲ್ಲದಿವೆಲ್ಲಮೊಳವೆ | 37 - 41 |
| | ಇರಬೇಕು ಇರುವಂತೆ | 42 - 44 |
| | ಅಮೇರಿಕದಲ್ಲಿ ಗೊರೂರು | 45 - 52 |
| 3 | **ಸಾಧನೆಯ ಹಾದಿ** | **54 - 83** |
| | ಭೀಮ | 55 - 57 |
| | ಅನ್ನಿ ಅನ್ನಪೂರ್ಣೆಯಾದಳು | 58 - 69 |
| | 'ರುದ್ರ' ಹೆಲಿಕಾಪ್ಟರ್ ಹಿಂದಿನ ಸ್ತ್ರೀ ಶಕ್ತಿ | 70 - 76 |
| | ಬದುಕಿನ ತಿರುವು | 77 - 82 |
| 4 | **ಬದುಕು ಭದ್ರತೆ** | **84 - 99** |
| | ನಿಂತು ಹೊರಡಿ | 85 - 88 |
| | ಕೂರ್ಗ್ ರೆಜಿಮೆಂಟ್ | 89 - 94 |
| | ನಿತ್ಯೋತ್ಸವ | 95 - 98 |
| 5 | **ಕಾಯಕ ಜೀವನ** | **100 - 118** |
| | ಹಾಗವನು ಕೊಟ್ಟಲ್ಲದೇನೆಂದಡಂ ಬಿಡೆನೆಂದನು | 101 - 107 |
| | ವಚನಗಳು | 108 - 111 |
| | ಕೃಷಿ - ದೇಸೀಯತೆ | 112 - 117 |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# ಘಟಕ – 1

# ಸಂಸ್ಕೃತಿ ದರ್ಶನ



'ಅತಿಥಿ ದೇವೋ ಭವ' ಎಂಬುದು ನಮ್ಮ ಸಂಸ್ಕೃತಿಯ ಜೀವಾಳವಾಗಿದೆ. ಅತಿಥಿಗಳು ಬಂದಾಗ ಅವರನ್ನು ನಗು ಮುಖದಿಂದ ಸ್ವಾಗತಿಸುವುದು, ಅವರಿಗೆ ಆಸನ, ಆಹಾರವನ್ನು ನೀಡಿ, ಆತ್ಮೀಯ ಮಾತುಗಳ ಮೂಲಕ ಸತ್ಕಾರ ಮಾಡುವುದು ಭಾರತೀಯ ಸಂಸ್ಕೃತಿಯಾಗಿದೆ. ಇಂತಹ ಸತ್ಕಾರವು ಕೇವಲ ವಿನಯದ ಗುರುತು ಮಾತ್ರವಲ್ಲ; ಅದು ನಮ್ಮ ಹೃದಯದ ದಯೆ, ಪ್ರೀತಿ ಮತ್ತು ಸಹೃದಯತೆಯ ಪ್ರತಿಬಿಂಬವಾಗಿದೆ. ಯೋಧರನ್ನು ಗೌರವಿಸುವ ಮೂಲಕ ನಾಡಿಗೆ ಗೌರವವನ್ನು ಸೂಚಿಸುವ ಸಂಸ್ಕೃತಿಯನ್ನು ಇಲ್ಲಿ ನೀಡಿರುವ 'ಯೋಧ ಮತ್ತು ಹೆಂಗಸು' ಎಂಬ ಕವಿತೆಯು ಪರಿಚಯಿಸುತ್ತದೆ. ಈ ಪಾಠದ ಮೂಲಕ ನಾವು ಅತಿಥಿ ಸತ್ಕಾರದ ರೀತಿ ನೀತಿ, ಅದರ ಅಗತ್ಯ ಹಾಗೂ ಅದರ ಮೂಲಕ ಮಾನವೀಯ ಮೌಲ್ಯಗಳನ್ನು ಹೇಗೆ ಬೆಳೆಸಿಕೊಳ್ಳಬಹುದು ಎಂಬುದನ್ನು ತಿಳಿದುಕೊಳ್ಳಬಹುದು.

ಹಬ್ಬಗಳು ನಮ್ಮ ಆಚಾರ, ಸಂಸ್ಕೃತಿಯ ಪ್ರತೀಕಗಳಾಗಿವೆ. ಇವು ನಮ್ಮ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಆರೋಗ್ಯದ ಮೇಲೆ ಧನಾತ್ಮಕವಾದ ಪ್ರಭಾವವನ್ನು ಬೀರುತ್ತವೆ. ನಮ್ಮ ಬಹುತೇಕ ಹಬ್ಬ, ಆಚರಣೆಗಳಲ್ಲಿ ವೈಜ್ಞಾನಿಕ ಹಿನ್ನೆಲೆ ಒಳಗೊಂಡಿರುವುದೇ ಇದಕ್ಕೆ ಮೂಲ ಕಾರಣವಾಗಿದೆ. 'ಆಟಿ ಅಮಾವಾಸ್ಯೆಯ ಒಂದು ನೆನಪು' ಎಂಬ ಲೇಖನವು ಮೇಲೆ ಹೇಳಿದ ಅಂಶಗಳಿಗೆ ಪೂರಕವಾಗಿದೆ. ಆಡಂಬರದ ಆಚರಣೆ ಹಬ್ಬಗಳ ತಿರುಳಲ್ಲ; ಅವುಗಳು ಪ್ರತಿಪಾದಿಸುವ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕೊಡು - ಕೊಳ್ಳುವಿಕೆಯ ಮೂಲಕ ಸಹಬಾಳ್ವೆ ನಡೆಸಬೇಕಾದ ಅಗತ್ಯವನ್ನು ಹಬ್ಬಗಳು ನಮಗೆ ತಿಳಿಸುತ್ತವೆ.

ಜನಪದರು ತಾವು ಕಂಡುಂಡ ನೋವು ನಲಿವು, ಜೀವನಾನುಭವ ಹಾಗೂ ಆಚಾರ ಕಟ್ಟುಪಾಡುಗಳನ್ನು ತಮ್ಮದೇ ಆದ ಭಾಷೆ ಮತ್ತು ಶೈಲಿಯಲ್ಲಿ ಅಭಿವ್ಯಕ್ತಪಡಿಸಿದ್ದು, ಅದು ಜನಪದ ಸಾಹಿತ್ಯವೆಂದೆನಿಸಿದೆ. ಈ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಜನಪದ ಗೀತೆಗೆ ಅಗ್ರಸ್ಥಾನವಿದೆ. 'ಸುತ್ತೆಲ್ಲ ಜನಪದ ಹಾಡಿರಲಿ' ಎಂಬ ಈ ಜನಪದ ಗೀತೆಯಲ್ಲಿ ತಾಯಿ - ತವರು ಮತ್ತು ಇತರ ಜೀವನ ಮೌಲ್ಯಗಳ ಸುಂದರ ಚಿತ್ರಣವಿದೆ.

ಯಾವುದೇ ಚಿಕ್ಕಪುಟ್ಟ ಘಟನೆಗಳು ಸೃಜನಾತ್ಮಕ ಸಾಹಿತ್ಯ ಪ್ರಕಾರಗಳಾಗಿ ಹೊರಹೊಮ್ಮಿ, ಸಹೃದಯರ ಮನವನ್ನು ಅರಳಿಸುವ ಮೂಲಕ ಸುಸಂಸ್ಕೃತ ಸಮಾಜದ ಸೃಷ್ಟಿಗೆ ನಾಂದಿ ಹಾಡಬಲ್ಲವು. ನಿವೃತ್ತಿ ಜೀವನದ ಒಂದು ಸನ್ನಿವೇಶವನ್ನು ಆಧರಿಸಿ ಪ್ರೊ. ಮಾಲತಿ ಪಟ್ಟಣಶೆಟ್ಟಿ ಅವರಿಂದ ರಚಿತವಾದ 'ಆಹಾ ಒಂದು ಕಪ್ಪು ಚಹಾ' ಎಂಬ ಬಾನುಲಿ ನಾಟಕವು - ಜನಮನವನ್ನು ಸೂರೆಗೊಳ್ಳುತ್ತದೆ. ಈ ನಾಟಕದ ಭಾಷಾ ಸೊಗಡು, ಬಾನುಲಿ ನಾಟಕ ತಂತ್ರಗಳಿಂದ ಸಾಹಿತ್ಯಕ ಘನತೆಯನ್ನು ಹೆಚ್ಚಿಸಿಕೊಂಡು ಶ್ರೋತೃಗಳ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಗಿದೆ.

# ಯೋಧ ಮತ್ತು ಹೆಂಗಸು

ಸು. ರಂ. ಎಕ್ಕುಂಡಿ



ಉರಿಬಿಸಿಲು ಕೆಂಪು ಹುಡಿ. ಮೈತುಂಬ ಧೂಳಿಡಿಗಿ
ಕುದುರೆಯಿಳಿದನು ಯೋಧ ಜನರ ಕಂಡು
'ನೀರು ಹಣಿಸುವಿರ ತುಸು' ಅಂದಿರಲು ಹೆಂಗಸು
ಬೇಗ ಬಂದಳು ಮಡಕೆ ತುಂಬಿಕೊಂಡು

'ಬಳಲಿದಿರಿ, ಪಾಪ. ಬನ್ನಿರಿ ಒಳಕೆ ವಿಶ್ರಮಿಸಿ'
ಚಾಪೆಯನು ಹಾಸಿದಳು ಕೂತುಕೊಳಲು
'ಇರಲಿ ಬಿಡಿ. ಈ ಮರದ ನೆರಳಲ್ಲಿ ಕೂಡುವೆನು
ತಂಪಾಗಿ ತಬ್ಬಿರುವವಿದರ ಹೆಳಲು'

'ಬಟ್ಟಲಿನ ತುಂಬ ಇದೆ ಜೇನು. ಈ ಚೊಂಬಿನಲಿ
ತಣ್ಣಗಿನ ನೀರು ಇದೆ, ತೆಗೆದುಕೊಳ್ಳಿ
ಇಲ್ಲಿಹುದು ಬೀಸಣಿಕೆ, ಬಹಳ ಸೆಕೆ ಅಲ್ಲವೆ?
ಇದರಿಂದ ಗಾಳಿಯನು ಬೀಸಿಕೊಳ್ಳಿ'

ಆಗ ಒಮ್ಮೆಲೆ ಬೀಸಿ ಬಂತು ತೆಂಕಣ ಗಾಳಿ
ದೂರವೆಲ್ಲೋ ಕೇಳಿಬಂತು ಹಾಡು
ಮಾವಿನೆಳಚಿಗುರಿನಲಿ ಚಿಮ್ಮಿ, ಪಯಣಿಗನೆಂದ
'ಇದಕೆ ಜೋಳದ ಪಾಳಿಯಿಲ್ಲ ನೋಡು'

ಜೇನು ಸವಿದನು ನೀರು ಕುಡಿದು ಮೈಯೊಡ್ಡಿದನು.
ತುಸು ಹೊತ್ತು ತಂಬೆಲರ ನೆರಳಿಗೆಂದು
ಎದ್ದು ಕುದುರೆಗೆ ಥಡಿಯ ಹಾಕಿ ಅಣಿಗೊಳಿಸಿದನು
ಮತ್ತೆ ದೂರದ ತನ್ನ ಪಯಣಕೆಂದು

'ಹೋಗಿ ಬರುವೆನು ತಾಯಿ' ಎಂದು ಕವಚವ ತೊಟ್ಟು
ಖಡ್ಗವನು ಬಿಗಿದಿಟ್ಟ ಟೊಂಕದಲ್ಲಿ
ಹೆಂಗಸೆಂದಳು, 'ಆಯ್ತು ಹೋಗಿ ಬನ್ನಿರಿ ಮತ್ತೆ
ಬಂದಾಗ ಬರಬೇಕು ನೀವು ಇಲ್ಲಿ'.

'ಮರೆತುಬಿಟ್ಟೆನು ನಿಮ್ಮ ಹೆಸರು ಕೇಳಲು. ನೀವು
ನಡೆದ ದಾರಿಗೆ ಇರಲಿ ಶುಭದ ನೆರಳು
ಬಿರಿದ ಮಲ್ಲಿಗೆ ಕಂಡು, ಕೋಗಿಲೆಯ ದನಿ ಕೇಳಿ
ತುಂಬಿ ಬಂದಿತ್ತೇಕೆ ಕಣ್ಣು, ಕೊರಳು ?'

ಯೋಧ ನುಡಿದನು 'ತಾಯಿ ಮತ್ತೆ ನೆನಪಿಗೆ ಬಂತು
ನನ್ನೂರು ಬನವಾಸಿ ನನಗೆ ಇಂದು
ಯೋಧ ನಡೆಯುವ ದಾರಿ ಕವಿಯ ದಾರಿಯೂ ಕೂಡ.
ನನ್ನನ್ನು ಕರೆಯುವರು ಪಂಪನೆಂದು'.



**ಸು.ರಂ. ಎಕ್ಕುಂಡಿ :** ಇವರ ಪೂರ್ಣ ಹೆಸರು ಸುಬ್ಬಣ್ಣ ರಂಗನಾಥ ಎಕ್ಕುಂಡಿ. ಇವರು 1923 ಜನವರಿ 20ರಂದು ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ಜನಿಸಿದರು. ಆನಂದತೀರ್ಥರು, ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಕಥನ ಕವನಗಳು, ಬಕುಳದ ಹೂವುಗಳು ಎಂಬ ಕವನಸಂಕಲನಗಳನ್ನು ರಚಿಸಿದ್ದಾರೆ. ಪ್ರತಿಬಿಂಬಗಳು ಮತ್ತು ರಷ್ಯನ್ ನ ಎರಡು ಕಾದಂಬರಿಗಳನ್ನು ಇವರು ಅನುವಾದಿಸಿದ್ದಾರೆ. ಸೋವಿಯತ್‌ಲ್ಯಾಂಡ್ ನ ನೆಹರು ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಹಾಗೂ ಅತ್ಯುತ್ತಮ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಯನ್ನು ಪಡೆದಿರುವರು. ಶ್ರೀಯುತರು 1995 ಆಗಸ್ಟ್ 20ರಂದು ನಿಧನರಾದರು. ಪ್ರಸ್ತುತ ಕವಿತೆಯನ್ನು ಸು.ರಂ. ಎಕ್ಕುಂಡಿ ಅವರ 'ಸಮಗ್ರ ಕಥನ ಕವನಗಳು' ಎನ್ನುವ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ನವೀನ ಪದಗಳ ಅರ್ಥ

ಧೂಳಿಡಿಗಿ - ಧೂಳು ಹಿಡಿದ. ಹಣಿಸು - ಚಿಮುಕಿಸು, ಸುರಿ. ಹೆಳಲು - ಬಿಳಲು, ಬಳ್ಳಿ. ಬೀಸಣಿಕೆ - ಗಾಳಿ ಬೀಸಿಕೊಳ್ಳುವ ವಸ್ತು. ತೆಂಕಣ – ದಕ್ಷಿಣ. ಜೋಳ – ಒಂದು ಬಗೆಯ ಧಾನ್ಯ. ಎಲರ್ (ಎಲರು) - ಗಾಳಿ. ತಂಬೆಲರ್ - ತಂಪಾದ ಗಾಳಿ. ಅಣಿಗೊಳಿಸು - ಸಿದ್ಧಗೊಳಿಸು, ತಯಾರುಮಾಡು. ಥಡಿ - ಜೀನು, ಕುದುರೆಯ ಮೇಲೆ ಸವಾರಿ ಮಾಡುವವರಿಗೆ ಕುಳಿತುಕೊಳ್ಳಲು ಅನುಕೂಲವಾಗುವಂತೆ ತಯಾರಿಸಿದ ಆಸನ ವ್ಯವಸ್ಥೆ. ಪಯಣ – ಸಂಚಾರ, ಪ್ರಯಾಣ. ಕವಚ – ಹೊದಿಕೆ, ಉಕ್ಕಿನ ಅಂಗಿ. ಟೊಂಕ – ಸೊಂಟ.

## ವಿಶದೀಕರಣ

**ಜೋಳದ ಪಾಳಿ - ಜೋಳವಾಳಿ - ಅನ್ನದ ಋಣ -** 'ಜೋಳದ ಪಾಳಿ' ಎಂಬುದರ ಅರ್ಥವು 'ಜೋಳವಾಳಿ' ಎಂಬ ಪದಕ್ಕೆ ಸಮಾನವಾಗಿದೆ. ಕರಾವಳಿ ಭಾಗದಲ್ಲಿ ಇದನ್ನು 'ಅನ್ನದ ಋಣ' ಎಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಮತ್ತೊಬ್ಬರಿಂದ ಆಹಾರ ಅಥವಾ ಜೀವನೋಪಾಯವನ್ನು ಪಡೆಯುವ ಮೂಲಕ ಅವರ ಕಡೆಗೆ ಹೊಂದಿರುವ ಋಣ ಅಥವಾ ಕೃತಜ್ಞತೆಯ ಭಾವವನ್ನು ಸೂಚಿಸುತ್ತದೆ.

**ಬನವಾಸಿ** - ಕರ್ನಾಟಕದ ಶಿರಸಿಗೆ ಸಮೀಪದ ಸ್ಥಳವಿದು. ಬನವಾಸಿಯು ಕ್ರಿ.ಪೂ. ಕಾಲದಲ್ಲಿಯೇ ಅತ್ಯಂತ ಪ್ರಸಿದ್ಧಿ ಪಡೆದಿತ್ತು. ರಾಜ ಅಶೋಕನ ಕಾಲದ ಬೌದ್ಧ ಗ್ರಂಥಗಳಲ್ಲೂ ಈ ಸ್ಥಳದ ಹೆಸರು ಉಲ್ಲೇಖವಾಗಿದೆ. ಕ್ರಿ.ಶ. ಒಂದನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಬಂದ ಗ್ರೀಕ್ ಪ್ರವಾಸಿ ಟಾಲೆಮಿಯು ತನ್ನ ಪ್ರವಾಸ ಕಥನದಲ್ಲಿ ಬನವಾಸಿಯ ಉಲ್ಲೇಖ ಮಾಡಿದ್ದಾನೆ. ಕದಂಬ ವಂಶದವನಾದ ಮಯೂರವರ್ಮನು ಪ್ರಕೃತಿ ರಮಣೀಯವಾದ ಬನವಾಸಿಯನ್ನು ತನ್ನ ಸಾಮ್ರಾಜ್ಯದ ರಾಜಧಾನಿಯನ್ನಾಗಿಸಿದ್ದನು. ಶತಮಾನಗಳ ಬಳಿಕ ಅಂದರೆ ಹತ್ತನೆಯ ಶತಮಾನದಲ್ಲಿ ಹುಟ್ಟಿ ಬಂದ 'ಆದಿಕವಿ'ಯೆಂದು ಪ್ರಸಿದ್ಧನಾದ 'ಪಂಪಮಹಾಕವಿ'ಯು ಬನವಾಸಿಯ ಪ್ರಕೃತಿ ರಮಣೀಯತೆಯನ್ನು ಕಂಡು ಮೈಮರೆತು ಹಾಡಿದನು. "ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ" ಎಂಬುದು ಪಂಪಮಹಾಕವಿಯು ತನ್ನ 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಹೇಳಿರುವ ಮಾತು. ಬನವಾಸಿಯ ಮೇಲಿನ ಕವಿಯ ಅಗಾಧವಾದ ಪ್ರೀತಿಯನ್ನು ಇದು ಸೂಚಿಸುತ್ತದೆ. 'ಯಾರು ತಡೆದರೂ ನನ್ನ ಮನಸ್ಸು ಸದಾ ಕಾಲ ಬನವಾಸಿ ದೇಶವನ್ನು ನೆನೆಯುತ್ತದೆ' ಎಂಬುದು ಈ ಮಾತಿನ ಅರ್ಥ. 'ಪ್ರಕೃತಿ ರಮಣೀಯತೆ, ಜನರ ಸನ್ಮನಸ್ಸಿನ ಶ್ರೀಮಂತಿಕೆ ಮತ್ತು ಸಂಗೀತದ ಸೊಬಗಿನಲ್ಲಿ ಇರುವ ಬನವಾಸಿಯಲ್ಲಿ ಮನುಷ್ಯನಾಗಿಯಲ್ಲದಿದ್ದರೆ ಮರಿದುಂಬಿಯಾಗಿಯಾದರೂ ಮುಂದಿನ ಜನ್ಮದಲ್ಲಿ ಹುಟ್ಟುತ್ತೇನೆ' ಎಂಬ ಪಂಪ ಕವಿಯ ಮಾತುಗಳಿಂದ ಬನವಾಸಿಯ ಹಿರಿಮೆಯನ್ನು ತಿಳಿಯಬಹುದು.

**ಯೋಧ ನಡೆಯುವ ದಾರಿ ಕವಿಯ ದಾರಿಯೂ ಕೂಡ -** ಹಿಂದಿನ ಕಾಲದ ಕೆಲವು ಕವಿಗಳಿಗೆ ರಾಜಾಶ್ರಯವಿತ್ತು. ಅವರು ಕಲಿಗಳೂ (ವೀರರೂ) ಕವಿಗಳೂ ಆಗಿದ್ದರು. ಅವರು ನಾಡಿನ ರಕ್ಷಣೆಗೆ ಕಂಕಣಬದ್ಧರಾಗಿದ್ದರು. ತಮ್ಮ ಕಾವ್ಯ- ಕೃತಿಗಳ ಮೂಲಕ ಸಾಮಾಜಿಕ ಬದಲಾವಣೆಯ ಹರಿಕಾರರೂ ಆಗಿದ್ದರು. ಆದ್ದರಿಂದ ಯೋಧರು ಹಾಗೂ ಕವಿಗಳು ಕನ್ನಡ ನಾಡಿನ ಜನತೆಯ ಗೌರವಕ್ಕೆ ಪಾತ್ರರಾಗಿದ್ದರು. 'ಕತ್ತಿ ಹಿಡಿದರೆ ಕಲಿ; ಕಂಠ ಹಿಡಿದರೆ ಕವಿ' ಎಂದು ಆದಿಕವಿ ಪಂಪನ ಕುರಿತಾದ ವಿಮರ್ಶಕರ ಮಾತು ಮೇಲಿನ ಹೇಳಿಕೆಗೆ ಪುಷ್ಟಿ ನೀಡುತ್ತದೆ.

## ಉತ್ತರಿಸಿರಿ

1. ಯೋಧನು ಜನರನ್ನು ಕಂಡು ಏನೆಂದು ಕೇಳಿದನು?
2. ಹೆಂಗಸು ಯೋಧನನ್ನು ಉಪಚರಿಸಿದ ಬಗೆಯನ್ನು ಬರೆಯಿರಿ.
3. ಯೋಧನು ತನ್ನ ಯಾತ್ರೆಯ ಆಯಾಸವನ್ನು ಹೇಗೆ ಪರಿಹರಿಸಿಕೊಂಡನು?
4. 'ಇದಕ್ಕೆ ಜೋಳದ ಪಾಳಿಯಿಲ್ಲ ನೋಡು' ಎಂದು ಯೋಧನು ಹೇಳಲು ಕಾರಣವೇನು?
5. ಹೆಂಗಸು ಯೋಧನನ್ನು ಏನೆಂದು ಹಾರೈಸಿದಳು?
6. 'ಬಿರಿದ ಮಲ್ಲಿಗೆ ಕಂಡು, ಕೋಗಿಲೆಯ ದನಿ ಕೇಳಿ' ಯೋಧನ ಕಣ್ಣು, ಕೊರಳು ತುಂಬಿಕೊಳ್ಳಲು ಕಾರಣವೇನು?

## ಆಶಯ ಬರಹ

'ಯೋಧ ಮತ್ತು ಹೆಂಗಸು' ಕವನದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರಹ

ಕೆಳಗೆ ಕೊಟ್ಟಿರುವ ಕವನದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಆಗ ಒಮ್ಮೆಲೆ ಬೀಸಿ ಬಂತು ತೆಂಕಣ ಗಾಳಿ<br>
ದೂರವೆಲ್ಲೋ ಕೇಳಿಬಂತು ಹಾಡು<br>
ಮಾವಿನೆಳಚಿಗುರಿನಲಿ ಚಿಮ್ಮಿ, ಪಯಣಿಗನೆಂದ<br>
'ಇದಕೆ ಜೋಳದ ಪಾಳಿಯಿಲ್ಲ ನೋಡು'

## ರೂಪ ಪರಿವರ್ತನೆ

ಕವಿತೆಯಲ್ಲಿ ಬಂದಿರುವ ಯೋಧ ಮತ್ತು ಹೆಂಗಸಿನ ನಡುವಿನ ಮಾತುಕತೆಯನ್ನು ಸಂಭಾಷಣಾ ರೂಪಕ್ಕೆ ಪರಿವರ್ತಿಸಿರಿ.

## ಟಿಪ್ಪಣಿ ಬರಹ

ನಿಮ್ಮ ಮನೆಗೆ ಅತಿಥಿಗಳು ಬಂದರೆ ನೀವು ಅವರನ್ನು ಹೇಗೆ ಸತ್ಕರಿಸುವಿರಿ? ನಿಮ್ಮ ಅನುಭವವನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

## ಸಮಾಸ

ಎರಡು ಅಥವಾ ಅನೇಕ ಪದಗಳು ಅರ್ಥಕ್ಕನುಸಾರವಾಗಿ ಅನ್ಯೋನ್ಯವಾಗಿ ಸೇರುವುದನ್ನು ಸಮಾಸ/ಸಮಸ್ತ ಪದ ಎನ್ನುವರು. ಸಮಸ್ತ ಪದವನ್ನು ಬಿಡಿಸಿ ಬರೆಯುವುದಕ್ಕೆ ವಿಗ್ರಹವಾಕ್ಯ ಎನ್ನುವರು.

**ಕ್ರಿಯಾ ಸಮಾಸ**

ಮೈಯನ್ನು ಒಡ್ಡು - ಮೈಯೊಡ್ಡು

ಕೈಯನ್ನು ಮುಗಿ - ಕೈಮುಗಿ

ಕಣ್ಣನ್ನು ತೆರೆ - ಕಣ್ದೆರೆ

ಈ ಮೇಲಿನ ಉದಾಹರಣೆಗಳಲ್ಲಿ ಪೂರ್ವಪದವು ನಾಮಪದವಾಗಿದೆ. ಉತ್ತರಪದವು ಕ್ರಿಯೆಯನ್ನು ಸೂಚಿಸುವ ಪದವಾಗಿದೆ. ಹೀಗೆ ನಾಮಪದವೂ ಕ್ರಿಯಾಪದವೂ ಸೇರಿ ಆಗುವ ಸಮಾಸವನ್ನು ಕ್ರಿಯಾಸಮಾಸ ಎನ್ನುವರು.

**ಕೆಳಗಿನ ಪದಗಳನ್ನು ವಿಗ್ರಹಿಸಿ ಬರೆಯಿರಿ**

ಬಾಯ್ದೆರೆ, ತಲೆಬಾಗು, ನೀರುಣಿಸು, ತಲೆಗೊಡವು, ಮೈದೊಳೆದು

# ಆಟಿ ಅಮಾವಾಸ್ಯೆಯ ಒಂದು ನೆನಪು

ವಿಭಾ ಕೃಷ್ಣಪ್ರಕಾಶ ಉಳಿತ್ತಾಯ



ಆಟಿ ಅಮಾವಾಸ್ಯೆ, ಆಷಾಢ ಅಮಾವಾಸ್ಯೆ, ಭೀಮನ ಅಮವಾಸ್ಯೆ ಎಂದು ನಾನಾ ಹೆಸರುಗಳಿಂದ ಕರೆಸಿಕೊಳ್ಳುವ ಮಳೆಗಾಲದಲ್ಲಿ ಬರುವ ದಿನವೊಂದನ್ನು ಮರೆಯುವುದುಂಟೆ? ಅದನ್ನು ಮರೆತರೆ ಸಕ್ಕರೆಯ, ಬೆಲ್ಲದ ಅಸ್ತಿತ್ವವನ್ನು ಮರೆತಂತೆಯೇ ಸರಿ. ತುಳುನಾಡಿನಲ್ಲಿ ಆಷಾಢ ಮಾಸದಲ್ಲಿ ಬರುವ ಈ ಅಮಾವಾಸ್ಯೆಯನ್ನು ಆಟಿಯ ಅಮಾವಾಸ್ಯೆ ಎಂದು ಕರೆಯುತ್ತಾರೆ. ಇರಲಿ, ಇದು ಎಲ್ಲರಿಗೂ ಗೊತ್ತಿರುವ ವಿಷಯ ಅಲ್ಲವೇ ಎಂದುಕೊಳ್ಳುತ್ತಿದ್ದೀರಾ? ಅಂದು ಮುಂಜಾನೆ ಇನ್ನೂ ಸೂರ್ಯ ತನ್ನ ಮುಖಾರವಿಂದವನ್ನು ತೋರುವ ಮೊದಲೇ ಹಾಲೆ ಮರದ ತೊಗಟೆಯನ್ನು ತರಬೇಕು, ಅದರಲ್ಲೂ ಹಲವಾರು ಕ್ರಮಗಳಿವೆಯಂತೆ, ಕಲ್ಲಲ್ಲಿ ಜಜ್ಜಿ ಜಜ್ಜಿ ಮರದ ತೊಗಟೆ ತೆಗೆಯಬೇಕಂತೆ. ಅಬ್ಬಾ! ನನಗೆ ಅಷ್ಟೆಲ್ಲ ತಾಳ್ಮೆ ಇಲ್ಲ. ನಮ್ಮ ಮನೆಯ ಎದುರಿಗೆ ಇರುವ ಅಡಕೆ ತೋಟದ ಮಧ್ಯೆ ವಿರಾಜಮಾನವಾಗಿರುವ ಹಾಲೆಮರ ಆಸುಪಾಸಿನ ಮನೆಯವರಿಗೆಲ್ಲಾ ಅಂದಿನ ದಿವ್ಯ ಔಷಧವನ್ನು ಉಣಬಡಿಸುವ ದೇವತೆ.

ನಾನೊಂದು ವರ್ಷ ತೊಗಟೆ ತೆಗೆಯಲು ಕತ್ತಿಯನ್ನು ಹುಡುಕುತ್ತಿದ್ದಾಗ ಅತ್ತೆಯ ಕೈಗೆ ಸಿಕ್ಕಿಬಿದ್ದು ಬುದ್ದಿವಾದ ಹೇಳಿಸಿಕೊಂಡು, ಬೇರೆ ಉಪಾಯವಿಲ್ಲದೆ ಅವರು ಕೊಟ್ಟ ಬಿಳಿಯದಾದ ಗುಂಡುಕಲ್ಲನ್ನು ನನ್ನ ತಲೆಗೆ ಚಚ್ಚಿಕೊಳ್ಳುತ್ತಾ ತೋಟಕ್ಕೆ ಹೋದೆ. ಮರ ನೋಡಿದಾಗ ಮಹದಾನಂದವಾಯಿತು. ಮರದ ಅರ್ಧ ಅಂಗಿಯನ್ನು ಆಚೆ - ಈಚೆ ಮನೆಯವರು ಕಳಚಿಯಾಗಿತ್ತು. ನಾನು ಅನಾಯಸವಾಗಿ ಕಲ್ಲಿನ ಸಹಾಯವಿಲ್ಲದೆ ತೊಗಟೆಯನ್ನುಮೆಲ್ಲಮೆಲ್ಲನೆ ತೆಗೆದು ತಂದೆ. ಇದು ಪ್ರತಿವರ್ಷವು ನಡೆಯುವ ಕಾರ್ಯಕ್ರಮ. ಆದರೆ ಇತ್ತೀಚಿನ ವರ್ಷಗಳಲ್ಲಿ ನಾನು ಸ್ವಲ್ಪ ಕುಶಾಗ್ರಮತಿಯಾಗಿದ್ದೇನೆ. ಕಲ್ಲು ತೆಗೆದುಕೊಂಡು ಹೋಗುವ ಬದಲು ಬೆಳಗ್ಗೆ ಬೇಗನೆ ಎದ್ದು ಸಿಟೌಟ್‌ನಲ್ಲಿ ಹೊಂಚು ಹಾಕುತ್ತಾ ಕುಳಿತಿರುತ್ತೇನೆ. ಒಂದೊಂದೇ ಟಾರ್ಚು ಲೈಟುಗಳು ಮರದ ಬುಡಕ್ಕೆ ಬರುವುದು ಕಾಣುತ್ತದೆ. ಆ ಟಾರ್ಚು

ಯಾವ ಮನೆಯಿಂದ ಬಂದಿರುವುದು ಎಂದು ಗೊತ್ತಿರುತ್ತದೆ. ಹಾಗಾಗಿ ಆ ಮನೆಯವರ ಹೆಸರನ್ನು ಹೇಳುತ್ತಾ 'ಅಣ್ಣಾ... ನಂಗೂ ಒಮ್ಮೆ ಕಲ್ಲು ಕೊಡಿ. ನಾನು ಒಂದು ಕೆತ್ತೆ (ತೊಗಟೆ) ತೆಗೆಯುತ್ತೇನೆ' ಎಂದು ಅತಿ ವಿನಯದಿಂದ ಹೇಳುತ್ತೇನೆ. ಅದಕ್ಕವರು 'ಅಕ್ಕಾ, ನೀವು ಅಲ್ಲೇ ನಿಲ್ಲಿ, ಇಲ್ಲಿ ತುಂಬಾ ಕೆಸರಿದೆ. ನಾನೇ ಒಂದು ಕೆತ್ತೆ (ತುಂಡು) ತಂದು ಕೊಡುತ್ತೇನೆ' ಎಂದು ದಿವ್ಯ ಔಷಧವನ್ನು ನನ್ನ ಕೈಗೆ ಹಸ್ತಾಂತರಿಸುತ್ತಾರೆ. ನಾನದನ್ನು ಹೊತ್ತುತಂದು ಇನ್ನೂ ನಿದ್ದೆ ಕಣ್ಣಿನಲ್ಲಿರುವ ಪತಿರಾಯರಿಗೆ ತೋರಿಸುತ್ತಾ, "ನೋಡಿ ನಾನು ಕೆಸರಿನಲ್ಲಿ ತೋಟಕ್ಕೆ ಹೋಗಿ ಮದ್ದು ತಂದಾಯಿತು, ನೀವಿನ್ನೂ..." ಎಂದು ಮಾತಿನಲ್ಲಿ ತಿವಿಯಲು ಪ್ರಾರಂಭಿಸುತ್ತೇನೆ. ಬೇರೆ ವಿಧಿ ಇಲ್ಲದೆ ಅವರು ಎದ್ದು ನಿತ್ಯ ಕರ್ಮಗಳಿಗೆ ತೊಡಗಿಕೊಳ್ಳುತ್ತಾರೆ. ಅಷ್ಟು ಹೊತ್ತಿಗೆ ನನ್ನತ್ತೆ ತೊಗಟೆಯನ್ನು ಗುದ್ದಿ ಗುದ್ದಿ ...ಆಹಾ! ಕಹಿಯಾದ ಕಷಾಯ ಸಿದ್ಧಮಾಡಿ ದೇವರ ಮುಂದಿಡುತ್ತಾರೆ. ನಾವು ಒಬ್ಬೊಬ್ಬರೇ ದೇವರಿಗೆ ನಮಸ್ಕರಿಸಿ ಕಣ್ಣುಮುಚ್ಚಿ, ಸಾಧ್ಯವಾದಷ್ಟೂ ಬಾಯಿ ಅಗಲಿಸಿ ಡೈರೆಕ್ಟ್ ಜಠರಕ್ಕೆ ಅದನ್ನು ಇಳಿಸುವಂತೆ ಎಷ್ಟು ಸಾಧ್ಯವೋ ಅಷ್ಟು ಗಂಟಲಿನ ಆಳಕ್ಕೆ ಹೊಯ್ದುಕೊಂಡು ಬಿಡುತ್ತೇವೆ. ಎರಡು ವರ್ಷದಿಂದ ಮಕ್ಕಳಿಗೆ ಈ ಕಹಿ ಮದ್ದನ್ನು ಕುಡಿಸಲು ಸಾಧ್ಯವಾಗದೆ ಸೋತು ಸುಣ್ಣವಾಗಿದ್ದೆ. ಏನಾದರೂ ಮಾಡಿ ಈ ಬಾರಿ ಹಾಲೆ ಮರದ ಮದ್ದು ಕುಡಿಸಲೇಬೇಕೆಂದು ನನಗೆ ನಾನೇ ಶಪಥ ಹಾಕಿಕೊಂಡೆ. ಶಪಥ ಹಾಕಿದರೆ ಸಾಕೇ? ಮಾಡಬೇಕಾದ ಕಾರ್ಯ ಮಾಡಲೇಬೇಕಲ್ಲವೇ? ಯೋಚಿಸುತ್ತಿರುವಾಗಲೇ ನನಗೆ ಹೊಳೆದದ್ದು ನನ್ನ ಮಕ್ಕಳ ಒಂದು ವೀಕ್ನೆಸ್. ಆಹಾ ಇದನ್ನೇ ಸದುಪಯೋಗಪಡಿಸಿಕೊಳ್ಳುವೆ ಎಂದು ತೀರ್ಮಾನಿಸಿದೆ.

ಎಲ್ಲಾ ಮಕ್ಕಳಿಗೂ ಕತೆಯೆಂದರೆ ಬಲುಪ್ರೀತಿ. ಶಾಲೆಯಲ್ಲಿ ಹೆತ್ತವರ ಮಹಾಸಭೆಗೆ ಹೋದಾಗಲೂ ಶಾಲಾ ಮುಖ್ಯೋಪಾಧ್ಯಾಯರು ಇದನ್ನೇ ಒತ್ತಿ ಒತ್ತಿ ಹೇಳುತ್ತಿರುತ್ತಾರೆ. ಮಕ್ಕಳಿಗೆ ಸಾಧ್ಯವಾದಷ್ಟು ಕತೆ ಹೇಳಿ ಅದು ಅವರಲ್ಲಿ ಆ ಗುಣ, ಈ ಗುಣ ಎಂದು ಹತ್ತು ಹಲವಾರು ಗುಣಗಳ ಪಟ್ಟಿಯನ್ನು ಹೇಳಿ, ಮಕ್ಕಳಿಗೆ ಕಥೆಯನ್ನು ಹೇಳಿದರೆ ಇವೆಲ್ಲ ಗುಣಗಳು ಬರುತ್ತವೆ ಎಂದು ಪ್ರತಿಸಲ ಹೇಳುತ್ತಿರುತ್ತಾರೆ. ಹೌದಪ್ಪ, ಇವೆಲ್ಲ ನಮಗೆ ಗೊತ್ತಿರುವ ವಿಷಯವೇ ಆದರೂ ಕಥೆ ಹೇಳಲು ತಾಳ್ಮೆ ಮಾತ್ರ ಒಂದು ಚೂರು ಕಡಿಮೆ ಅಷ್ಟೇ. ನನ್ನ ಮಕ್ಕಳಿಗಂತೂ ಕತೆ ಎಂದರೆ ಸಾಕು ಅದರಿಂದ ಯಾವ ಕೆಲಸವನ್ನಾದರೂ ಅವರಿಂದ ಸಾಧಿಸಿಕೊಳ್ಳಬಹುದು. ರಾತ್ರಿ ಅಜ್ಜಿಯ ಬಳಿ ಎರಡು ಕತೆ, ಅಪ್ಪನ ಬಳಿ ಎರಡು ಕತೆ. ನನ್ನ ಒಂದು ಕತೆಯನ್ನು ಕಿವಿಯೊಳಗೆ ಇಳಿಸದೆ ಅವರು ನಿದ್ದೆ ಮಾಡಲಾರರು.

ಇಂತಿಪ್ಪ ನನ್ನ ಮಕ್ಕಳನ್ನು ಆಟಿ ಅಮಾವಾಸ್ಯೆಯಂದು ಬೆಳಗ್ಗೆ ಬೇಗನೆ ಎಬ್ಬಿಸಿದೆ. ಎಬ್ಬಿಸುವಾಗಲೇ ಹೇಳತೊಡಗಿದೆ. "ನೋಡಿ ಮಕ್ಕಳೇ, ಇವತ್ತು ಒಂದು ವಿಶೇಷ ದಿನ. ಇವತ್ತು ನಮ್ಮ ಮನೆಗೆ ತುಂಬಾ ದೇವರು ಬಂದು ಹೋದರು. ಗೊತ್ತುಂಟಾ? ನೀವು ಇನ್ನೂ ಎದ್ದಿಲ್ಲ ಅಲ್ವಾ?'' ಅಷ್ಟು ಹೇಳಿದ್ದೇ ತಡ ಇಬ್ಬರೂ ಅವರವರ ಇಷ್ಟ ದೇವತೆಗಳ ಹೆಸರು ಹೇಳಿ ಅವರು ಬಂದ್ರಾ, ಇವರು ಬಂದ್ರಾ? ಎಂದು ಕೇಳಲು ಪ್ರಾರಂಭಿಸಿದರು. ರೈಲು ಟ್ರ್ಯಾಕ್ ಮೇಲೆ ಸರಿಯಾಗಿಯೇ ಓಡುತ್ತಿದೆ ಎಂದು ನನಗೆ ಅನ್ನಿಸಿದ್ದೇ ತಡ ನಾನು ಮಾತನ್ನು ಮುಂದುವರಿಸಿದೆ. 'ಹೌದು ಎಲ್ಲರೂ ಬಂದು ಹೋದ್ರು. ನಿಮಗೆ ದೇವರ ಕೋಣೆಯಲ್ಲಿ ಮದ್ದು ಇಟ್ಟು ಹೋಗಿದ್ದಾರೆ. ಬೇಗ ಹೋಗಿ ಕುಡಿಬೇಕು. ನೀವು ಬೇಗ ಸ್ಟ್ರಾಂಗ್ ಆಗ್ತೀರಂತೆ' ಎಂದು ಹೇಳಿದ್ದೇ ತಡ ಹತ್ತು-ಹದಿನೈದು ದಿನದಿಂದ ಜ್ವರ, ಶೀತ, ಕಫ, ಕೆಮ್ಮು ಎಂದು ಮದ್ದು ಕುಡಿದು ಕುಡಿದು ಸುಸ್ತಾಗಿದ್ದ ಮಕ್ಕಳು 'ಮದ್ದಾ...?' ಎಂದು ಅಳುಮೋರೆ ಹಾಕಿದರು. ಆಗ ನನಗೆ ಚಾಲೆಂಜಿಂಗ್ ಸಿಚುವೇಶನ್. ಅದಕ್ಕೆ ನಾನು 'ಹೌದು ಮಕ್ಕಳೇ ಇವತ್ತು ವಿಶೇಷ

ದಿನ. ಇವತ್ತಿನ ದಿನ ಎಲ್ಲಾ ದೇವರು ದೇವತೆಗಳು ನಾವೆಲ್ಲ ಏಳುವ ಮೊದಲೇ ಹಾಲೆಮರ ಅಂತ ಒಂದು ಮರ ಇದೆ. ಆ ಮರಕ್ಕೆ ಬಂದು ಆಶೀರ್ವಾದ ಮಾಡ್ತಾರೆ. ಧನ್ವಂತರಿ ನಾರಾಯಣ ಮತ್ತು ಅಶ್ವಿನಿ ದೇವತೆಗಳು ಆ ಮರದ ಕಷಾಯದಲ್ಲಿ ನಮಗೆ ಕಾಣದಂತೆ ಬಂದು ಕುಳಿತುಕೊಳ್ಳುತ್ತಾರೆ. ಮತ್ತೆ ಅವರು ಆ ಮರಕ್ಕೆ ಆಶೀರ್ವಾದ ಮಾಡುತ್ತಾರೆ' ಎಂದು ಹೇಳುತ್ತಿದ್ದಂತೆ 'ಏನಂತ ಆಶೀರ್ವಾದ ಮಾಡ್ತಾರೆ ಅಮ್ಮ?' ಎಂದು ಮಕ್ಕಳು ಕೇಳಿದಾಗ ಅಬ್ಬ ದೇವರೇ ನನ್ನ ಸ್ವರಚಿತ ಕಥೆಯ ಬಗ್ಗೆ ಅವರಿಗೆ ಅನುಮಾನ ಬಂದಿಲ್ಲ, ಎಂಬ ಸಮಾಧಾನದಿಂದ ಕಥೆ ಮುಂದುವರಿಸತೊಡಗಿದೆ. "ಇವತ್ತಿನ ದಿನ ಆ ಮರದಲ್ಲಿ ಮಾಡಿದ ಕಷಾಯವನ್ನು ಯಾರೆಲ್ಲ ಕುಡಿಯುತ್ತಾರೆಯೋ ಅವರೆಲ್ಲ ದೇವರಿಗೆ ತುಂಬಾ ಇಷ್ಟ ಆಗ್ತಾರಂತೆ. ಅವರಿಗೆಲ್ಲ ದೇವರು ಒಳ್ಳೆಯದೇ ಮಾಡ್ತಾರಂತೆ. ದೇವರು ಒಳ್ಳೆಯ ಆರೋಗ್ಯ ಕೊಡ್ತಾರಂತೆ," ಎಂದು ಹೇಳಿ, "ನೀವು ಕೂಡ ಆ ಮದ್ದು ಕುಡಿತೀರಿ ಅಲ್ವಾ ಅಲ್ವಾ?" ಎಂದು ಕೇಳಿ ನನ್ನ ಮಾತನ್ನು ಮುಂದುವರಿಸತೊಡಗಿದೆ. "ದೇವರು ಹೇಳಿದ್ರು, ಆ ಮದ್ದು ಉಂಟಲ್ಲ. ಅದು ತುಂಬಾ ಕಹಿ ಅಂತೆ, ಕಹಿ ಕಷಾಯವನ್ನು ಯಾರು ಉಗುಳದೆ, ಅಳದೆ ಕುಡಿಯುತ್ತಾರೆಯೋ ಅವರಿಗೆ ಮಾತ್ರ ದೇವರು ಆಶೀರ್ವಾದ ಮಾಡುತ್ತಾರಂತೆ, ಇಲ್ಲಾಂದ್ರೆ ಶಾಪ ಕೊಡುತ್ತಾರಂತೆ" ಅಷ್ಟು ಹೇಳಿದ್ದೇ ತಡ ಮಕ್ಕಳು ನಾಲ್ಕೈದು ರಕ್ಕಸರ ಹೆಸರು ಹೇಳಿ ಅವರಿಗೆ ಶಾಪಕೊಟ್ಟ ಹಾಗೆಯಾ? ಇವರಿಗೆ ವರ ಕೊಟ್ಟ ಹಾಗೆಯಾ? ಎಂದು ಕೇಳತೊಡಗಿದರು. ನಾನು ಖುಷಿಯಿಂದ "ಹೌದು ಹೌದು" ಎಂದು ಮಂಡೆಯಾಡಿಸಿದೆ. ಇಷ್ಟು ಹೊತ್ತಿಗಾಗಲೇ ಅವರಿಗೆ ಗೊತ್ತಿಲ್ಲದಂತೆಯೇ ಸ್ನಾನ ಮಾಡಿಸಿ, ಅವರನ್ನು ದೇವರ ಕೋಣೆ ಮುಂದೆ ತಂದು ನಿಲ್ಲಿಸಿ ಆಗಿತ್ತು. ಅವರಿಗೆ ನನ್ನ ಮಾತಿನಲ್ಲಿ ಪೂರ್ಣ ನಂಬಿಕೆ ಬರಲು ಮತ್ತೊಮ್ಮೆ ಧನ್ವಂತರಿ ನಾರಾಯಣನಿಗೆ, ಅಶ್ವಿನಿ ದೇವತೆಗಳಿಗೆ ವಂದಿಸುವಂತೆ ಹೇಳಿದೆ. ಅದಾಗಲೇ ಅವರು ಈ ದೇವರ ಕೆಲಸಕಾರ್ಯಗಳನ್ನು ಅಜ್ಜಿ ಹೇಳಿದ ಕಥೆಗಳಿಂದ ಕೇಳಿ ತಿಳಿದುಕೊಂಡಿದ್ದರು. ಕಥೆಯ ಪ್ರಭಾವ ಜೋರಾಗಿಯೇ ಇತ್ತು. ಇಬ್ಬರೂ ನಾನು ಕೊಟ್ಟಷ್ಟೂ ಕಹಿ ಕಷಾಯವನ್ನು ಒಂದೇ ಗುಟುಕಿಗೆ ಕುಡಿದು ಮುಖವನ್ನು ವಿಚಿತ್ರ ಭಂಗಿಗೆ ತಂದು ನಿಲ್ಲಿಸಿದರು. ನಾನು ಕೈಯಲ್ಲಿ ಆಗಲೇ ಹಿಡಿದಿದ್ದ ಬೆಲ್ಲದ ತುಂಡನ್ನು 'ಗುಡ್ ಬಾಯ್ಸ್' ಎಂದು ಅವರ ಬಾಯೊಳಗೆ ತುರುಕಿಸಿ, 'ನಾನು ಸಾಧಿಸಿಯೇ ಬಿಟ್ಟೆ ; ಸಾಧಿಸಿಯೇ ಬಿಟ್ಟೆ' ಎಂದು ಹೆಮ್ಮೆ ಪಟ್ಟುಕೊಂಡೆ.

ಅಷ್ಟು ಹೊತ್ತಿಗೆ ನನ್ನತ್ತೆ ದೇವರ ಕೋಣೆಯೊಳಗೆ ಬಂದು ಏನೋ ಹುಡುಕಲು ಪ್ರಾರಂಭಿಸಿದರು. 'ಇಲ್ಲಿದ್ದ ಕಷಾಯ ಎಂತಾಯ್ತು?' ಎಂದು ನನ್ನನ್ನು ಕೇಳಿದಾಗ ನಾನು ಉತ್ಸಾಹಭರಿತಳಾಗಿ ಎಲ್ಲವನ್ನು ವಿವರಿಸಿದೆ. ಆಗ ಅವರು ಸಪ್ಪೆ ಮುಖ ಮಾಡಿ. "ಅಲ್ಲಮ್ಮ ನಿನಗೆ ಅಷ್ಟೂ ಗೊತ್ತಾಗುದಿಲ್ವ. ಅದರಲ್ಲಿ ಎಷ್ಟೊಂದು ಕಷಾಯ ಇತ್ತು. ನಾನು ಮತ್ತು ನಿನ್ನ ಮಾವ ಇನ್ನೂ ಕುಡಿದಿಲ್ಲ. ಅಷ್ಟನ್ನೂ ಆ ಚಿಕ್ಕಮಕ್ಕಳಿಗೆ ಕುಡಿಸಿದ್ಯಾ..? ಉಷ್ಣ ಆಗುದಿಲ್ವ ಅವುಗಳಿಗೆ? ಯಾವುದನ್ನು ಯಾರಿಗೆ ಎಷ್ಟು ಕೊಡಬೇಕೋ ಅಷ್ಟೇ ಕೊಡಬೇಕು" ಎಂದು ಹಣೆ ಚಚ್ಚಿಕೊಳ್ಳುತ್ತಾ ಒಳನಡೆದರು.

ಗಾಳಿಹೋದ ಬಲೂನಿನಂತೆ ಆಯಿತು ನನ್ನ ಸ್ಥಿತಿ. ಪತಿರಾಯರು ಸೋಫಾದಲ್ಲಿ ಕುಳಿತು ಇದನ್ನೆಲ್ಲಾ ನೋಡುತ್ತಾ ಪುಕ್ಕಟೆ ಮನರಂಜನೆ ತೆಗೆದುಕೊಳ್ಳುತ್ತಿದ್ದರು. 'ಅಲ್ಲ ಮಾರಾಯ್ತಿ ಎಲ್ಲಾ ದೇವರು ದೇವತೆಗಳು ಬಂದಿದ್ರಲ್ಲ, ಅವರಲ್ಲಿ ಮದ್ದು ಗುದ್ದಿದ್ದು ಯಾರು?' ಎಂದು ಕೇಳಿ ಗಾಯದ ಮೇಲೆ ಉಪ್ಪು ಸುರಿಯತೊಡಗಿದರು. ನಾನು ಏನೊಂದೂ ಮಾತನಾಡದೆ ಮೌನಕ್ಕೆ ಜಾರಿದೆ. ಅವರು ಮಕ್ಕಳಿಬ್ಬರನ್ನು ಕೂರಿಸಿಕೊಂಡು ಅಂದಿನ

ದಿನಪತ್ರಿಕೆಯನ್ನು ತೋರಿಸುತ್ತಾ ಆ ಮರದ ಬಗ್ಗೆ ಅದರಲ್ಲಿರುವ ಔಷಧೀಯ ಗುಣಗಳ ಬಗ್ಗೆ, ಅಂದಿನ ದಿನದ ವಿಶೇಷತೆ ಬಗ್ಗೆ ವಿವರಿಸುತ್ತಾ ಕುಳಿತರು. ಅವರ ಭಾಷಣ ಎಲ್ಲಾ ಮುಗಿದ ಮೇಲೆ ನಾನು ರಾಯರ ಬಳಿ ಹೋಗಿ "ಈ ಮರದ ಬಗ್ಗೆ ಮಕ್ಕಳಿಗೆ ನೀವೆಷ್ಟೇ ಪಾಠ ಮಾಡಿದರೂ ಇವತ್ತಿನ ಕಹಿ ಕಷಾಯ ಕುಡಿಸಿದ ನನ್ನ ಕಥೆ ನೆನಪಿರಲಿ" ಎಂದು ಹೇಳಿ ಒಳನಡೆದೆ.



**ವಿಭಾ ಕೃಷ್ಣಪ್ರಕಾಶ ಉಳಿತ್ತಾಯ (ಜನನ 17.10.1987) :** ಇವರು ಮೂಲತ: ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯವರು. ಕರ್ನಾಟಕದ ಯುವ ಬರಹಗಾರ್ತಿಯರಲ್ಲಿ ಒಬ್ಬರಾಗಿದ್ದಾರೆ. ವೃತ್ತಿಜೀವನದ ಆರಂಭದಲ್ಲಿ ಶಿಕ್ಷಕಿಯಾಗಿದ್ದ ಇವರು ಪ್ರಸ್ತುತ ಕರ್ಣಾಟಕ ಬ್ಯಾಂಕಿನ ಉದ್ಯೋಗಿಯಾಗಿದ್ದು ಮಂಗಳೂರಿನಲ್ಲಿ ನೆಲೆಸಿದ್ದಾರೆ. 'ಹೋಗೋಣ ಜಂಬೂ ಸವಾರಿ' ಇವರ ಲಲಿತ ಪ್ರಬಂಧಗಳ ಸಂಕಲನವಾಗಿದೆ. ಇವರ ಲಲಿತ ಪ್ರಬಂಧಗಳು ಹಾಗೂ ನಗೆಬರಹಗಳು ಉದಯವಾಣಿ, ಹೊಸದಿಗಂತ, ತುಷಾರ, ಮಂಜುವಾಣಿ, ಮಂಗಳ, ಅಭ್ಯುದಯ ಮುಂತಾದ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮಂಗಳೂರು ಆಕಾಶವಾಣಿಯಲ್ಲಿ ಇವರ ಲಲಿತಪ್ರಬಂಧಗಳು ಪ್ರಸಾರಗೊಂಡಿವೆ. ಪ್ರಸ್ತುತ ಪಾಠ ಭಾಗವನ್ನು 'ಹೋಗೋಣ ಜಂಬೂಸವಾರಿ' ಎಂಬ ಲಲಿತ ಪ್ರಬಂಧಗಳ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ನವೀನ ಪದಗಳ ಅರ್ಥ

ಮುಖಾರವಿಂದ – ಮುಖವೆಂಬ ಕಮಲ. ತೊಗಟೆ - ಮರದ ಸಿಪ್ಪೆ, ಮರದ ಹೊರಮೈ. ಕುಶಾಗ್ರಮತಿ - ಸೂಕ್ಷ್ಮಬುದ್ಧಿಯವನು, ಬುದ್ಧಿವಂತ. ಶಪಥ – ಪ್ರತಿಜ್ಞೆ. ಭಂಗಿ - ರೀತಿ. ಪುಕ್ಕಟೆ - ಸುಮ್ಮನೆ.

## ವಿಶದೀಕರಣ

**ಅಶ್ವಿನೀ ದೇವತೆಗಳು** - ಭಾರತೀಯ ಪುರಾಣಗಳ ಪ್ರಕಾರ ಸೂರ್ಯ ಹಾಗೂ ಸಂಜ್ಞಾದೇವಿಯ ಪುತ್ರರಾದ ಇವರು ಅವಳಿ ಸಹೋದರರಾಗಿರುವರು. ಇವರು ದೇವವೈದ್ಯರೆಂದು ಪ್ರಸಿದ್ಧರಾಗಿದ್ದಾರೆ. ದೇವತೆಗಳು ಹಾಗೂ ಋಷಿಮುನಿಗಳ ರೋಗಗಳನ್ನು ಗುಣಪಡಿಸುವುದಲ್ಲದೆ ಅವರಿಗೆ ಯೌವನವನ್ನು ನೀಡುವ ಶಕ್ತಿಯನ್ನು ಹೊಂದಿದ್ದಾರೆ.

**ಧನ್ವಂತರಿ** - ಪುರಾಣಗಳ ಪ್ರಕಾರ ಧನ್ವಂತರಿಯು ದೇವತೆಗಳ ವೈದ್ಯನೆಂಬ ಕಲ್ಪನೆಯಿದೆ. ಮಹಾವಿಷ್ಣುವಿನ ಅಂಶವೂ, ಅವತಾರವೂ ಆದ ಧನ್ವಂತರಿಯು ಆಯುರ್ವೇದದ ದೇವತೆಯೂ ಹೌದು. ಉತ್ತಮ ಆರೋಗ್ಯವನ್ನು ಬಯಸುವವರು ಧನ್ವಂತರಿಯ ಆರಾಧನೆ ಮಾಡುವ ಪ್ರತೀತಿಯೂ ಇದೆ.

**ಹಾಲೆಮರ** – ಸಪ್ತಪರ್ಣ, ಮದ್ದಾಲೆ ಎಂಬ ಹೆಸರಿನಿಂದಲೂ ಇದು ಗುರುತಿಸಲ್ಪಟ್ಟಿದೆ. Alstonia scholaris ಎಂಬುದು ಇದರ ವೈಜ್ಞಾನಿಕ ಹೆಸರು.

## ಉತ್ತರಿಸಿರಿ

1. ಆಟಿ ಅಮವಾಸ್ಯೆಯ ಹಬ್ಬದ ವಿಶೇಷತೆಗಳೇನು?

2. ಮದ್ದು ಕುಡಿಸುವ ಸಲುವಾಗಿ ಮಕ್ಕಳಿಗೆ ತಾಯಿ ಹೇಳಿದ ಕತೆ ಯಾವುದು?
3. ಮಕ್ಕಳಿಗೆ ಹಾಲೆ ಮರದ ಕಷಾಯವನ್ನು ಕುಡಿಸಲು ತಾಯಿಯು ಪಟ್ಟ ಪಾಡೇನು?
4. ಸೊಸೆಯ ಸ್ಥಿತಿಯು 'ಗಾಳಿಹೋದ ಬಲೂನಿನಂತೆ' ಆಗಲು ಕಾರಣವೇನು?

## ಸ್ವಾರಸ್ಯ ಬರಹ

ಹಾಲೆ ಮರದ ತೊಗಟೆಯನ್ನು ಲೇಖಕರು ತರಲು ಹೋದ ಘಟನೆಯ ಸ್ವಾರಸ್ಯವನ್ನು ಬರೆಯಿರಿ.

## ಟಿಪ್ಪಣಿ ಬರಹ

ನಿಮ್ಮ ಪರಿಸರದಲ್ಲಿರುವ ಔಷಧೀಯ ಗುಣಗಳುಳ್ಳ ಸಸ್ಯಗಳನ್ನು ಹಿರಿಯರ ಸಹಾಯದಿಂದ ಗುರುತಿಸಿ ಅವುಗಳ ಉಪಯೋಗದ ಕುರಿತು ಟಿಪ್ಪಣಿ ಬರೆದು ತರಗತಿಯಲ್ಲಿ ಮಂಡಿಸಿರಿ.

## ಲೇಖನ ತಯಾರಿ

ನಿಮಗೆ ತಿಳಿದಿರುವ ಯಾವುದಾದರೂ ಒಂದು ಆಚರಣೆಯ ಕುರಿತು ಲೇಖನವನ್ನು ಬರೆಯಿರಿ.

## ಚರ್ಚಾಗೋಷ್ಠಿ

'ಹಬ್ಬಗಳಲ್ಲಿರುವ ವೈಜ್ಞಾನಿಕ ಹಿನ್ನೆಲೆ' ಎಂಬ ವಿಷಯದ ಕುರಿತು ಚರ್ಚಾಗೋಷ್ಠಿಯನ್ನು ನಡೆಸಿರಿ. ಚರ್ಚೆಯಲ್ಲಿ ಮೂಡಿಬಂದ ಅಂಶಗಳ ಆಧಾರದಿಂದ ವರದಿಯನ್ನು ಸಿದ್ಧಪಡಿಸಿರಿ.

## ಪ್ರಬಂಧ ರಚನೆ

'ಹಬ್ಬಗಳು ಸಂಸ್ಕೃತಿಯ ಪ್ರತೀಕವಾಗಿವೆ.' - ಈ ವಿಷಯದ ಕುರಿತು ಪ್ರಬಂಧವೊಂದನ್ನು ಸಿದ್ಧಪಡಿಸಿರಿ.

## ದೇಶ್ಯ - ಅನ್ಯದೇಶ್ಯ ಪದ

ಯಾವುದೇ ಭಾಷೆಯು ನಿಂತ ನೀರಲ್ಲ. ಒಂದು ಭಾಷೆಯು ತನ್ನ ಸಂಪರ್ಕಕ್ಕೆ ಬಂದ ಅನ್ಯ ಭಾಷೆಗಳಿಂದ ಪದಗಳನ್ನು ಸ್ವೀಕರಿಸಿ ತನ್ನ ಭಾಷೆಯ ಜಾಯಮಾನಕ್ಕೆ ಹೊಂದಿಕೊಂಡು ಬಳಸಿಕೊಳ್ಳುತ್ತದೆ. ಈ ಕಾರಣದಿಂದ ಪ್ರತಿಯೊಂದು ಭಾಷೆಯಲ್ಲೂ ಅದರದ್ದೇ ಆದ ಮೂಲ ಪದಗಳು ಹಾಗೂ ಬೇರೆ ಭಾಷೆಯಿಂದ ಬಂದ ಪದಗಳು ಇರುತ್ತವೆ. ಒಂದು ಭಾಷೆಯ ಮೂಲ ಪದಗಳನ್ನು 'ದೇಶ್ಯ ಪದ' ಎಂದೂ, ಬೇರೆ ಭಾಷೆಯಿಂದ ಬಂದಿರುವ ಪದಗಳನ್ನು 'ಅನ್ಯದೇಶ್ಯ' ಪದ ಎಂದೂ ಕರೆಯುವರು.

**ಉದಾ :** ನೆಲ, ನೀರು, ಮಣ್ಣು, ಗುಡ್ಡ, ಮರ ಮೊದಲಾದವುಗಳು ದೇಶೀಯ ಪದಗಳಾಗಿವೆ.

ಸಾಬೂನು, ಕಾರ್ಖಾನೆ, ಮೇಜು, ಬಸ್ಸು, ದವಾಖಾನೆ ಮೊದಲಾದವುಗಳು ಅನ್ಯದೇಶೀಯ ಪದಗಳಾಗಿವೆ.

## ಪಟ್ಟಿ ಮಾಡಿರಿ

ಪಾಠಭಾಗದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಪಟ್ಟಿಮಾಡಿರಿ.

## ದ್ವಿರುಕ್ತಿ ಪದ

ಒಂದು ಪದವು ಎರಡು ಬಾರಿ ಜೊತೆಯಾಗಿ ಪ್ರಯೋಗವಾಗುವುದು ದ್ವಿರುಕ್ತಿ ಎಂದೆನಿಸುತ್ತದೆ.

**ಉದಾ :** ಹೌದು ಹೌದು, ಗುದ್ದಿ ಗುದ್ದಿ, ಕಟ್ಟ ಕಡೆ, ಮೊತ್ತ ಮೊದಲು, ಬೇಗ ಬೇಗ.

## ಜೋಡುನುಡಿ

ಅರ್ಥವತ್ತಾದ ಎರಡು ಪದಗಳು ಜೊತೆಯಾಗಿ ಬರುವುದನ್ನು ಜೋಡುನುಡಿ ಎನ್ನುವರು.

**ಉದಾ :** ಬಡವ ಬಲ್ಲಿದ, ಅಕ್ಕ ಪಕ್ಕ, ಕಾಡು ಮೇಡು, ನ್ಯಾಯ ನೀತಿ.

## ಪ್ರತಿಧ್ವನಿ ಪದ

ಕೆಲವು ಪದಗಳು ಜೋಡು ಪದಗಳಂತೆ ಕಂಡು ಬಂದರೂ ಆ ಪದಗಳಲ್ಲಿ ಮೊದಲ ಪದಕ್ಕೆ ನಿರ್ದಿಷ್ಟ ಅರ್ಥವಿದ್ದು ಎರಡನೆಯ ಪದಕ್ಕೆ ಅರ್ಥವಿರುವುದಿಲ್ಲ. ಇಂತಹ ಪದಗಳನ್ನು ಪ್ರತಿಧ್ವನಿ ಪದ ಎನ್ನುವರು

**ಉದಾ** : ಮಾಟೆ ಗೀಟೆ, ಪೆನ್ನು ಗಿನ್ನು, ಕಾಪಿ ಗೀಪಿ.

## ಅನುಕರಣ ಪದ

ಒಂದು ಕ್ರಿಯೆಯ ಅನುಕರಣೆಯನ್ನು ಸೂಚಿಸುವ ಪದಗಳು ಅನುಕರಣ ಪದಗಳಾಗಿವೆ.

**ಉದಾ :** ಸರಸರ, ಜುಳುಜುಳು, ಪಟಪಟ

## ನುಡಿಗಟ್ಟುಗಳು

ನುಡಿಗಟ್ಟುಗಳು ಪದದ ನೇರವಾದ ಅರ್ಥಕ್ಕಿಂತ ಭಿನ್ನವಾದ ವಿಶೇಷ ಅರ್ಥವನ್ನು ಧ್ವನಿಸುವುದರೊಂದಿಗೆ, ಜನರೂಢಿಯಲ್ಲಿ ವಿಶೇಷಾರ್ಥವುಳ್ಳ ಪದ ರಚನೆಗಳಾಗಿವೆ.

### 1. ಗಾಯದ ಮೇಲೆ ಉಪ್ಪು ಸುರಿ

ಜೀವನದಲ್ಲಿ ಕಷ್ಟದ ಮೇಲೆ ಕಷ್ಟಗಳು ಬಂದೆರಗುವ ಸನ್ನಿವೇಶದಲ್ಲಿ ಈ ಮೇಲಿನ ನುಡಿಗಟ್ಟನ್ನು ಪ್ರಯೋಗಿಸುತ್ತಾರೆ. ಗಾಯದ ಮೇಲೆ ಉಪ್ಪನ್ನು ಹಾಕಿದರೆ ಗಾಯದ ನೋವಿನ ತೀವ್ರತೆ ಇನ್ನೂ ಹೆಚ್ಚಾಗುತ್ತದೆ. ಗಾಯವನ್ನು ವಾಸಿಮಾಡುವ ಔಷಧವನ್ನು ಹಚ್ಚುವುದು ಸರಿಯಾದ ಕ್ರಮ. ಅದರ ಬದಲು ಅದರ ತೀವ್ರತೆಯನ್ನು ಹೆಚ್ಚುಮಾಡುವುದಲ್ಲ. ಕೆಲವರು ಇನ್ನೊಬ್ಬರ ದುಃಖ ಅಥವಾ ಕಷ್ಟವನ್ನು ಲೆಕ್ಕಿಸದೆ ಅವರ ಮೇಲೆ ಸವಾರಿ ಮಾಡುವ ಪ್ರಕ್ರಿಯೆಯನ್ನು ಈ ನುಡಿಗಟ್ಟು ಸರಿಯಾಗಿ ಧ್ವನಿಸುತ್ತದೆ.

### 2. ಸೋತು ಸುಣ್ಣವಾಗು

ವಿಪರೀತವಾಗಿ ಬಳಲುವುದು ಅಥವಾ ಅತಿಯಾಗಿ ದಣಿದು ಹೋಗುವುದು ಎಂಬುದು ಈ ನುಡಿಗಟ್ಟಿನ ಅರ್ಥವಾಗಿದೆ. ಯಾವುದೇ ಒಂದು ಕೆಲಸದಿಂದ ಅಥವಾ ಪ್ರಯತ್ನದಿಂದ ಪೂರ್ಣವಾಗಿ ಶಕ್ತಿ ಕಳೆದುಕೊಂಡು ನಿತ್ರಾಣವಾಗುವುದು ಎಂಬ ಧ್ವನಿ ಇಲ್ಲಿದೆ. ಈ ನುಡಿಗಟ್ಟನ್ನು ಸಾಮಾನ್ಯವಾಗಿ ದೈಹಿಕ ಅಥವಾ ಮಾನಸಿಕ ಬಳಲಿಕೆ, ಸೋಲು ಅಥವಾ ಅತಿಯಾದ ದಣಿವಿನ ಸಂದರ್ಭಗಳಲ್ಲಿ ಬಳಸಲಾಗುತ್ತದೆ.

**ಉದಾ :**

- ಇಡೀ ದಿನ ಗದ್ದೆಯಲ್ಲಿ ದುಡಿದು ರೈತನು ಸೋತು ಸುಣ್ಣವಾಗಿದ್ದಾನೆ.
- ಪರೀಕ್ಷೆಯಲ್ಲಿ ಕಠಿಣ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸಿ ಆ ವಿದ್ಯಾರ್ಥಿ ಸೋತು ಸುಣ್ಣವಾದನು.

## ವಾಕ್ಯ ರಚನೆ

ಪ್ರಚಲಿತದಲ್ಲಿರುವ ಇತರ ನುಡಿಗಟ್ಟುಗಳನ್ನು ಸಂಗ್ರಹಿಸಿ ಅವುಗಳ ಅರ್ಥವನ್ನು ಅರಿತು ವಾಕ್ಯದಲ್ಲಿ ಪ್ರಯೋಗಿಸಿರಿ.

## ಹೆಚ್ಚಿನ ಮಾಹಿತಿ

ತುಳು - ಆಂಗ್ಲ – ಚಾಂದ್ರಮಾನ – ಸೌರಮಾನ ತಿಂಗಳುಗಳು

| ತುಳು ತಿಂಗಳು | ಆಂಗ್ಲ ತಿಂಗಳು | ಚಾಂದ್ರಮಾನ ತಿಂಗಳುಗಳು | ಸೌರಮಾನ ತಿಂಗಳುಗಳು |
|---|---|---|---|
| ಪಗ್ಗು | ಜನವರಿ | ಚೈತ್ರ | ಮೇಷ |
| ಬೇಶ | ಫೆಬ್ರವರಿ | ವೈಶಾಖ | ವೃಷಭ |
| ಕಾರ್ತೆಲ್ | ಮಾರ್ಚ್ | ಜೇಷ್ಠ | ಮಿಥುನ |
| ಆಟಿ | ಎಪ್ರಿಲ್ | ಆಷಾಢ | ಕರ್ಕಾಟಕ |
| ಸೋಣ | ಮೇ | ಶ್ರಾವಣ | ಸಿಂಹ |
| ನಿರ್ನಾಲ್ | ಜೂನ್ | ಭಾದ್ರಪದ | ಕನ್ಯಾ |
| ಬೊಂತೆಲ್ | ಜುಲೈ | ಅಶ್ವಯುಜ | ತುಲಾ |
| ಜಾರ್ದೆ | ಆಗಸ್ಟ್ | ಕಾರ್ತಿಕ | ವೃಶ್ಚಿಕ |
| ಪೆರಾರ್ದೆ | ಸೆಪ್ಟೆಂಬರ್ | ಮಾರ್ಗಶಿರ | ಧನು |
| ಪೊನ್ನಿ (ಪೊಯಿಂತೆಲ್) | ಅಕ್ಟೋಬರ್ | ಪುಷ್ಯ | ಮಕರ |
| ಮಾಯಿ | ನವೆಂಬರ್ | ಮಾಘ | ಕುಂಭ |
| ಸುಗ್ಗಿ | ಡಿಸೆಂಬರ್ | ಫಾಲ್ಗುಣ | ಮೀನ |

# ಸುತ್ತೆಲ್ಲ ಜನಪದ ಹಾಡಿರಲಿ

**ಜನಪದ ಗೀತೆಗಳ ಸಂಗ್ರಹ**




ಯಾರು ಆದರೂ ಹೆತ್ತ ತಾಯಂತೆ ಆದಾರೋ
ಸಾವಿರ ಸೌದೆ ಒಲೆಯಲ್ಲಿ। ಉರಿದಾರೂ
ದೀವಿಗೆಯಂತ ಬೆಳಕುಂಟೆ ॥

ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡಿಲಿರುವ ಕರಕೀಯ । ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ ॥

ತವರೂರ ಹಾದೀಲಿ ಕಲ್ಲಿಲ್ಲ ಮುಳ್ಳಿಲ್ಲ
ಸಾಸಿವೇಯಷ್ಟು ಮರಳಿಲ್ಲ। ಬಾನಲ್ಲಿ
ಬಿಸಿಲೀನ ಬೇಗೆ ಸುಡಲಿಲ್ಲ॥

ತೊಟ್ಟೀಲ ಹೊತ್ಕೊಂಡು ತೌರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು । ತೌರೂರ
ತಿಟ್ಹತ್ತಿ ತಿರುಗಿ ನೋಡ್ಯಾಳೊ ॥

ಬಾಳುವೆ ಮಾಡಿದರೆ ಬಾತಂಗಿ ಅಂದಾರು
ಬಾಳುವೆಗೆಟ್ಟು ಮತಿಗೆಟ್ಟು। ತಿರುಗಿದರೆ
ಹೆತ್ತವರ ಕುಲಕೆ ಹಗೆಯಾದೆ ॥

ಕೊಟ್ಟು ಕುದಿಯಲುಬೇಡ ಮಾಡಿ ಹಂಗಿಸಬೇಡ
ಇಷ್ಟುಂಡರೆಂದು ಅನಬೇಡ । ಮೂರು ಮಾತು
ಮುಟ್ಟುವದು ಶಿವನ ಬಳಿಯಲ್ಲಿ॥

ಉಂಡಾಗ ಉಡುವಾಗ ಜಗವೆಲ್ಲ ನೆಂಟರು
ಅಡವಿಯ ಸೊಪ್ಪು ತಲೆಯಲ್ಲಿ । ತಪ್ಪಾಗ
ಒಡಹುಟ್ಟಿದಣ್ಣ ಮುಖ ನೋಡ ॥

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನಕಂದ
ಜ್ಯೋತಿಯೆ ಆಗು ಜಗಕೆಲ್ಲ ॥

ಉತ್ತಮರ ಗೆಳೆತನ ಪುತ್ಥಳಿ ಬಂಗಾರ
ಮತ್ತ ಹೀನರ ಗೆಳೆತನ । ಮಾಡಿದರ
ಹಿತ್ತಾಳೆಗಿಂತ ಬಲುಹೀನ ॥

ಮುತ್ತು ಮಾಣಿಕ ಬೇಡ ಮತ್ತೆ ಸಂಪದ ಬೇಡ
ಸುತ್ತು ಕೋಟೆಯ ವೈಭವ ಬೇಡ । ನನ್ನವ್ವ
ಸುತ್ತೆಲ್ಲ ಜನಪದ ಹಾಡಿರಲಿ ॥

## ನವೀನ ಪದಗಳ ಅರ್ಥ

ಕರಕಿ - ಗರಿಕೆಯ ಹುಲ್ಲು. ದೀವಿಗೆ - ಸೊಡರು, ದೀವಟಿಗೆ. ಹಂಗಿಸು - ಮೂದಲಿಸು. ಚೂಡಾಮಣಿ - ಶ್ರೇಷ್ಠವಾದ ರತ್ನ. ಪುತ್ಥಳಿ - ಗೊಂಬೆ, ಪ್ರತಿಮೆ.

## ವಿಶದೀಕರಣ

**ಹಿತ್ತಾಳೆ -** ತಾಮ್ರ ಮತ್ತು ಸತುವು ಸೇರಿ ಆಗುವ ಒಂದು ಬಗೆಯ ಹಳದಿ ಬಣ್ಣದಿಂದ ಕೂಡಿದ ಮಿಶ್ರಲೋಹ.

## ಉತ್ತರಿಸಿರಿ

1. ತಾಯಿ ಮತ್ತು ತವರಿನ ಬಗ್ಗೆ ಹೆಣ್ಣುಮಕ್ಕಳ ಹಾರೈಕೆಯೇನು?
2. ತವರೂರಿನ ಕುರಿತು ಹೆಣ್ಣು ಮಕ್ಕಳಿಗಿರುವ ಆತ್ಮೀಯ ಭಾವನೆಗಳಾವುವು?
3. ಒಡಹುಟ್ಟಿದವರಿಗೆ ಹೆಣ್ಣು ಭಾರವಾಗುವುದು ಯಾವಾಗ?
4. ‘ಹಿತ್ತಾಳೆಗಿಂತ ಬಲುಹೀನ’ – ಯಾವುದು?
5. ಮಕ್ಕಳು ಭವಿಷ್ಯದಲ್ಲಿ ಏನಾಗಬೇಕೆಂದು ಜನಪದ ತಾಯಿಯು ಆಶಿಸುತ್ತಾಳೆ?
6. ಜನಪದರು ಯಾವ ಸಂಪತ್ತನ್ನು ಅಪೇಕ್ಷಿಸುತ್ತಾರೆ?

## ಆಶಯ ಬರಹ

‘ಸುತ್ತೆಲ್ಲ ಜನಪದ ಹಾಡಿರಲಿ’ ಪಾಠದಲ್ಲಿ ಬಂದಿರುವ ತ್ರಿಪದಿಗಳ ಆಶಯವನ್ನು ಬರೆಯಿರಿ.

## ಕಿರು ಲೇಖನ

ಜನಪದ ಗೀತೆಗಳಲ್ಲಿ ಮೂಡಿಬಂದ ಲೋಕನೀತಿಯ ಕುರಿತು ಕಿರು ಲೇಖನ ಬರೆಯಿರಿ.

## ಸಂದರ್ಶನ ಲೇಖನ

ನಿಮ್ಮೂರಿನ ಜನಪದ ಕಲಾವಿದರೊಬ್ಬರನ್ನು ಭೇಟಿ ಮಾಡಿ ಸಂದರ್ಶನ ಲೇಖನವನ್ನು ತಯಾರಿಸಿರಿ.

## ತುಲನಾತ್ಮಕ ಟಿಪ್ಪಣಿ

ಕೆಳಗೆ ನೀಡಲಾದ ಜನಪದ ತ್ರಿಪದಿಯನ್ನು ಸರ್ವಜ್ಞನ ವಚನದೊಂದಿಗೆ ಹೋಲಿಸಿ ತುಲನಾತ್ಮಕ ಟಿಪ್ಪಣಿಯನ್ನು ಬರೆಯಿರಿ.

ಉತ್ತಮರ ಗೆಳೆತನ ಪುತ್ಥಳಿ ಬಂಗಾರ
ಮತ್ತ ಹೀನರ ಗೆಳೆತನ । ಮಾಡಿದರ
ಹಿತ್ತಾಳೆಗಿಂತ ಬಲುಹೀನ ॥

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗ ಬಚ್ಚಲ
ಕೊಚ್ಚೆಯಂತಿಹುದು ಸರ್ವಜ್ಞ ॥

## ಸ್ವಾರಸ್ಯ ಬರಹ

ಕೆಳಗೆ ನೀಡಲಾದ ತ್ರಿಪದಿಯ ಸ್ವಾರಸ್ಯವನ್ನು ಬರೆಯಿರಿ.

ತೊಟ್ಟಿಲ ಹೊತ್ಕೊಂಡು ತೌರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು । ತೌರೂರ
ತಿಟ್ಹತ್ತಿ ತಿರುಗಿ ನೋಡ್ಯಾಳೊ ॥

## ತಾಳ - ಲಯಬದ್ಧವಾಗಿ ಹಾಡಿರಿ

ಪಾಠ ಭಾಗದಲ್ಲಿ ಬಂದ ತ್ರಿಪದಿಗಳನ್ನು ತಾಳ - ಲಯಬದ್ಧವಾಗಿ ಹಾಡಿರಿ.

## ಗ್ರಾಮ್ಯ - ಶಿಷ್ಟರೂಪ

ಪಠ್ಯಭಾಗದಲ್ಲಿ ಬಂದಿರುವ ಗ್ರಾಮ್ಯ ಪದಗಳಿಗೆ ಶಿಷ್ಟರೂಪವನ್ನು ಬರೆಯಿರಿ.

| ಗ್ರಾಮ್ಯ ರೂಪ | ಶಿಷ್ಟರೂಪ |
| --- | --- |
| ತವರೀಗಿ | |
| ಹೊಳೆದಂಡಿ | |
| ಹೊತ್ಕೊಂಡು | |
| ಉಟ್ಕೊಂಡು | |

# ಆಹಾ !
# ಒಂದು ಕಪ್ಪು ಚಹಾ !!

ಮಾಲತಿ ಪಟ್ಟಣಶೆಟ್ಟಿ



**ಪಾತ್ರ ಪರಿಚಯ :**

ಗಂಡ/ಅಪ್ಪ : (ಸೋಮಶೇಖರ)
ಹೆಂಡತಿ : (ಕಾಮಾಕ್ಷಿ)
ಮಗ
ಮಗಳು
ಚಂದ್ರಶೇಖರ (ಗೆಳೆಯ)
ಸುಂದರಿ (ಪ್ರಕೃತಿಮಾತೆ)

ಗಂಡ
(ಸೋಮಶೇಖರ) : [ಆಕಳಿಸುತ್ತ ತನ್ನಷ್ಟಕ್ಕೆ ತಾನೇ ನೋವಿನಿಂದ ಮಾತನಾಡಿಕೊಳ್ಳುತ್ತಾನೆ]

ಈಕಿನ್ನ ಕರದsು ಕರೀತೇನೆ. ಹಾ ಇಲ್ಲಾ ಹೂಂ . . . ಇಲ್ಲಾ... ನನ್ನ ಮಾತಿಗೆ ಬೆಲೀನ ಇಲ್ಲಾ.... ನನ್ನ ಮಾತು ಕೇಳಿದ್ರೂ ಸುಮ್ಮನ ಅದಾಳಲ್ಲಾ ಆಂ ಆ... ಏನಂದಿ ?

ಹೆಂಡತಿ : [ದೂರದಿಂದ] ಸುಮ್ಮನ ಮಲಗರಿ, ಯಾಕ ಕೂಗತೀರಿ? ರಿಟೈರ್ ಆಗೀರಿ. . . ಸ್ವಲ್ಪ ಹಾಸಿಗ್ಯಾಗ ಇರ್ರಿ.....

ಯಾದಕ್ಕ ಅವಸರಾ ಮಾಡತೀರಿ ?

ಗಂಡ : (ತನ್ನಷ್ಟಕ್ಕ) ನೋಡ್ರಿ, ನೋಡ್ರಿ, ಹೆಂಡ್ತಿ ಹ್ಯಾಂಗ ಝುಬರಿಸಿ ಮಾತಾಡತಾಳ.. ನಾನು ರಿಟೈರ್ ಆದದ್ದ ತಪ್ಪ? ರಿಟೈರ್ ಆಗಿದ್ದಕ್ಕ ಹಿಂಗ ಸಿಟ್ಟಿಗೆದ್ದ ಮಾತಾಡಬೇಕ ?

(ಗಟ್ಟಿ ಧ್ವನಿಯಲ್ಲಿ) ಗಂಟ್ಲಾ ಒಣಗಿ ಹೋಗೇದ... ದಿನಾ ಚಹಾ ಕುಡದ ಕುಡದ, ಚಹಾ ಆಗೇದsು ಕಾಮಾಕ್ಷಿ...

| | | |
|---|---|---|
| ಗಂಡ | : | [ಉತ್ತರ ಸಿಗದಾದಾಗ] ಏ ಕಾಮಾಕ್ಷಿ ಎಲ್ಲಿದ್ದೀಯೋ, ಕಾಮು..... ಕಾಮು...... ಏ ಕಾಮಿ...!! |
| ಕಾಮಾಕ್ಷಿ | : | [ಹತ್ತಿರ ಬರುತ್ತಾಳ] ಯಾಕ ಗಂಟ್ಲ ಹರಿಯೂ ಹಾಂಗ ಕರೀತೀರಿ... ಇಷ್ಟ ಅವಸರ ಯಾಕ? ಯಾವ ಆಫೀಸಿಗೆ ಹೊರಟೀರಿ..... ಅಲ್ಲಾ ನನ್ನ ಕಾಮಿ ಅಂತ ಕರೀತೀರಿ ? ಕಾಮಿ ಅಂತೀರಲ್ಲಾ ನಾಯೇನ ನೀವು ಸಾಕಿದ ಬೆಕ್ಕ ? |
| ಗಂಡ | : | ನೋಡು, ಮುಂಜಾನಿಗೆ ನನಗೆ ಚಹಾ ಕುಡಿಯೋ ಚಟಾ ಅದ. . . ಸರಿ ಈಗ ಬೆಳಗಿನ 9 ಆತು. ಗಂಟ್ಲ ಒಣಗಿ ಹೋಗೇದ..... ಮತ್ತ ಕಾಮಿ ಅಂತ ಪ್ರೀತಿಯಿಂದ ಕರದೆ, ಏನ ತಪ್ಪು ? |
| ಕಾಮಾಕ್ಷಿ | : | ಅವವ್ವ.... ಈಗ ಬಂತ ಪ್ರೀತಿ ? ಮೂವತ್ತ ವರ್ಷದಾಗ ಒಮ್ಮೆನೂ ಬರದ ಪ್ರೀತಿ ಈಗ ಬಂತ ?? ಸೂರ್ಯಾ ಈವತ್ತ ಪಶ್ಚಿಮಕ್ಕ ಮೂಡಿರಬೇಕು. |
| ಗಂಡ | : | ಪಶ್ಚಿಮಕ್ಕ ಯಾಕ ತನ್ನ ನಿಶ್ಚಿತ ದಿಕ್ಕನ್ಯಾಗ ಮೂಡ್ಯಾನ. ಸೂರ್ಯನ ಮ್ಯಾಲೆ ನಿನ್ನ ಸಿಟ್ಟ ತೀರಿಸಿಕೊಳ್ಳಬ್ಯಾಡಾ... ಅವಾ ಸಮಯ ಪ್ರಜ್ಞೆಯ ಶಿಸ್ತಿನ ದೇವರು. ಈ ಮೂವತ್ತು ವರ್ಷದ ಮಾಸ್ತರಕಿಯೊಳಗ ತಲಿ ಕೆರೆಕೊಳ್ಳಲಿಕ್ಕೆ ಪುರಸೊತ್ತಿಲ್ಲ. . . ಇನ್ನ ಪ್ರೀತಿ ಯಾವಾಗ ಮಾಡಲಿ ? |
| ಕಾಮಾಕ್ಷಿ | : | ನಿಮ್ಮ ಮಾಸ್ತರಕಿಗೂ ಇದಕ್ಕೂ ಏನೂ ಸಂಬಂಧ ಇಲ್ಲಾ. ಒಂದ ಪ್ರೀತಿ ಮಾತ ಆಡಲಿಕ್ಕೆ ಎಷ್ಟ ಟೈಮ್ ಹಿಡಿತದ..... ಅದೂ ಇದೂ ನೆವಾ ಹೇಳಬ್ಯಾಡ್ರಿ.... ನಮ್ಮಪ್ಪಗ ಹೇಳಿದ್ದೆ ಮಾಸ್ತರನ ಕೂಡ ಮದವಿ ಮಾಡಬ್ಯಾಡಾ ಅಂತ. ನಮ್ಮಪ್ಪಗೆ ಹೇಳಿದ್ದೆ.... ಆಗ ದೆವ್ವ ಬೆನ್ನ ಹತ್ತಿ ರನ್ನ ಚಿನ್ನ ಅನಕೊಂಡ ರಮಿಸಿ ಮದವಿ ಮಾಡಿಕೊಂಡ್ರಿ..... ಈಗ ? ಬೆಕ್ಕ ನಾಯಿ ಅಂತ ಕರದ ಪ್ರೀತಿ ತೋರಸ್ತೀರಿ. ಇನ್ನೊಮ್ಮೆ 'ಕಾಮಿ' ಅಂದ್ರ ನೋಡಿಕೊಳ್ಳತೇನಿ. |
| ಮಗ | : | ಅಪ್ಪಾ ಇಲ್ಲೇ ಕೇಳ್ರಿ..... ನನಗ ಆಫೀಸಿಗೆ ಲೇಟಾಗೇದ, ಇನ್ನ ತಡಾ ಮಾಡಿದ್ರ ನಮ್ಮ ಮ್ಯಾನೇಜರು ಹಿಡದ ಬೈತಾ. ಅದಕ್ಕ ಇವತ್ತೊಂದ ದಿನಾ ಅವ್ವಾ ಹೇಳಿದ ಪಲ್ಲೆ ತರ್ರಿ, ಮತ್ತ ಈ ಚೀಟಿ ಹಿಡೀರಿ ಹಂಗ ಕಿರಾಣಿ ಅಂಗಡಿಗೆ ಹೋಗಿ ಸಾಮಾನು ತರ್ರಿ ಅಪ್ಪಾ. . . ಈಗ ಟೈಮ್ ಽಟೈಮ್ ರಿಟೈರ್ ಆಗೀರಲ್ಲಾ ! |
| ಗಂಡ | : | ಹೌದೋ ಹೌದು ನಾ ರಿಟೈರ್ ಆಗೇನಿ, ಇನ್ನೇನಪಾ ಇದು ವಿಶ್ರಾಂತಿಗೆ ಅಲ್ಲ, ಕತ್ತಿ ಹಾಂಗೆ ದುಡೀಲಿಕ್ಕೆ.... ನಿಮ್ಮ ಎಲ್ಲಾರ ಸೇವಾ ಮಾಡಲಿಕ್ಕೆ. |
| ಮಗ | : | ಹಂಗ್ಯಾಕ ಅಂತೀದೀ ಅಪ್ಪಾ..... ಇದು ಮನೀ ಕೆಲಸಾ, ಕತ್ತೀ ಕೆಲಸಾ ಅಲ್ಲಾ...... |
| ಅಪ್ಪ | : | ಮನೀ ಕೆಲಸಾನಪ್ಪಾ, ಎಲ್ಲಾರ ಸೇವಾ ಮಾಡೂ ಕೆಲಸಪ್ಪಾ. |
| ಕಾಮಾಕ್ಷಿ | : | ನಿಮ್ಮನ್ನ ಯಾರ ಕೇಳತಾರ ಸೇವಾ ಮಾಡೂ ಅಂತ. ಆ ಸೇವಾ ಅನ್ನೊದನ್ನ ನಾ ಈ ಮೂವತ್ತೂ ವರ್ಷ ಮಾಡೇನಿ, ಹೊಟ್ಟಿ ಕಟ್ಟಿ, ಬಾಯಿ ಕಟ್ಟಿ 24 ಗಂಟೆ ಸೇವಾ ಮಾಡೇನಿ. ನೀವೆಂಥಾ ಸೇವಾ ಮಾಡತೀರಿ ? |
| ಗಂಡ | : | ದಿನಾ ಎದ್ದ ಕೂಡ್ಲೆ ನಾ ಹೇಳೂಕಿಂತಾ ಮದ್ಲ ಬಿಸಿ ಬಿಸಿ ಚಹಾ ಕೊಡುತಿದ್ದಿ. ಈಗ ನೋಡಿದ್ರ ಹಚಾ ಹುಚ್ಚಾ ಅನ್ನೋ ರೀತಿ ಮಾತಾಡತೀ ! |
| ಕಾಮಾಕ್ಷಿ | : | ನಾಯೇನ ಹಂಗ ಮಾತಾಡಿಲ್ಲ, ಸುಳ್ಳ ಸುಳ್ಳ ಆಪಾದನೆ ಮಾಡಬ್ಯಾಡ್ರಿ...... ನಾನೂ ಅಡಗಿ ಅರ್ಧಾಕ್ಕ ಬಿಟ್ಟ ಬಂದೇನಿ... ಸ್ವಲ್ಪ ವಾಕಿಂಗ್ ಮಾಡಿಕೊಂಡ ಬರ್ರಿ. ಆಮೇಲೆ ಚಹಾ ಕುಡೀರಿ. |
| ಮಗಳು | : | ಲೇಟಾಯ್ತು ನನ್ನ ಕಾಲೇಜಿಗೆ ಬಿಡ್ರಿ..... |
| ಅಪ್ಪ | : | ನಿನ್ನ ಕಾಲೇಜಿಗೆ ಬಿಡತೇನಿ... ನೀನರೆ ಚಹಾ ಮಾಡತೀಯೇನು ? |

ಕಾಮಾಕ್ಷಿ : ಅಲ್ಲರೀ ಆ ಹುಡಗಿಗೆ ಲೇಟಾಗೇದ... ಅಂಥಾದ್ರಾಗ ಅಕಿಗೆ ಚಹಾ ಮಾಡೂ ಅಂತೀರಲ್ಲ ? ಅಕಿನ್ನ ಬಿಟ್ಟ ಬಂದು ಚಹಾ ಕುಡಿಯುವಿರಂತೆ.

ಗಂಡ : ಆತು ಅಕೀಗೂ ಹೇಳೂದಿಲ್ಲಾ, ನಿನ್ನೂ ಕೇಳುದಿಲ್ಲ. ನಾನು ಹಗಲ ಹನ್ನೆರಡು ಗಂಟೆ ಆದರೂ ಮಾಡಕೋತೇನಿ. ನನ್ನ ಒಂದ ಕಪ್ಪ ಚಹಾಕ್ಕ ಸಕ್ರಿ ಎಷ್ಟ ಹಾಕಬೇಕು ? ಚಾ ಪುಡಿ ಎಷ್ಟ ಹಾಕಬೇಕು...... ಅದನ್ನಾರೆ ಹೇಳು.

ಹೆಂಡತಿ : ಆಯ್ಯ ದೇವರ ಹನ್ನೊಂದ ಗಂಟೆ ಆತು..... ನಾ ಇನ್ನ ನಿಲ್ಲೊದಿಲ್ಲಾ. ಆಫೀಸಿಗೆ ಓಡಬೇಕು.

ಮಗಳು : ಅಪ್ಪಾ ನೀನು ಸೇವಾ ಗೀವಾ ಅಂತೀದಿ, ಅದಕ್ಕ ಒಂದು ಸ್ಕೂಟರ್ ಕೊಡಿಸಿ ಬಿಡ್ರಿ... ನಿಮ್ಮನ್ನೇನೂ ಕೇಳೋದಿಲ್ಲ. ಈಗ ಆ ಫಂಡು ಈ ಫಂಡು ಅಂತ ರೊಕ್ಕ ಬರತದಲ್ಲ, ಲಕ್ಷದಾಗ ಇಟಕೊಳ್ಳರಿ. . . ನನಗೊಂದು ಸ್ಕೂಟರ್ ಬೇಕೇ ಬೇಕು.

ಗಂಡ : ಬರೊಬ್ಬರ ಸಲಹಾ ಕೊಟ್ಟಿ... ನಿಮ್ಮವ್ವನೂ ಸಲಹಾ ಕೊಟ್ಟಾಳ... ಮಗನ ಮದಿವಿಗೆ ರೊಕ್ಕಾ ತಗದಿಡೂ ಅಂತ ನಾ ಮಾತ್ರ ಹರಕ ಅಂಗ್ಯಾಗ, ಹಳೆ ಚೊಣ್ಣದಾಗ ಇರೋದು. ಇದ ಹಂಗ ಇರಲಿ.... ನಾ ಮಾತ್ರ ಚಾಹಾ ಮಾಡಕೊಳ್ಳಾಕ ಹೋಗತೇನಿ.

ಚಂದ್ರಶೇಖರ : (ಹತ್ತಿರ ಬರುತ್ತ) ಏ ದೋಸ್ತಾ ನಿಲ್ಲೋ, ನನಗೂ ಮನ್ಯಾಗ ಚಾ ಸಿಕ್ಕಿಲ್ಲಾ. ನನಗೂ ಒಂದು ಚಹಾ ಮಾಡಪಾ

ಗಂಡ : ಬಾರಪ್ಪ ಚಂದ್ರು, ನೀನೂ ಚಾ ಕುಡದಿಲ್ಲ.... ಬಾ ಬಾ.

ಚಂದ್ರಶೇಖರ : ರಿಟೈರ್ ಆದ ಮೇಲೆ ನೋಡ ನಾನು ಹೆಂಡತಿಗೆ ಅದ ಮಾಡಿಕೊಡು, ಇದ ಮಾಡಿಕೊಡೂ ಅಂತ ಹೇಳೂದನ ಬಿಟ್ಟೆ..... ಯಾಕಪ್ಪ ಜಗಳಾ ಅಂತ ನನ್ನ ಚಹಾ ನಾ ಮಾಡಕೋತೇನಿ... ಇಡೀ ಮನಿ ಕಸಾ ಉಡಗತೇನಿ.... ಗಿಡಕ್ಕೆ ನೀರ ಹಾಕತೇನಿ......

ಕಾಮಾಕ್ಷಿ : ನೋಡ್ರಿ ನೋಡ್ರಿ ನೋಡ್ರಿ ಚಂದ್ರಣ್ಣ ಹುಷಾರಿದ್ದಾರ ಅಂತ ತಮ್ಮ ಕೆಲಸಾ ತಾವ ಮಾಡಿಕೊಳ್ಳೂದು ಅನುಕರಣೀಯವಾದದ್ದು. ನನ್ನ ಕೆಲಸದಾಗ ಕೈಗೂಡಿದ್ರ ನಾ ಮುಗಲ ಮುಟ್ಟತೇನಿ... ಇರ್ಲಿ ನಾ ಹೇಳೋದ್ಯಾ ಮರ್ತೆ, ಹಾಲ ತೀರ್ಯಾವ ನೀವು ಹಾಲ ತರ್ರಿ...

ಗಂಡ : ಹಾಲ ತರೋ ಬದಲಿ ನಾವಿಬ್ಬರೂ ಚಹಾದ ಅಂಗಡ್ಯಾಗ ಚಾ ಕುಡದ್ರ ನಮ್ಮ ಎಲ್ಲಾ ಚಿಂತಿ ಪರಿಹಾರಾಗತಾವ.

ಚಂದ್ರಶೇಖರ : ಹೌದೌದು, ನಡಿ ನಾವಿಬ್ಬರೂ ಹೋಗಿ ಕಾಫಿ ಕುಡಿಯೋಣ ನಾನೂ ಮಾಡಕೊಳ್ಳೋದು ಬ್ಯಾಸರಾ ಅನಸೀದ್ರ ಹೊಟೇಲಿಗ ಹೋಗತೇನಿ.

ಕಾಮಾಕ್ಷಿ : ನೀವು ಏನರ ಮಾಡಿಕೊಳ್ಳರಿ.. ನಾ ಅನಕಾ ಆಫೀಸಿಗೆ ಹೊಂಟೆ.

ಗಂಡ : ನೀ ಹೊರಟಿ ಬಿಡು ಮಹಾರಾಯಳ, ನನ್ನ ನಶೀಬದಾಗ ಇಂದಿನ ನನ್ನ ಚಹಾ ಎಲ್ಲೆ ಸಿಗತದೋ ಏನೋ. ಚಂದ್ರೂ ನೀ ಐದ ಮಿನಿಟ್ ತಡಿ, ನಾ ಫ್ರೆಶ್ ಆಗಿ ಬರತೇನಿ.......

ಚಂದ್ರಶೇಖರ : ಹೋಗು ಹೋಗು... ನಮ್ಮ ಮನೀಯಕಿಗೆ ಸದ್ಯ ಕಾಯಿಪಲ್ಲೆ ಬೇಕಂತ.. ನಾ ಹೊಂಟೆ. . . ನಾಳೆ ಇಬ್ಬರೂ ಚಾದಂಗಡಿಗೆ ಹೋಗೋಣಂತ. ಏನೂ ತಪ್ಪ ತಿಳಕೋಬ್ಯಾಡಾ... ನನಗ ನಮ್ಮ ಮನೀಯವರ ಆಜ್ಞಾ ಪಾಲಿಸಬೇಗೇದ, ಅದಕ್ಕ ನಡಿತೇನಿ.

ಗಂಡ : ನೀನು ನಿನ್ನ ಮನೀಯವರ ಆಜ್ಞಾ ಶಿರಸಾ ವಹಿಸಿ ಅದಕ್ಕೆ ಹೊಂಟಬಿಡು. ನಾನೂ ನಮ್ಮ ಮನೀಯವರ ಆಜ್ಞಾ ಪಾಲಿಸ್ತೇನಿ . . . ನೀ ನಡದ ಬಿಡು ನಂದ ಇನ್ನೂ ಜಳಕಾಗಬೇಕು.... ಈಗ ಜಳಕಾ ಮಾಡಬೇಕೆಂದಿದ್ದೆ ಯಾಕೋ ಸ್ವಲ್ಪ ಆಯಾಸ ಆಗಿ..... ಕಣ್ಣ ಮುಚ್ಚಲಿಕ್ಕ ಹತ್ಯಾವ. ಒಂದ ಸಣ್ಣ ನಿದ್ದಿ ತಗದು ಆ ಮ್ಯಾಲ ನಾನು Special ಆಗಿ ನನಗಾಗಿ ಚಹಾ ಮಾಡಿಕೊಂಡ ರಾಜಾನಾಂಗ ನಿಶ್ಚಿಂತಿಯಾಗಿ ಕೂತು ಆರಾಮಾಗಿ ಚಾ ಕುಡೀತೇನಿ.

ಸ್ವಲ್ಪ ಸಮಯ ಸರಿಯುತ್ತದೆ.

[ಹಾಸಿಗೆ ಮೇಲೆ ಉರುಳಿದ ಸೋಮಶೇಖರರಿಗೆ ನಿದ್ರೆ ಆವರಿಸುತ್ತದೆ]

ನಿದ್ರೆಯಲ್ಲಿ

ಅರೆ..... ಇದೇನಿದು ಆಕಾಶದ ಸೀರಿ ಉಟ್ಟು ನಕ್ಷತ್ರ ತೊಟ್ಟು ನಗ ನಗತಾ ನನ್ನ ಮುಂದ ನಿಂತ ಈ ಸುಂದರಿ ಯಾರಿರಬೇಕು ?

ಸುಂದರಿ : ನಾನು ಪ್ರಕೃತಿ ಮಾತೆ..... ನಿಮ್ಮ ಮನಸ್ಸಿನೊಳಗಿನ ನಿಮ್ಮ ಬೇಡಿಕೆ ತಿಳದsದ.... ಇಕಾ ಈ ಕಪ್ಪು ತಗೊಳ್ಳಿರಿ . . .

ಗಂಡ : ಇದು ರತ್ನಖಚಿತ ಚಿಕ್ಕ ಪಾತ್ರೆ. . . ನನಗೆ ಅಮೃತ ಬೇಡ್ರಿ ನಾನು ಬಡ ಮಾಸ್ತರಾ... ನನಗ ಚೀನೀಮಣ್ಣಿನ ಕಪ್ಪಿನೊಳಗ ಚಹಾ ಕುಡದು ರೂಢಾ ಅದರಿ.

ಸುಂದರಿ : ಹಾಗೋ... ಇಕಾ ತಗೊಳ್ಳರಿ.... ನಿಮ್ಮ ಚಹಾ...

(ಪ್ರಶಾಂತ ಮನಸ್ಸಿನಿಂದ ತಲೆಬಾಗಿ ಆ ಚಹಾದ ಕಪ್ಪನ್ನ ಸ್ವೀಕರಿಸುತ್ತ.)

ಗಂಡ : ಏನೂ ಬೇಡೂದಿಲ್ಲ ತಾಯಿ... ಈ ಬೆಳಗೀನೆ ನನಗ ಚಹಾ ಎಷ್ಟು ಪ್ರಯತ್ನ ಪಟ್ಟರೂ ಸಿಗಲಿಲ್ಲ. ಆದ್ರ ನೀವು ನನ್ನ ಮನೋಗತ ತಿಳದ ಚಹಾ ಮಾಡಿ ಕೊಟ್ರಿ.... ಎಂಥಾ ಭಾಗ್ಯಾ ನನ್ನದು. ನಿಮ್ಮ ಅಮೃತ ಹಸ್ತದಿಂದ ತಯಾರಾದ ಚಹಾ.... ಕುಡೀತೇನಿ.... ನನ್ನ ಈ ಪುಣ್ಯದ ದಿನಾ.. ನಿಮ್ಮಿಂದ ಸಿಕ್ಕಿತು . . . ನಿಮ್ಮ ಪಾದಕ್ಕೆ ಮಣಿಯುವೆ. (ಆ ದೇವಿ ಅಂತರ್ಧಾನಳಾಗುತ್ತಾಳೆ.)

ತನ್ನ ಡೈನಿಂಗ್ ಟೇಬಲ್ ಮೇಲೆ ಆ ಕಪ್ಪನ್ನು ಇಟ್ಟು ನೋಡಿಯೇ ನೋಡುತ್ತ.... ಅನ್ನುತ್ತಾನೆ.

ನನ್ನ ಒಂದು ಕಪ್ಪು ಚಹಾ... ನನ್ನ ಸುಕೃತ....
ಈಗ ಇದರ ರುಚಿ ನೋಡುತ್ತೇನೆ.
ಅಬ್ಬಾ ಏನು ಚಹಾ ಏನು ಚಹಾ
ಅಂತದು ಹೀಗೆ ಸಿಕ್ಕಿತಲ್ಲಾ.......
ಅಹಹಾ ನನ್ನ ಒಂದು ಕಪ್ಪು ಚಹಾ !!
ಇನ್ನೂ ನಿದ್ರೆಯಲ್ಲೇ ಹೀಗೆ ಏನೇನೋ ಬಡಬಡಿಸಿದ.

* * *



**ಮಾಲತಿ ಪಟ್ಟಣಶೆಟ್ಟಿ :** ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಆಂಗ್ಲಭಾಷೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಮಾಲತಿ ಪಟ್ಟಣಶೆಟ್ಟಿಯವರು ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಆಂಗ್ಲ ಭಾಷೆಯ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಬಾ ಪರೀಕ್ಷೆಗೆ, ಗರಿ ಕೆದರಿ, ತಂದೆ ಬದುಕು ಗುಲಾಬಿ, ದಾಹತೀರ, ಮೌನ ಕರಗುವ ಹೊತ್ತು, ಹೂ ದಂಡಿ, ಎಷ್ಟೊಂದು ನಾವೆಗಳು, ನನ್ನ ಸೂರ್ಯ, ಗುನ್ ಗುನ್ ಗೀತ ಗಾನ, ಬಾಳೆಂಬ ವ್ರತ (ಕವನ ಸಂಕಲನಗಳು), ಇಂದು ನಿನ್ನಿನ ಕತೆಗಳು, ಸೂರ್ಯ ಮುಳುಗುವುದಿಲ್ಲ, ಎಲ್ಯಾದರೂ ಬದುಕಿರು ಗೆಳೆಯಾ, ಕಣ್ಣಂಚಿನ ತಾರೆ (ಕಥಾ ಸಂಕಲನ), ಬಗೆದಷ್ಟು ಜೀವಜಲ (ಪ್ರಬಂಧ), ಸಹಸ್ಪಂದನ, ಸಂವೇದನ (ವಿಮರ್ಶಾ ಸಂಗ್ರಹ), ಬೆಳ್ಳಕ್ಕಿ ಸಾಲು, ಮಕ್ಕಳ ಮೂರು ನಾಟಕಗಳು, ಬೋರಂಗಿ (ಮಕ್ಕಳ ಸಾಹಿತ್ಯ) ಕೃತಿಗಳನ್ನು ಪ್ರಕಟಿಸಿದ್ದಾರೆ. ಅವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಿರಂಜನ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಲಭಿಸಿವೆ. ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದಾರೆ. 'ಆಹಾ! ಒಂದು ಕಪ್ಪು ಚಹಾ!!' ನಾಟಕವು ಧಾರವಾಡ ಆಕಾಶವಾಣಿಯಲ್ಲಿ ಬಾನುಲಿ ನಾಟಕವಾಗಿ ಪ್ರಸಾರವಾಗಿದೆ.

## ನವೀನ ಪದಗಳ ಅರ್ಥ

ಲಕ್ಷ್ಯ – ಗಮನ. ಚೊಣ್ಣ – ಚಣ್ಣ, ಚಡ್ಡಿ. ನಶೀಬು - ಅದೃಷ್ಟ. ಜಳಕ – ಸ್ನಾನ. ಸುಕೃತ – ಪುಣ್ಯ.

## ವಿಶದೀಕರಣ

**ಬಾನುಲಿ ನಾಟಕ :** ಬಾನುಲಿ ನಾಟಕಗಳು ಶ್ರವಣ ಮತ್ತು ಕಲ್ಪನೆಗಳ ಆಧಾರಿತವಾಗಿರುವುದು . ದೃಶ್ಯ ಸಂಯೋಜನೆಗೆ ಬದಲು ಧ್ವನಿಯ ಏರಿಳಿತ, ಸಂಗೀತ ಮತ್ತು ಸಂಭಾಷಣೆಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಧ್ವನಿಯ ಏರಿಳಿತದ ಮೂಲಕ ಕೇಳುವವರ ಮನಸ್ಸಿನಲ್ಲಿ ಚಿತ್ರಣ ಮೂಡಿಸುವುದು, ಸಂಕ್ಷಿಪ್ತತೆ, ಸೂಕ್ಷ್ಮ ಭಾಷಾ ಬಳಕೆ, ಪರಿಣಾಮಕಾರಿ ಸಂವಹನ ಮತ್ತು ಸಂದೇಶವನ್ನು ನೀಡುವ ಸಾಮರ್ಥ್ಯ ಬಾನುಲಿ ನಾಟಕಗಳಿಗಿವೆ. ಇದರಲ್ಲಿ ದೃಶ್ಯದ ಮಿತಿ ಇಲ್ಲ. ರಂಗ ನಾಟಕಗಳಂತೆ ದೃಶ್ಯ ಪರಿಕರಗಳ ಅಗತ್ಯವಿರುವುದಿಲ್ಲ.

## ಉತ್ತರಿಸಿರಿ

1. 'ನಾಯೇನ ನೀವು ಸಾಕಿದ ಬೆಕ್ಕ' ಎಂದು ಕಾಮಾಕ್ಷಿಯು ಗಂಡನಲ್ಲಿ ಕೇಳಲು ಕಾರಣವೇನು?
2. ತಾವು ಮಾಡುವ ಸೇವೆಯ ಕುರಿತಾಗಿ ಕಾಮಾಕ್ಷಿ ಮತ್ತು ಆಕೆಯ ಗಂಡನಿಗಿರುವ ನಿಲುವೇನು?
3. ಸೋಮಶೇಖರನು ನಿದ್ರೆಯಲ್ಲಿ ಕಂಡ ಕನಸೇನು?
4. ಡೈನಿಂಗ್ ಟೇಬಲ್ ಮೇಲೆ ಚಹಾವನ್ನು ಇಟ್ಟು ನೋಡುತ್ತಾ ಸೋಮಶೇಖರ ನಿದ್ರೆಯಲ್ಲಿ ಏನೆಂದು ಬಡಬಡಿಸಿದ?
5. ನಿವೃತ್ತಿ ಹೊಂದಿದ ಸೋಮಶೇಖರನ ಬಳಿ ಹೆಂಡತಿ ಮತ್ತು ಮಕ್ಕಳು ಇಟ್ಟ ಬೇಡಿಕೆಗಳೇನು?

## ಸಂದರ್ಭ ವಿವರಣೆ

1. "ಈ ಮೂವತ್ತು ವರ್ಷದ ಮಾಸ್ತರಕಿಯೊಳಗ ತಲಿ ಕೆರೆಕೊಳ್ಳಲಿಕ್ಕೆ ಪುರಸೊತ್ತಿಲ್ಲ".
2. "ನನ್ನ ಕೆಲಸದಾಗ ಕೈಗೂಡಿದ್ರ ನಾ ಮುಗಲ ಮುಟ್ಟತೇನಿ".

## ಶಿಷ್ಟ ರೂಪ

ಕೆಳಗೆ ನೀಡಲಾದ ನಾಟಕದ ಸಾಲುಗಳನ್ನು ಶಿಷ್ಟ ರೂಪಕ್ಕೆ ಪರಿವರ್ತಿಸಿರಿ.

ನಿಮ್ಮನ್ನ ಯಾರ ಕೇಳತಾರ ಸೇವಾ ಮಾಡೂ ಅಂತ. ಆ ಸೇವಾ ಅನ್ನೊದನ್ನ ನಾ ಈ ಮೂವತ್ತೂ ವರ್ಷ ಮಾಡೇನಿ, ಹೊಟ್ಟಿ ಕಟ್ಟಿ, ಬಾಯಿ ಕಟ್ಟಿ 24 ಗಂಟೆ ಸೇವಾ ಮಾಡೇನಿ. ನೀವೆಂಥಾ ಸೇವಾ ಮಾಡತೀರಿ?

## ನಾಟಕ ರಚನೆ

ನಿಮ್ಮ ಜೀವನದಲ್ಲಿ ಸಂಭವಿಸಿದ ಯಾವುದಾದರೂ ಸ್ವಾರಸ್ಯಕರ ಘಟನೆಯೊಂದನ್ನು ನೆನಪಿಸಿಕೊಂಡು ಕಿರು ನಾಟಕವನ್ನು ರಚಿಸಿರಿ.

## ಭಿತ್ತಿಪತ್ರ ತಯಾರಿ

'ಆಹಾ! ಒಂದು ಕಪ್ಪು ಚಹಾ' ನಾಟಕವನ್ನು ಶಾಲೆಯಲ್ಲಿ ಪ್ರದರ್ಶಿಸಲಿದ್ದೀರಿ. ಇದರ ಪ್ರಚಾರಕ್ಕಾಗಿ ಭಿತ್ತಿಪತ್ರವನ್ನು ತಯಾರಿಸಿರಿ.

## ಆಲಿಸಿರಿ.

'ಒಂದು ಕಪ್ಪು ಚಹಾ' ಬಾನುಲಿ ನಾಟಕವನ್ನು Youtube ಮೂಲಕ ಆಲಿಸಿರಿ.

## ತತ್ಸಮ – ತದ್ಭವ

**ತತ್ಸಮ :** ಯಾವುದೇ ಬದಲಾವಣೆ ಹೊಂದದೆ ಕನ್ನಡದಲ್ಲಿ ಯಥಾವತ್ತಾಗಿ ಬಳಕೆಗೊಳ್ಳುವ ಸಂಸ್ಕೃತ ಪದಗಳನ್ನು 'ತತ್ಸಮ'ಗಳೆಂದು ಕರೆಯುತ್ತಾರೆ. 'ತತ್ ಸಮ' ಎಂದರೆ ಅದಕ್ಕೆ ಸಮಾನವಾದುದು ಎಂದರ್ಥ. ಅಂದರೆ 'ಸಂಸ್ಕೃತಕ್ಕೆ ಸಮವಾದುದು' ಎಂದು. ಇದನ್ನು ಸಮ ಸಂಸ್ಕೃತಗಳೆಂದೂ ಕರೆಯುವುದುಂಟು.

**ಉದಾ :** ಶ್ರೀ, ಕಾವ್ಯ, ಸೂರ್ಯ, ವಿದ್ಯಾರ್ಥಿ

**ತದ್ಭವ :** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪ ಸ್ವಲ್ಪ ಬದಲಾವಣೆ ಹೊಂದಿ ಅಥವಾ ಪೂರ್ಣ ಬದಲಾವಣೆ ಹೊಂದಿ ಬಂದಿರುವ ಪದಗಳನ್ನು 'ತದ್ಭವ' ಎಂದು ಕರೆಯುತ್ತಾರೆ. 'ತತ್' ಎಂದರೆ ಅದರಿಂದ, 'ಭವ' ಅಂದರೆ ಹುಟ್ಟಿದ್ದು ಎಂದರ್ಥ. ಅಂದರೆ ಸಂಸ್ಕೃತದಿಂದ ಹುಟ್ಟಿದ್ದು ಎಂದರ್ಥ.

**ಅಲ್ಪಸ್ವಲ್ಪ ಬದಲಾವಣೆಗೊಂಡ ತದ್ಭವ ರೂಪ**

ವರ್ಷ – ವರುಷ, ಆಕಾಶ – ಆಗಸ

**ಪೂರ್ಣ ಬದಲಾವಣೆ ಹೊಂದಿದ ತದ್ಭವರೂಪ**

ವರ್ಣ – ಬಣ್ಣ, ಯಾತ್ರೆ - ಜಾತ್ರೆ, ವೃಷಭ - ಬಸವ

**ಮಾದರಿಯಂತೆ ಕೆಳಗಿನ ಪಟ್ಟಿಯನ್ನು ಪೂರ್ತಿಗೊಳಿಸಿರಿ.**

| ಸಂಸ್ಕೃತ | ತದ್ಭವ |
|---|---|
| ಯೋಧ | ಜೋದ |
| ಖಡ್ಗ | |
| ಪ್ರಯಾಣ | |
| ಧ್ವನಿ | |
| ವಿಧಿ | |
| ನಿತ್ಯ | |
| ದೀಪಿಕಾ | |
| ಮುಖ | |

## ಪೂರಕ ಮಾಹಿತಿ

ಆಕಾಶವಾಣಿಯ ಕಾರ್ಯಕ್ರಮಗಳನ್ನು ನಿಮ್ಮ ಕೈಯಲ್ಲಿರುವ ಮೊಬೈಲ್ ಮೂಲಕವೂ ಆಲಿಸಲು ಸಾಧ್ಯ. ಇದಕ್ಕಾಗಿ ನೀವು News on air ಎಂಬ ಆ್ಯಪನ್ನು ಡೌನ್ ಲೋಡ್ ಮಾಡಿಕೊಳ್ಳಬೇಕು. ಅನಂತರ ನೀವು ಕೇಳಲು ಉದ್ದೇಶವಿರಿಸಿರುವ ಆಕಾಶವಾಣಿ ಕೇಂದ್ರದ ಹೆಸರಿನಮೇಲೆ ಒತ್ತಿದರೆ ಆ ಕೇಂದ್ರದಿಂದ ಪ್ರಸಾರವಾಗುವ ಕಾರ್ಯಕ್ರಮಗಳನ್ನು ಆಲಿಸಬಹುದು.

**ಅತಿಥಿ ಸತ್ಕಾರಕ್ಕೆ ಆಸ್ತಿ ಮುಖ್ಯವಲ್ಲ, ಅಂತರಂಗದ ಭಾವನೆಯೇ ಮುಖ್ಯ**

## ಘಟಕ ಮೌಲ್ಯಮಾಪನ

1. ಕುದುರೆಯಿಂದಿಳಿದು ಜನರ ಬಳಿಗೆ ಬಂದ ಯೋಧನ ಮೈಮಾಟ ಹೇಗಿತ್ತು?
2. ಆತಿಥ್ಯವನ್ನು ನೀಡಿದ ಹೆಂಗಸು ಹೆಸರೇನೆಂದು ಕೇಳಿದಾಗ ಯೋಧನ ಪ್ರತಿಕ್ರಿಯೆ ಏನಾಗಿತ್ತು?
3. 'ಇದಕೆ ಜೋಳದ ಪಾಳಿಯಿಲ್ಲ ನೋಡು' - ಈ ಮಾತನ್ನು ಸಂದರ್ಭ ಸಹಿತ ವಿವರಿಸಿರಿ.
4. ಆಟಿ ಅಮಾವಾಸ್ಯೆಯನ್ನು ಯಾವೆಲ್ಲ ಹೆಸರಿನಿಂದ ಕರೆಯುವರು?
5. 'ಆಟಿ ಅಮಾವಾಸ್ಯೆಯ ಒಂದು ನೆನಪು' ಪಾಠದ ಹಿನ್ನೆಲೆಯಲ್ಲಿ ಹಾಲೆಮರದ ವಿಶೇಷತೆಯನ್ನು ಬರೆಯಿರಿ.
6. ಗಾಯದ ಮೇಲೆ ಉಪ್ಪು ಸುರಿ, ಸೋತು ಸುಣ್ಣವಾಗು - ಈ ನುಡಿಗಟ್ಟುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿರಿ.
7. ಬದುಕು - ಬಾಳುವೆಯ ಬಗ್ಗೆ ಜನಪದರ ಚಿಂತನೆಯೇನು?
8. 'ಆಹಾ! ಒಂದು ಕಪ್ಪು ಚಹಾ!!' - ನಾಟಕದಲ್ಲಿ ಗಂಡನು ತನ್ನ ಪತ್ನಿಯನ್ನು ಚಹಾಕ್ಕಾಗಿ ಕರೆದಾಗ ಆಕೆಯ ಪ್ರತಿಕ್ರಿಯೆ ಏನಾಗಿತ್ತು?
9. ನಿವೃತ್ತರಾದ ತಂದೆಯಲ್ಲಿ ಆತನ ಮಕ್ಕಳು ಇಟ್ಟ ಬೇಡಿಕೆಗಳಾವುವು?
10. ಒಂದು ಕಪ್ಪು ಚಹಾಕ್ಕಾಗಿ, ನಿವೃತ್ತನಾದ ಸೋಮಶೇಖರನು ಪಟ್ಟ ಪಾಡನ್ನು ನಾಟಕದ ಹಿನ್ನೆಲೆಯಲ್ಲಿ ಬರೆಯಿರಿ.
11. 'ಆಹಾ! ಒಂದು ಕಪ್ಪು ಚಹಾ' ನಾಟಕದಲ್ಲಿ ಮೂಡಿಬಂದ 'ಗಂಡ'ನ ಪಾತ್ರವು ಪ್ರಕೃತಿ ಮಾತೆಯ ಮುಂದಿರಿಸಿದ ಬೇಡಿಕೆಯೇನು?
12. ಸರಿಯಾದ ಹೊಂದಿಕೆಯನ್ನು ಆರಿಸಿ ಬರೆಯಿರಿ

| ಅ | ಆ |
|---|---|
| 1. ಮಾಲತಿ ಪಟ್ಟಣಶೆಟ್ಟಿ | I. ಗಾಳಿ ಹೋದ ಬಲೂನಿನಂತೆ ಆಯ್ತು ನನ್ನ ಸ್ಥಿತಿ |
| 2. ಸುರಂ ಎಕ್ಕುಂಡಿ | II. ಹೊಟ್ಟೆ ಕಟ್ಟಿ, ಬಾಯಿ ಕಟ್ಟಿ... ಸೇವಾ ಮಾಡೇನಿ |
| | III.ನನ್ನನ್ನು ಕರೆಯುವರು ಪಂಪನೆಂದು |

ಅ) 1 ಮತ್ತು II ; 2 ಮತ್ತು III
ಆ) 1 ಮತ್ತು III ; 2 ಮತ್ತು I
ಇ) 2 ಮತ್ತು I ; 2 ಮತ್ತು II
ಈ) 1 ಮತ್ತು III ; 2 ಮತ್ತು III

# ಘಟಕ – 2

# ಬದುಕು - ಬಾಂಧವ್ಯ



ಸಾಮಾಜೀಕರಣವು ವ್ಯಕ್ತಿಯ ಬೆಳವಣಿಗೆಗೆ ಮಾತ್ರವಲ್ಲದೆ ಸಮಾಜದ ಸ್ಥಿರತೆ ಮತ್ತು ನಿರಂತರತೆಗೆ ಅಗತ್ಯವಾದ ಘಟಕ. ಇದು ಮಾನವರನ್ನು ಸಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ ರೂಪುಗೊಳಿಸಿ ಪರಸ್ಪರ ಸಹಕಾರ ಮತ್ತು ಹೊಂದಾಣಿಕೆಯಿಂದ ಬದುಕುವಂತೆ ಮಾಡುತ್ತದೆ. ಮನುಷ್ಯನಿಗೆ ತನ್ನ ಸುತ್ತಲಿನ ಇತರ ಜೀವಜಾಲಗಳೊಂದಿಗೆ ಆಸಕ್ತಿ, ಕುತೂಹಲ ಮತ್ತು ಹೊಂದಾಣಿಕೆಯ ಸಹಬಾಳ್ವೆಯ ಅಗತ್ಯವನ್ನು ತೇಜಸ್ವಿಯವರ 'ಪರಿಸರದ ಕಥೆ' ಪ್ರತಿಪಾದಿಸುತ್ತದೆ. ರಾಜನಾಗಿದ್ದರೂ ಕೌಟುಂಬಿಕ ಸಂಬಂಧಗಳನ್ನು ಕಡೆಗಣಿಸಿದುದರ ದುರಂತ ಫಲ ಮತ್ತು ಸಹಬಾಳ್ವೆಯ ಉದಾತ್ತ ಮೌಲ್ಯವನ್ನು ರನ್ನನ ಗದಾಯುದ್ಧದ 'ನೀನಿಲ್ಲದಿವೆಲ್ಲಮೊಳವೆ' ಕಾವ್ಯಭಾಗವು ತಿಳಿಸುತ್ತದೆ. ಪ್ರಕೃತಿಯಿಂದ ಸಮಾಜಕ್ಕೆ ಎಂಬ ಆಶಯವನ್ನು ಪ್ರತಿಪಾದಿಸುವ ಎಚ್. ಎಸ್. ವೆಂಕಟೇಶಮೂರ್ತಿ ಅವರ 'ಇರಬೇಕು ಇರುವಂತೆ' ಎಂಬ ಭಾವಗೀತೆಯು ಬದುಕಿಗೆ ಹಿಡಿದ ಕೈಗನ್ನಡಿಯಂತಿದೆ. ಗೊರೂರು ರಾಮಸ್ವಾಮಿ ಅಯ್ಯಂಗಾರರ 'ಅಮೇರಿಕದಲ್ಲಿ ಗೊರೂರು' ಎಂಬ ಪ್ರವಾಸ ಕಥನವು ಉತ್ತಮ ನೆರೆಹೊರೆಯ ಮಹತ್ವವನ್ನು ಸಾರುತ್ತದೆ.

# ಪರಿಸರದ ಕತೆ

**ಕೆ.ಪಿ. ಪೂರ್ಣಚಂದ್ರ ತೇಜಸ್ವಿ**





'ಕಿವಿ' ಎನ್ನುವ ನಾಯಿ ಒಂದು ಕಾಲದಲ್ಲಿ ನನ್ನೊಡನೆ ಇದ್ದ ಅಸಾಧಾರಣ ಬುದ್ಧಿಯ ಶಿಕಾರಿ ನಾಯಿ. ಸ್ಪಾನಿಯಲ್ ಜಾತಿಯ ನಾಯಿ ಆದಕಾರಣ ಅದರ ಕಿವಿ ಸುಮಾರು ಅರ್ಧ ಅಡಿಗಿಂತ ಉದ್ದ ಇದ್ದು, ತಲೆಯ ಪಕ್ಕದಲ್ಲಿ ವಿಸ್ತಾರವಾಗಿ ಇಳಿ ಬಿದ್ದಿತ್ತು. ಅದಕ್ಕಾಗಿ ಅದಕ್ಕೆ 'ಕಿವಿ' ಎನ್ನುವ ಹೆಸರು ಬಂದಿದ್ದು. ನಾನು ತೋಟ ಮಾಡಲು ಆರಂಭಿಸಿದ ಮೊದಲ ವರ್ಷಗಳಲ್ಲಿ ಕೋವಿ ಹೆಗಲ ಮೇಲೆ ಹಾಕಿಕೊಂಡು ದಿನವಿಡೀ ಅದರೊಡನೆ ಕಾಡು ಅಲೆಯುವುದೇ ಕೆಲಸವಾಗಿತ್ತು. ಹೀಗೆ ಓದುವುದು, ಬರೆಯುವುದು ಎಲ್ಲದಕ್ಕೂ ತಿಲಾಂಜಲಿ ಕೊಟ್ಟು ನಿರ್ಜನ ಕಾಡುಗಳಲ್ಲಿ ಗೊತ್ತು ಗುರಿ ಇಲ್ಲದೆ ಅಲೆಯುತ್ತಿರುವ ನನ್ನನ್ನು ನೋಡಿ ಇವನು ಸಂಪೂರ್ಣ ಹಾಳಾದನೆಂದು ವ್ಯಸನ ಸೂಚಿಸಿದವರೂ ಅನೇಕರಿದ್ದಾರೆ. 'ಎಂಥವರಿಗೆ ಎಂಥಾ ಮಗ' ಎಂದು ವಿಷಾದಪಟ್ಟವರೂ ಅನೇಕರಿದ್ದಾರೆ. ಕೆಲವರು 'ಈ ನಾಯಿಯ ದೆಸೆಯಿಂದಲೇ ಇವನು ಹಾಳಾದ' ಎಂದು ಕಿವಿಯನ್ನೂ ದೂಷಿಸಿದವರೂ ಇದ್ದಾರೆ.

ನನ್ನ ಕೈಗೆ ಕೋವಿ ಬರುವ ವೇಳೆಗೆ ಕಾಡುಪ್ರಾಣಿಗಳೆಲ್ಲಾ ಅವನತಿಯ ಹಾದಿ ಹಿಡಿದಿದ್ದರೂ ಈಗಿನಂತೆ ನಾಮಾವಶೇಷವಾಗುವ ಸ್ಥಿತಿಗೆ ಇಳಿದಿರಲಿಲ್ಲ. ಕಾಡು ಮೃಗಗಳನ್ನು ಜೂಗಳಲ್ಲೂ, ಪುಸ್ತಕದ ಚಿತ್ರಗಳಲ್ಲೂ ಹೆಚ್ಚಾಗಿ ನೋಡಿದ್ದ ನನಗೆ ಮೊದಲ ಸಾರಿಗೆ ಅವು ಕಾಡಿನ ನಿಶ್ಚಲ ಮೌನದಲ್ಲಿ ಕಾಲ ಬಳಿಯ ಪೊದೆಗಳಿಂದಲೇ ಧಿಗ್ಗನೆ ಮಿಂಚಿ ಮಾಯವಾದಾಗ ಆದ ಅನುಭವ ಅಸಾಧಾರಣವಾದುದು. ಅವುಗಳ ಈ ಗೌಪ್ಯತೆಯೇ ನಮಗೆ ಅವುಗಳ ಬಗ್ಗೆ ಅಸಾಧಾರಣ ಕುತೂಹಲ ಹುಟ್ಟಿಸುತ್ತದೆ!

ಕಿವಿ ಮತ್ತು ನಾನು ಸೇರಿ ಅನೇಕ ಪ್ರಾಣಿಗಳನ್ನು ಶಿಕಾರಿ ಮಾಡಿ, ಸ್ವಾಹಾ ಮಾಡಿದ್ದೇವಾದರೂ ಆಗಿದ್ದ ಪ್ರಾಣಿಗಳ ಸಂಖ್ಯೆ ದೃಷ್ಟಿಯಿಂದ ನಮಗೆ ಅವನ್ನು ಶಿಕಾರಿ ಮಾಡಿದೆವಲ್ಲಾ ಎಂದು ಅಷ್ಟೊಂದೇನೂ ಬೇಸರವಾಗುತ್ತಿರಲಿಲ್ಲ. ಇದಕ್ಕೆ ಭಾರತದ

ನಶಿಸುತ್ತಿರುವ ವನಸಂಪತ್ತಿನ ಬಗ್ಗೆ ಆಗ ನನಗಿದ್ದ ಅಜ್ಞಾನವೂ ಒಂದು ಕಾರಣವಿರಬಹುದು. ಒಟ್ಟಿನಲ್ಲಿ ಈ ಶಿಕಾರಿಯ ಪಾಪ-ಪುಣ್ಯಗಳೇನೇ ಇರಲಿ, ಇದು ನನಗೆ ಕಾಡಿನ ಬಗ್ಗೆ, ಕಾಡುಪ್ರಾಣಿಗಳ ಬಗ್ಗೆ ನಿಧಾನವಾಗಿ ಆತ್ಮೀಯತೆಯನ್ನು ಬೆಳೆಸಲು ಸಹಾಯವಾಯ್ತೆಂದು ಹೇಳಬಹುದು. ಈಗ ಕಾಡುಗಳಿಲ್ಲದ, ಕಾಡುಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ. ಕಾಡುಗಳನ್ನೂ ಕಾಡುಪ್ರಾಣಿಗಳನ್ನೂ ಸಂರಕ್ಷಿಸಬೇಕೆಂದು ನಾನು ಹೇಳಿದರೆ ಅದು ನನ್ನ ತಿಳುವಳಿಕೆಯ ಕಾರಣಗಳಿಗಿಂತಲೂ ಹೆಚ್ಚಾಗಿ ಅವುಗಳೊಂದಿಗೆ ನಾನು ಹೊಂದಿರುವ ವ್ಯಕ್ತಿನಿಷ್ಠ ಸಂಬಂಧವೇ ಆಗಿದೆ. ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನೂ, ಅವುಗಳ ಪರಿಸರವನ್ನೂ ಧ್ವಂಸ ಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡಂತಾಗಿ ಮನಸ್ಸು ಖಿನ್ನವಾಗುತ್ತದೆ. ಈ ದುರಂತದ ದುಃಖವನ್ನು ಅಂಕಿ ಸಂಖ್ಯೆಗಳ ಆಧಾರದ ಮೇಲೆ, ಸಿದ್ಧಾಂತಗಳ ಮುಖಾಂತರ ವಿಶ್ಲೇಷಿಸಿ, ಪರಿಸರ ಸಂರಕ್ಷಣೆಯ ಬಗ್ಗೆ ಜನಗಳಿಗೆ ಹೇಳಲು ಮನಸ್ಸೇ ಬರುವುದಿಲ್ಲ. ಏಕೆಂದರೆ, ನಾನು ಕಂಡಂತೆ ಕಾಡನ್ನು ಕಂಡಿಲ್ಲದ, ಅನುಭವಿಸಿಲ್ಲದ ಮನಸ್ಸುಗಳಿಗೆ ನನ್ನ ಮನಸ್ಸಿನ ದುಗುಡವನ್ನು ನಿರ್ಜೀವ ಅಂಕಿಸಂಖ್ಯೆಗಳ ವಿಶ್ಲೇಷಣೆ ಮುಖಾಂತರ ಹೇಳಿ ಹೇಗೆ ತಾನೆ ಪ್ರತಿಸ್ಪಂದನ ಉಂಟುಮಾಡಲಿ?

ನಾನು ಬಹಳ ಚಿಕ್ಕವನಿದ್ದಾಗ ನಮ್ಮ ತಂದೆಯವರೊಡನೆ ಬೆಳಗಿನ ಹೊತ್ತು ವಾಕಿಂಗ್ ಹೋಗುತ್ತಿದ್ದುದು ನೆನಪು. ಆಗ ಮೈಸೂರಿನ ನಮ್ಮ ಮನೆ ಎದುರು ದಿಗಂತದವರೆಗೂ ಹೊಲಗಳೂ, ಕುರುಚಲು ಪೊದೆಗಳ ಬಯಲೂ ಇತ್ತು. ಈಗ ಅವೆಲ್ಲಾ ಸೈಟುಗಳಾಗಿ, ಬಡಾವಣೆಗಳಾಗಿ ಪರಿವರ್ತನೆಯಾಗಿವೆ. ಅಲ್ಲಿ ಕಾಡಾಗಲೀ, ಕಾಡುಪ್ರಾಣಿಗಳಾಗಲೀ ಇರಲಿಲ್ಲ. ಅಲ್ಲಿದ್ದ ಪ್ರಾಣಿಗಳೆಂದರೆ ಓತಿಕ್ಯಾತ, ಹಾವುರಾಣಿ, ಹಾವು, ಒಮ್ಮೊಮ್ಮೆ ಮೊಲಗಳು, ಅಷ್ಟೆ. ಅದನ್ನೇ ಪೇಟೆಯವರು ಕಾಡು ಎಂದು ಕರೆಯುತ್ತಿದ್ದರು. ಅಲ್ಲಿ ಹೊಲಗಳ ನಡುವೆ ಕಾಲುಹಾದಿಯಲ್ಲಿ ನಮ್ಮ ತಂದೆಯವರೊಡನೆ ನಾವೂ ವಾಕಿಂಗ್ ಹೋಗುತ್ತಿದ್ದೆವು.

ಒಮ್ಮೆ ಆ ಕಾಲುಹಾದಿಯಲ್ಲಿ ನಡೆಯುತ್ತಾ ಬಳಿಯಲ್ಲೇ ಕೆಲವು ಬಿಲಗಳನ್ನು ನೋಡಿದೆವು. ಅವು ಕಾಡಿನ ಇಲಿಯ ಬಿಲಗಳೆಂದೂ ಅವುಗಳೊಳಗೆ ಕುಚ್ಚಿನ ಬಾಲದ ಕಾಂಗ್ರೂ ಕಾಡಿಲಿಗಳು ಇರುತ್ತವೆಂದೂ ತಂದೆಯವರು ಹೇಳಿದರು. ಆ ಬಿಲಗಳೊಳಗೆ ನಿಜಕ್ಕೂ ಪ್ರಾಣಿಗಳಿದ್ದಾವೆಂದು ನಮಗೆ ನಂಬಿಕೆ ಬರಲಿಲ್ಲ. ಏಕೆಂದರೆ, ಆ ಬಿಲಗಳು ಅಷ್ಟೊಂದು ನಿರ್ಜೀವವಾಗಿಯೂ, ಜಡವಾಗಿಯೂ ನಮಗೆ ಕಂಡವು. ನಾನೂ, ನನ್ನ ತಮ್ಮ ಚೈತ್ರನೂ ಸೇರಿ ಅಲ್ಲಿದ್ದ ಚಿಕ್ಕ ಚಿಕ್ಕ ಕಲ್ಲು ಹರಳುಗಳನ್ನು ಆ ಬಿಲಗಳ ಬಾಯೊಳಗೆ ತುಂಬಿ ಮುಚ್ಚಿ ಬಿಟ್ಟೆವು.

ಅಚ್ಚರಿಯ ಸಂಗತಿ ಎಂದರೆ ನಾವು ಮಾರನೆ ದಿನ ವಾಕಿಂಗ್ ಹೋದಾಗ ನೋಡಿದರೆ ಬಿಲಗಳೊಳಗೆ ಹಾಕಿದ್ದ ಕಲ್ಲುಗಳೆಲ್ಲಾ ಮಾಯವಾಗಿದ್ದವು. ಇಲಿಗಳು ರಾತ್ರಿ ಯಾವಾಗಲೋ ಹೊರಬಂದು ಆ ಕಲ್ಲುಗಳನ್ನೆಲ್ಲಾ ಹೊರಗೆಲ್ಲೋ ದೂರ ಸಾಗಿಸಿ ತಮ್ಮ ಮನೆ ಬಾಗಿಲನ್ನು ಎಂದಿನಂತೆ ಒಪ್ಪ ಓರಣ ಮಾಡಿಟ್ಟಿದ್ದುವು. ಆ ವಯಸ್ಸಿನಲ್ಲಿ ಅಷ್ಟಕ್ಕೇ ನಮಗೆ ಎಷ್ಟೊಂದು ಆಶ್ಚರ್ಯ, ಸಂತೋಷ ಆಯ್ತೆಂದರೆ ಅದು ಹೇಳಲಸಾಧ್ಯ. ನಮ್ಮ ತಂದೆಯವರು ಹೇಳಿದ್ದು ನಿಜವೆಂದು ಆ ಕಲ್ಲುಗಳನ್ನು ಆಚೆ ಸಾಗಿಸಿ ಸಾಬೀತು ಮಾಡಿದ ಪ್ರಾಣಿಗಳ ಬಗ್ಗೆ ನಮಗೆ ಎಲ್ಲಿಲ್ಲದ ಆಸಕ್ತಿ ಕುತೂಹಲ ಕೆರಳಿತು. ಆ ಬಿಲದ ಪಕ್ಕ ಬಿದ್ದಿದ್ದ ನುಣ್ಣನೆಯ ಧೂಳಿನಲ್ಲಿ ಪಡಿಮೂಡಿದ್ದ ಇಲಿಯ ಹೆಜ್ಜೆ ಗುರುತುಗಳನ್ನೂ ನಮ್ಮ ತಂದೆ ತೋರಿಸಿದರು. ಅಷ್ಟೇ ಅಲ್ಲ, ಈ ಇಲಿಗಳನ್ನು ಹಿಡಿಯಲು ಒಮ್ಮೊಮ್ಮೆ ಹಾವುಗಳು ಬಿಲಗಳೊಳಗೆ ನುಗ್ಗುತ್ತವೆಂದೂ, ಆಗ

ಆ ಇಲಿಗಳು ಬೇರೊಂದು ಕಡೆ ಮಾಡಿಕೊಂಡಿರುವ ಕಳ್ಳ ಹೊರದಾರಿಗಳ ಮುಖಾಂತರ ಪರಾರಿ ಕೀಳುತ್ತವೆಂದೂ ಹೇಳಿದರು. ನಾವು ಅಲ್ಲೆಲ್ಲಾ ಹುಡುಕಾಡಿ ಪೊದೆಗಳಡಿಯಲ್ಲಿ, ಹೊಲಗಳ ತೆವರಿಗಳ ಬಳಿ ಅವು ಮಾಡಿಕೊಂಡಿದ್ದ ಕಳ್ಳದಾರಿಗಳನ್ನೂ ಪತ್ತೆಮಾಡಿದೆವು.

ಈ ನೆನಪನ್ನು ನಿಮಗೇಕೆ ಹೇಳಿದೆನೆಂದರೆ ಇದೇನೂ ನರಭಕ್ಷಕನ ಶಿಕಾರಿಯಂಥ ರೋಮಾಂಚಕ ಸಾಹಸವೇನಲ್ಲ. ಆದರೆ ನಮಗೆ ತಂದೆ, ತಾಯಿ, ಗೆಳೆಯರು, ಸ್ಕೂಲು ಇಷ್ಟರೊಳಗೇ ಸೀಮಿತವಾಗಿದ್ದ ಜೀವಸಮುಚ್ಚಯದ ಕಲ್ಪನೆಯನ್ನು ನಮ್ಮ ಪ್ರಜ್ಞೆಗೆ ಅನೂಹ್ಯವಾಗಿದ್ದ ಹಾವು, ಇಲಿ, ಮೊಲ ಇತ್ಯಾದಿಗಳ ವಿಶ್ವಸಮಾಜದ ಹತ್ತಿರಕ್ಕೆ ಒಯ್ಯಲು ಇವೆಲ್ಲ ಹೇಗೆ ಸಹಾಯ ಮಾಡಿತೆಂದು ಊಹಿಸಲು ಸಾಧ್ಯವಾದರೆ ಸಾಕು. ನಮಗೆ ನಮ್ಮ ಸಮಾಜದ ಹೊರಗಿನ ವಿಶ್ವಸಮಾಜದ ಪರಿಚಯಕ್ಕೆ ನರಭಕ್ಷಕನೇ ಬಂದು ಹೊತ್ತೊಯ್ಯಬೇಕೆ? ಇಲಿಗಳು ಬಿಲಗಳಿಂದ ಕಲ್ಲುಗಳನ್ನು ಎತ್ತಿಟ್ಟರೂ ಸಾಕಲ್ಲವೆ?

ಪ್ರಕೃತಿ ಮತ್ತು ಪರಿಸರದ ಬಗ್ಗೆ ನನಗೆ ಚಿಕ್ಕಂದಿನಿಂದಲೂ ಇರುವ ಕುತೂಹಲಕ್ಕೆ ಮುಖ್ಯಕಾರಣ ನಮ್ಮ ತಂದೆಯವರೇ. ನಮಗೆ ಕುತೂಹಲ ಹುಟ್ಟಿಸಬೇಕೆಂಬ ಉದ್ದೇಶವೇನೂ ಅವರಿಗೆ ಇದ್ದಂತೆ ಕಾಣಲಿಲ್ಲ. ಅದರಲ್ಲಿ ಅವರಿಗೇ ಇದ್ದ ಆಸಕ್ತಿಯ ಪರಿಣಾಮವಾಗಿಯೇ ನಮಗೂ ಆಸಕ್ತಿ ಉಂಟಾಯ್ತು. ನನಗಂತೂ ಈ ಆಸಕ್ತಿ ಎಷ್ಟಾಯ್ತೆಂದರೆ ಓದು ಬರಹ, ವಿದ್ಯಾಭ್ಯಾಸಗಳಲ್ಲಿ ಆಸಕ್ತಿ ಕಡಿಮೆಯಾಯ್ತು. ಫಸ್ಟ್ ಕ್ಲಾಸ್‌ಗಳನ್ನಾಗಲೀ, ರೇಂಕ್‌ಗಳನ್ನಾಗಲೀ ತೆಗೆದುಕೊಳ್ಳಲು ನನ್ನಿಂದ ಕೊನೆವರೆಗೂ ಸಾಧ್ಯವಾಗಲಿಲ್ಲ.

ನನಗೆ ನಮ್ಮ ಮನೆ ಕಿಟಕಿ ಬಳಿ ಗೂಡಿನಲ್ಲಿ ಮರಿಮಾಡಿದ ಪಿಕಳಾರ ಹಕ್ಕಿ, ಎಲೆಗಳನ್ನು ಹೊಲಿದು ಗೂಡು ಮಾಡಿದ ಟುವಿ ಹಕ್ಕಿ, ನಮ್ಮ ನುಗ್ಗೆ ಮರಕ್ಕೆ ಪ್ರತಿ ವರ್ಷ ಹತ್ತಿಕೊಳ್ಳುತ್ತಿದ್ದ ಕಂಬಳಿ ಹುಳುಗಳ ದಂಡು, ನಾವು ಮೈ ಸವರಿ ಬಿಟ್ಟ ಅಳಿಲು ಮರಿಯನ್ನು ಹೆಂಚಿನ ಮೇಲಿಂದ ಅದರ ತಾಯಿ ಬಂದು ಕಚ್ಚಿ ಕೊಂದಿದ್ದು, ಇವೆಲ್ಲ ಕಣ್ಣಿಗೆ ಕಟ್ಟಿದಷ್ಟು ಸ್ಫುಟವಾಗಿ ಜ್ಞಾಪಕವಿದೆ. ಸ್ಕೂಲಿಗೆ ಹೋಗುವ ಕಾಲುಹಾದಿಯಲ್ಲಿ ಒಂದು ದಿನ ಅಪರೂಪಕ್ಕೆ ನಾಚಿಗೆ ಮುಳ್ಳಿನ ಗಿಡ ನೋಡಿದೆವು. ಮುಟ್ಟಿದ ಕೂಡಲೆ ಕೈ ಮುಗಿದಂತೆ ಎಲೆಗಳನ್ನು ಮುಚ್ಚಿಕೊಳ್ಳುವ ಈ ಗಿಡನೋಡಿ ಪವಾಡ ಕಂಡಂತೆ ಚಕಿತರಾಗಿಹೋದೆವು! ಆಗೆಲ್ಲಾ ಓಡಿ ಹೋಗಿ ತಂದೆಯವರ ಬಳಿ ವರದಿ ಒಪ್ಪಿಸುತ್ತಿದ್ದೆವು. ಇವುಗಳೆಲ್ಲದರ ಬಗ್ಗೆ ಅವರು ಹೇಳುತ್ತಿದ್ದ ವ್ಯಾಖ್ಯಾನ, ವಿವರಣೆಗಳು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಅವರ ತಾರುಣ್ಯದ ಕಾಡಿನ ಮತ್ತು ಬೇಟೆಯ ರೋಮಾಂಚಕ ಅನುಭವಗಳನ್ನು ಕೇಳಿ ಪ್ರಭಾವಿತನಾದ ನಾನು ನಮ್ಮ ತಂದೆ ಏಕಾದರೂ ಮೈಸೂರಿಗೆ ಪಾಠ ಹೇಳಲು ಮಲೆನಾಡನ್ನು ತೊರೆದು ಬಂದರೋ ಎಂದು ವ್ಯಥೆಪಡುತ್ತಿದ್ದೆ.

ನಾನು ಮಲೆನಾಡಿನ ಮೂಡಿಗೆರೆಯಲ್ಲಿ ಕಾಡು ತೆಗೆದುಕೊಂಡು ಕಾಫಿ ತೋಟ ಮಾಡಲು ನಿರ್ಧರಿಸಿದ್ದು ವಾಸ್ತವವಾಗಿ ಕಾಫಿ ತೋಟದ ಲಾಭಕ್ಕಾಗಲೀ, ಹಳ್ಳಿಗೆ ಹಿಂದಿರುಗುವ ಆದರ್ಶಕ್ಕಾಗಲೀ, ವ್ಯವಸಾಯದ ಮೇಲಿನ ಪ್ರೀತಿಯಿಂದಾಗಲೀ ಖಂಡಿತ ಅಲ್ಲ. ಯಾರ ಹಂಗು, ಭಯ, ಬೈಯ್ಗುಳಗಳ ಕಾಟವಿಲ್ಲದೆ ಕಾಡು ಮೇಡು ಅಲೆದುಕೊಂಡು ಇರಬಹುದೆಂಬುದೇ ಬಹುಮುಖ್ಯ ಕಾರಣ. ಸುಮ್ಮನೆ ಕೋವಿ ಹೆಗಲಿಗೇರಿಸಿಕೊಂಡು ಕಿವಿ ಜೊತೆ ಕಾಡೊಳಗೆ ಅಲೆಯುತ್ತಾ ಸಾಯಂಕಾಲಕ್ಕೆ ಮೈ ಕೈ ತರಚಿಕೊಂಡು ಮುಳ್ಳು ಚುಚ್ಚಿಸಿಕೊಂಡು ಸುಸ್ತಾಗಿ ಹಿಂದಿರುಗುವುದು ಯಾವ ತರದ ಸಂತೋಷವೋ ಇಂದಿಗೂ ನನಗೆ ಅರ್ಥವಾಗುತ್ತಿಲ್ಲ! ಬಹುಶಃ ಇತರರಿಗೂ ಅರ್ಥ ಮಾಡಿಸಲಾರೆ. ಒಟ್ಟಿನಲ್ಲಿ ಗೊತ್ತುಗುರಿ ಇಲ್ಲದೆ ಕಿವಿ ಮುದಿಯಾಗಿ ಸಾಯುವವರೆಗೂ ಅದರೊಡನೆ ಕಾಡು ತಿರುಗಿದ್ದಂತೂ ನಿಜ.



**ಕೆ. ಪಿ. ಪೂರ್ಣಚಂದ್ರ ತೇಜಸ್ವಿ :** ರಾಷ್ಟ್ರಕವಿ ಕುವೆಂಪು ಅವರ ಮಗನಾದ ಪೂರ್ಣಚಂದ್ರ ತೇಜಸ್ವಿಯವರು 08.09.1938ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿಯಲ್ಲಿ ಜನಿಸಿದರು. ಇವರು ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಲೇಖಕರು. ಗ್ರಾಮೀಣ ಬದುಕನ್ನು, ಪರಿಸರವನ್ನು ತಮ್ಮ ಕಥೆಗಳಲ್ಲಿ ಮತ್ತು ಕಾದಂಬರಿಗಳಲ್ಲಿ ವಿಶಿಷ್ಟವಾಗಿ ನಿರೂಪಿಸಿರುವ ಇವರು ಛಾಯಾಗ್ರಹಣ, ಕೃಷಿ ಮತ್ತು ಪರಿಸರದ ಬಗ್ಗೆ ಆಳವಾದ ಪ್ರೀತಿ ಹೊಂದಿದ್ದರು. ಸ್ವರೂಪ, ನಿಗೂಢ ಮನುಷ್ಯರು (ನೀಳ್ಗತೆಗಳು); ಚಿದಂಬರ ರಹಸ್ಯ, ಜುಗಾರಿ ಕ್ರಾಸ್, ಕರ್ವಾಲೋ (ಕಾದಂಬರಿಗಳು); ಕಿರಗೂರಿನ ಗಯ್ಯಾಳಿಗಳು, ಅಬಚೂರಿನ ಪೋಸ್ಟಾಫೀಸು (ಕಥಾ ಸಂಕಲನಗಳು); ಅಲೆಮಾರಿಯ ಅಂಡಮಾನ್ (ಪ್ರವಾಸ ಸಾಹಿತ್ಯ); ಸಹಜ ಕೃಷಿ (ಕೃಷಿ ಸಂಬಂಧಿ ಕೃತಿ); ಫ್ಲೈಯಿಂಗ್ ಸಾಸರ್, ಮಿಲೇನಿಯಂ ಸೀರೀಸ್ (ಸರಣಿ ಕೃತಿಗಳು) ಇವರ ಕೃತಿಗಳಾಗಿವೆ. ಪಂಪ ಪ್ರಶಸ್ತಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವರಿಗೆ ದೊರೆತಿವೆ. ತೇಜಸ್ವಿಯವರು 05.04.2007ರಂದು ಇಹಲೋಕವನ್ನು ತ್ಯಜಿಸಿದರು. ಪ್ರಸ್ತುತ ಪಾಠಭಾಗವನ್ನು 'ಪರಿಸರದ ಕತೆ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ನವೀನ ಪದಗಳ ಅರ್ಥ

ತಿಲಾಂಜಲಿ - ಎಳ್ಳು ನೀರು. ಬಿಲ – ಮಾಟೆ. ವ್ಯಸನ – ದುಃಖ, ಚಿಂತೆ. ನಾಮಾವಶೇಷ - ಸಂಪೂರ್ಣ ನಾಶ. ಗೌಪ್ಯತೆ - ರಹಸ್ಯ. ಕೋವಿ - ಬಂದೂಕು, ತುಪಾಕಿ. ಸ್ವಾಹಾ – ನುಂಗುವುದು. ನಿಧಿ - ಸಂಪತ್ತು. ಖಿನ್ನತೆ - ದುಃಖ, ಬೇಸರ. ಪ್ರತಿಸ್ಪಂದನ – ಪ್ರತಿಕ್ರಿಯೆ. ಬಿಡಾವಣೆ - ಮನೆಗಳು ಒತ್ತೊತ್ತಾಗಿರುವ ಸ್ಥಳ. ಚಕಿತನಾಗು - ಆಶ್ಚರ್ಯ ಪಡು. ಕ್ವಚಿತ್ತಾಗಿ - ಸ್ಪಷ್ಟವಾಗಿ. ಸಾಬೀತು - ದೃಢಪಡಿಸು, ಖಾತ್ರಿಪಡಿಸು. ಪಡಿ - ಪ್ರತಿರೂಪ. ತೆವರಿ - ಅದಿರು, ದಂಡೆ. ಶಿಖಾರಿ - ಬೇಟೆ. ಅನೂಹ್ಯ - ಊಹಿಸಲು ಸಾಧ್ಯವಾಗದ.

## ವಿರೋಧಾರ್ಥಕ ಪದಗಳು

| | | |
|---|---|---|
| ಜೀವ | × | ನಿರ್ಜೀವ |
| ಜ್ಞಾನ | × | ಅಜ್ಞಾನ |
| ಸಾಧಾರಣ | × | ಅಸಾಧಾರಣ |

## ಉತ್ತರಿಸಿರಿ

1. ಸ್ಪಾನಿಯಲ್ ಜಾತಿಯ ನಾಯಿಗಳ ವೈಶಿಷ್ಟ್ಯವೇನು?
2. ಬಿಲದಲ್ಲಿ ಪ್ರಾಣಿಗಳಿದ್ದಾವೆಂದು ಲೇಖಕರಿಗೆ ನಂಬಿಕೆ ಬಾರದಿರಲು ಕಾರಣವೇನು?
3. ಬಿಲದಲ್ಲಿ ಪ್ರಾಣಿಗಳಿವೆ ಎಂದು ಖಾತ್ರಿಪಡಿಸಲು ಲೇಖಕರು ಮತ್ತು ಅವರ ತಮ್ಮ ಮಾಡಿದ ಉಪಾಯ ಯಾವುದು? ಅದರ ಪರಿಣಾಮವೇನು?
4. ಕಾಡು ಮತ್ತು ಕಾಡಿನ ಪ್ರಾಣಿಗಳ ಬಗ್ಗೆ ಲೇಖಕರಿಗೆ ಆತ್ಮೀಯತೆ ಮೂಡಲು ಸಹಾಯಕವಾದ ಸಂಗತಿಗಳು ಯಾವುವು?
5. ಲೇಖಕರ ದೃಷ್ಟಿಯಲ್ಲಿ ಸ್ಮಶಾನಕ್ಕಿಂತ ಭೀಕರವಾದ ದೃಶ್ಯ ಯಾವುದು?

6. ಲೇಖಕರು ತಮ್ಮ ತಂದೆಯೊಂದಿಗೆ ವಾಕಿಂಗ್ ಹೋಗುವ ಸಂದರ್ಭದಲ್ಲಿ ಗಳಿಸಿದ ಅನುಭವಗಳೇನು?
7. ಇಲಿಯ ಬಿಲದ ನೆನಪುಗಳನ್ನು ಲೇಖಕರು ಹಂಚಿಕೊಳ್ಳಲು ಕಾರಣವೇನು?
8. ತನ್ನ ತಂದೆ ಮಲೆನಾಡನ್ನು ತೊರೆದು ಬಂದಾಗ ತನಗಾದ ವ್ಯಥೆಯನ್ನು ಲೇಖಕರು ಹೇಗೆ ಅಭಿವ್ಯಕ್ತಪಡಿಸಿದ್ದಾರೆ?
9. ಲೇಖಕರು ಕಾಫಿ ತೋಟ ಖರೀದಿಸಲು ಕಾರಣವೇನು?

## ಲೇಖನ ಬರೆಹ

ನೀವು ಮೃಗಾಲಯಕ್ಕೆ ಭೇಟಿ ನೀಡಿದಾಗ ನಿಮಗಾದ ಅನುಭವಗಳನ್ನು ಲೇಖನ ರೂಪದಲ್ಲಿ ಬರೆಯಿರಿ.

## ಕಿರುಪ್ರಬಂಧ ರಚನೆ

ಪ್ರಾಚೀನ ಕಾಲದ ಪ್ರಕೃತಿಗಿಂತ ಈಗಿನ ಪ್ರಕೃತಿಯು ಹೇಗೆ ಬದಲಾಗಿದೆ ಎಂಬುದರ ಕುರಿತು 'ಪರಿಸರದ ಕಥೆ' ಪಾಠದ ಹಿನ್ನಲೆಯಲ್ಲಿ ಕಿರುಪ್ರಬಂಧವನ್ನು ಬರೆಯಿರಿ.

## ಘೋಷಣಾ ವಾಕ್ಯ

ವನಸಂರಕ್ಷಣೆಯ ಮಹತ್ವವನ್ನು ಸಾರುವ ಎರಡು ಘೋಷಣಾ ವಾಕ್ಯಗಳನ್ನು ತಯಾರಿಸಿರಿ.

## ಲಿಖಿತ ಭಾಷಣ

ವನಮಹೋತ್ಸವದ ಅಂಗವಾಗಿ ಶಾಲೆಯಲ್ಲಿ ನಡೆಯುವ ಸ್ಪರ್ಧೆಯಲ್ಲಿ ಮಂಡಿಸಲು 'ನಶಿಸುತ್ತಿರುವ ವನಸಂಪತ್ತು ಮತ್ತು ಅದರ ಪರಿಣಾಮ' ಎಂಬ ವಿಷಯದ ಕುರಿತು ಲಿಖಿತ ಭಾಷಣವೊಂದನ್ನು ತಯಾರಿಸಿರಿ.

## ಆತ್ಮಕಥೆ - ಜೀವನಚರಿತ್ರೆ

ಕೆಳಗೆ ನೀಡಲಾದ ಆತ್ಮಕಥೆಯ ಭಾಗವನ್ನು ಜೀವನಚರಿತ್ರೆಯಾಗಿ ಪರಿವರ್ತಿಸಿ ಬರೆಯಿರಿ.

ಒಮ್ಮೆ ಆ ಕಾಲುಹಾದಿಯಲ್ಲಿ ನಡೆಯುತ್ತಾ ಬಳಿಯಲ್ಲೇ ಕೆಲವು ಬಿಲಗಳನ್ನು ನೋಡಿದೆವು. ಆ ಬಿಲಗಳೊಳಗೆ ನಿಜಕ್ಕೂ ಪ್ರಾಣಿಗಳಿದ್ದಾವೆಂದು ನಮಗೆ ನಂಬಿಕೆ ಬರಲಿಲ್ಲ. ಏಕೆಂದರೆ ಆ ಬಿಲಗಳು ಅಷ್ಟೊಂದು ನಿರ್ಜೀವವಾಗಿಯೂ, ಜಡವಾಗಿಯೂ ನಮಗೆ ಕಂಡವು. ನಾನೂ, ನನ್ನ ತಮ್ಮ ಚೈತ್ರನೂ ಸೇರಿ ಅಲ್ಲಿದ್ದ ಚಿಕ್ಕ ಚಿಕ್ಕ ಕಲ್ಲು ಹರಳುಗಳನ್ನು ಆ ಬಿಲಗಳ ಬಾಯೊಳಗೆ ತುಂಬಿ ಮುಚ್ಚಿ ಬಿಟ್ಟೆವು.

## ವಾಕ್ಯ ರಚನೆ

ಕೆಳಗಿನ ಪದಗಳನ್ನು ಬಳಸಿ ಸ್ವಂತವಾಕ್ಯವನ್ನು ತಯಾರಿಸಿರಿ.

ಕಣ್ಣಿಗೆ ಕಟ್ಟಿದಂತೆ, ಅಚ್ಚಳಿಯದೆ

## ಸರಳ ವಾಕ್ಯ

ಒಂದು ಪೂರ್ಣ ಕ್ರಿಯಾಪದ ಇರುವ ಸ್ವತಂತ್ರ ವಾಕ್ಯವನ್ನು ಸರಳ ವಾಕ್ಯ ಎನ್ನುತ್ತಾರೆ.

ಉದಾ:- ಪ್ರಾಣಿಗಳು ಕಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿವೆ.

## ಮಿಶ್ರವಾಕ್ಯ

ಇದರಲ್ಲಿ ಒಂದು ಮುಖ್ಯ ವಾಕ್ಯವಿದ್ದು, ಅದಕ್ಕೆ ಸಂಬಂಧಿಸಿದಂತೆ ಅಪೂರ್ಣ ಕ್ರಿಯೆಗಳಿರುವ ಅಧೀನ ವಾಕ್ಯಗಳಿರುತ್ತವೆ. ಅಧೀನ ವಾಕ್ಯಗಳು ಸದಾಕಾಲ ಮುಖ್ಯ ವಾಕ್ಯವನ್ನು ಅವಲಂಬಿಸಿರುತ್ತವೆ.

ಉದಾ: ನನ್ನ ಕೈಗೆ ಕೋವಿ ಬರುವ ವೇಳೆಗೆ ಕಾಡುಪ್ರಾಣಿಗಳೆಲ್ಲಾ ಅವನತಿಯ ಹಾದಿ ಹಿಡಿದಿದ್ದರೂ ಈಗಿನಂತೆ ನಾಮಾವಶೇಷವಾಗುವ ಸ್ಥಿತಿಗೆ ಇಳಿದಿರಲಿಲ್ಲ.

**ಕೆಳಗಿನ ಸರಳ ವಾಕ್ಯಗಳನ್ನು ಮಿಶ್ರ ವಾಕ್ಯವಾಗಿ ಪರಿವರ್ತಿಸಿ ಬರೆಯಿರಿ.**

ನಾನು ಬಹಳ ಚಿಕ್ಕವನಿದ್ದೆನು. ಆಗ ನಮ್ಮ ತಂದೆಯವರೊಡನೆ ಬೆಳಗಿನ ಹೊತ್ತು ವಾಕಿಂಗ್ ಹೋಗುತ್ತಿದ್ದುದು ನೆನಪು.

ಆಗ ನಮ್ಮ ಮೈಸೂರಿನ ಮನೆಯ ಎದುರು ಹೊಲಗಳಿದ್ದವು. ಕುರುಚಲು ಪೊದೆಗಳ ಬಯಲೂ ಇತ್ತು.

**ಕೆಳಗೆ ನೀಡಲಾದ ಮಿಶ್ರವಾಕ್ಯಗಳನ್ನು ಎರಡು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.**

ಕಾಡು ಮೃಗಗಳನ್ನು ಜೂಗಳಲ್ಲಿ ನೋಡಿದಾಗ ನನಗೆ ಆದ ಅನುಭವ ಅಸಾಧಾರಣವಾದುದು.

ಪ್ರಕೃತಿ ಮತ್ತು ಪರಿಸರದ ಬಗ್ಗೆ ನನಗೆ ಚಿಕ್ಕಂದಿನಿಂದಲೂ ಇರುವ ಕುತೂಹಲಕ್ಕೆ ಮುಖ್ಯ ಕಾರಣ ನಮ್ಮ ತಂದೆಯವರೇ.

## ನಿಷೇಧಾರ್ಥಕ ಕ್ರಿಯಾ ಪದಗಳು

ಯಾವುದೇ ಒಂದು ಕ್ರಿಯೆಯು ನಡೆಯಲಿಲ್ಲ ಎಂಬುದನ್ನು ಸೂಚಿಸುವ ಕ್ರಿಯಾಪದವನ್ನು ನಿಷೇಧಾರ್ಥಕ ಕ್ರಿಯಾಪದ ಎನ್ನುತ್ತಾರೆ.

ಅವನು ಮನೆ ಬಿಟ್ಟು ಎಲ್ಲಿಗೂ <u>ಹೋಗನು</u>.

ತಾಯಿಯು ಮಗನನ್ನು <u>ತೊರೆಯಳು</u>.

ನಾನು ಎಂದೂ ತಪ್ಪನ್ನು <u>ಮಾಡೆನು</u>.

ನಾವು ಎಂದೂ ಸುಳ್ಳನ್ನು <u>ಹೇಳೆವು</u>.

ಮೇಲಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳು ಆಯಾ ಕ್ರಿಯೆ (ಹೋಗು, ತೊರೆ, ಮಾಡು, ಹೇಳು) ನಡೆಯಲಿಲ್ಲ ಎಂಬುದನ್ನು ಸೂಚಿಸುತ್ತವೆ. ಆದುದರಿಂದ ಈ ಕ್ರಿಯಾರೂಪಗಳೆಲ್ಲವೂ ನಿಷೇಧ ಕ್ರಿಯಾರೂಪಗಳು.

ಕೆಳಗೆ ನೀಡಲಾದ ಮಾದರಿ ವಾಕ್ಯಗಳನ್ನು ಗಮನಿಸಿರಿ.

ನಮ್ಮ ತಂದೆಯವರೊಡನೆ ನಾವು ವಾಕಿಂಗ್ ಹೋಗುವೆವು.

ನಮ್ಮ ತಂದೆಯವರೊಡನೆ ನಾವು ವಾಕಿಂಗ್ ಹೋಗೆವು.

ಕೆಳಗೆ ಕೊಟ್ಟ ಪದಗಳ ನಿಷೇಧಾರ್ಥಕ ರೂಪವನ್ನು ಬರೆಯಿರಿ.

ಆಡು, ಕಾಣು, ನೋಡು.

# ನೀನಿಲ್ಲದಿವೆಲ್ಲ ಮೊಳವೆ

ರನ್ನ



**ಸಂದರ್ಭ**

ಕುರುಕ್ಷೇತ್ರ ಯುದ್ಧದಲ್ಲಿ ಕೌರವಾಧಿಪತಿಯಾದ ದುರ್ಯೋಧನನು ಸಂಜಯನೊಂದಿಗೆ ಯುದ್ಧ ಭೂಮಿಯನ್ನು ವೀಕ್ಷಿಸುತ್ತಾ ಮುಂದುವರಿಯುತ್ತಿದ್ದಾನೆ. ಕೌರವ ಸೇನೆಯನ್ನು ಮುನ್ನಡೆಸುತ್ತಿದ್ದ ತನ್ನ ಬಂಧುಗಳು, ಸ್ನೇಹಿತರು, ಯೋಧರು ಮಡಿದು ಬಿದ್ದ ದೃಶ್ಯವನ್ನು ಕಾಣುತ್ತಾನೆ. ಪ್ರಸ್ತುತ ಭಾಗದಲ್ಲಿ ತನ್ನ ಮಗನಾದ ಲಕ್ಷಣ ಕುಮಾರ, ತಮ್ಮನಾದ ದುಶ್ಯಾಸನ ಹಾಗೂ ಆತ್ಮೀಯ ಗೆಳೆಯನಾದ ಕರ್ಣನ ಕಳೇಬರವನ್ನು ಕಂಡು ಶೋಕಾಕುಲನಾದ ಕೌರವನ ಕರುಣರಸ ಪ್ರಧಾನವಾದ ಮಾತುಗಳು ಚಿತ್ರಿತವಾಗಿವೆ.

ಕಂ। ಜನಕಂಗೆ ಜಲಾಂಜಲಿಯಂ
ತನೂಭವಂ ಕುಡುವುದುಚಿತಮದುಗೆಟ್ಟೀಗಳ್।
ನಿನಗಾಂ ಕುಡುವಂತಾದುದೆ
ತನೂಜ ನೀಂ ಕ್ರಮವಿಪರ್ಯಯಂ ಮಾಡುವುದೇ ॥

ವ। ಜನನೀ ಸ್ತನ್ಯಮನುಂಡೆನಾಂ ಬೞಿಕೆ ನೀಂ ಸೋಮಾಮೃತಂ ದಿವ್ಯ ಭೋ
ಜನಮೆಂಬಿಂತಿವನುಂಡೆನಾಂ ಬೞಿಕ ನೀಂ ಬಾಲತ್ವದಿಂದೆಲ್ಲಿಯುಂ।
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂೞ್ ತಡಮಾಯ್ತಿದೊಂದೆಡೆಯೊಳಂ ಹಾ ವತ್ಸ ದುಶ್ಯಾಸನಾ ॥

ವ। ಎಂದು ವಿಪ್ರಳಾಪಂಗೆಯ್ದು ತನ್ನ ತಮ್ಮನ ಕಳೇಬರಮಂ ನೋಡಲಾಱದೆ
ಅಲ್ಲಿಂ ತಳರ್ದು ದಿನಕರತನೂಜನಂ ರಾಜಾಧಿರಾಜಂ ನೋಡಿ ಭಾಷ್ಪವಾರಿ
ಧಾರಾಪೂರಿತ ಲೋಚನನುಮಾಗಿ

ಕಂ। ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕಱಿದ ಬಱಿ।
ಕ್ಕಾನುಂ ನೀನೆ ದಲೀಗಳ್
ನೀನುಮಗಲ್ದೆತ್ತವೋದೆಯಂಗಾಧಿಪತೀ॥

ನಿನ್ನ ಕೆಳೆಯಂ ಸುಯೋಧನ
ನಂ ನೋಡದೆ ನುಡಿಯದಪ್ಪಿಕೊಳ್ಳದೆ ಬೆಸನೇ।
ನೆನ್ನದೆ ಜೀಯೆನ್ನದೆ ದೇ
ವೆನ್ನದೆ ಯೇಕುಸಿರದಿರ್ಪೆಯಂಗಾಧಿಪತೀ॥

ಅನೃತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ।
ದನ ನನ್ನಿ ಚಾಗಮಣ್ಮೆಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್॥

ಆನಱಿವೆಂ ಪೃಥೆಯಱಿವಳ್
ದಾನವರಿಪುವಱಿವನರ್ಕನಱಿವಂ ದಿವ್ಯ।
ಜ್ಞಾನಿ ಸಹದೇವನಱಿವಂ
ನೀನಾರ್ಗೆಂದಾರುಮಱಿಯರಂಗಾಧಿಪತೀ॥

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್।
ನೀನುಳ್ಳೊಡುಂಟು ಪೀಱಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ॥

**ರನ್ನ :** ರನ್ನ ಹತ್ತನೇ ಶತಮಾನದ ಕವಿ. ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಇವನ ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ. ಇವನು ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನ ಕವಿಯಾಗಿದ್ದನು. ಇವನು ಸಾಹಸಭೀಮ ವಿಜಯಂ (ಗದಾಯುದ್ಧ), ಅಜಿತನಾಥ ಪುರಾಣ ತಿಲಕಂ, ಪರಶುರಾಮ ಚರಿತಂ, ಚಕ್ರೇಶ್ವರ ಚರಿತಂ ಎಂಬ ಕಾವ್ಯಗಳನ್ನು ಬರೆದಿದ್ದಾನೆ. 'ರನ್ನ ಕಂದ' ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದು ಬರುತ್ತದೆ. ಇವನಿಗೆ ತೈಲಪನು 'ಕವಿಚಕ್ರವರ್ತಿ' ಎಂಬ ಬಿರುದನ್ನು ಕೊಟ್ಟಿರುವನು. ಈತನು ಕನ್ನಡದ ರತ್ನತ್ರಯರಲ್ಲಿ ಒಬ್ಬನಾಗಿದ್ದಾನೆ. ಪ್ರಸ್ತುತ ಪದ್ಯಭಾಗವನ್ನು ರನ್ನನ ಗಧಾಯುದ್ಧ ಕೃತಿಯ ಚತುರ್ಥ ಮತ್ತು ಪಂಚಮಾಶ್ವಾಸಗಳಿಂದ ಆಯ್ದುಕೊಳ್ಳಲಾಗಿದೆ.

## ನವೀನ ಪದಗಳ ಅರ್ಥ

ಜಲಾಂಜಲಿ - ತರ್ಪಣೋದಕ, ತಿಲೋದಕ. ತನೂಭವ – ಮಗ. ಉಚಿತ – ಸರಿ, ರೂಢಿ. ಕುಡುವಂತೆ - ಕೊಡುವಂತೆ. ತನೂಜ – ಮಗ. ಕ್ರಮವಿಪರ್ಯ - ಕ್ರಮತಪ್ಪಿ. ಜನನೀಸ್ತನ್ಯ - ತಾಯಿಯ ಎದೆ ಹಾಲು. ಬಾಲತ್ವ - ಬಾಲ್ಯ. ಮೊನೆ - ಯುದ್ಧ. ಸೂಱ್ - ಕ್ರಮ, ಸರದಿ. ಅಗಲ್ದು - ಬೇರ್ಪಟ್ಟು, ಅಗಲಿ. ಬೆಸನ – ಆಜ್ಞೆ, ಕೆಲಸ. ಜೀಯ – ಒಡೆಯ. ಅನೃತ – ಸುಳ್ಳು. ನನ್ನಿ - ಸತ್ಯ. ಚಾಗ – ತ್ಯಾಗ. ಅಣ್ಮು - ಪರಾಕ್ರಮ. ಪೃಥೆ - ಕುಂತಿ. ದಾನವರಿಪು - ಶ್ರೀಕೃಷ್ಣ. ಅರ್ಕ – ಸೂರ್ಯ. ಬೆಳ್ಗೊಡೆ - ಶ್ವೇತಚ್ಛತ್ರ, ಚಕ್ರವರ್ತಿಯ ಸ್ಥಾನ ಸೂಚಕ ಕೊಡೆ. ಪೀಳಿಗೆ - ಸಂತಾನ, ಪರಂಪರೆ. ಒಳವೇ - ಸಾಧ್ಯವೇ. ಕಳೇಬರ – ಶವ. ಭಾಷ್ಪವಾರಿ - ಕಣ್ಣೀರು. ವಿಪ್ರಲಾಪ – ಪ್ರಲಾಪಿಸು.

## ವಿಶದೀಕರಣ

**ಱ > ರ, ೞ > ಳ ಧ್ವನಿವ್ಯತ್ಯಾಸ :** ಱ > ರ (ಶಕಟರೇಫ > ರೇಫವಾಗಿರುವುದು) ೞ > ಳ (ಱೞ > ಕುಳವಾಗಿರುವುದು) ಇದು ಕನ್ನಡದಲ್ಲಿ ನಡೆದ ಒಂದು ಪ್ರಮುಖ ಧ್ವನಿವ್ಯತ್ಯಾಸ. ಈ (ಱ, ೞ) ಧ್ವನಿಗಳು ಉಚ್ಚಾರಣೆಯಲ್ಲಿ ಅಸ್ತಿತ್ವವನ್ನು ಕಳಕೊಂಡು ರ, ಳ ಗಳೊಂದಿಗೆ ಸೇರ್ಪಡೆಗೊಂಡಿವೆ.

**ಉದಾ:** ಬೞಿಕ > ಬಳಿಕ

ಬೇಱ್ > ಬೇರೆ

## ಪದವಿಂಗಡಣೆ

ಜಲಾಂಜಲಿ = ಜಲ + ಅಂಜಲಿ

ಕುಡುವುದುಚಿತಮದುಗೆಟ್ಟೀಗಳ್ = ಕುಡುವುದು + ಉಚಿತಂ + ಅದು + ಕೆಟ್ಟು + ಈಗಳ್

ವಿನಯೋಲ್ಲಂಘನಮಾದುದಿಲ್ಲ = ವಿನಯ + ಉಲ್ಲಂಘನಮ್ + ಆದುದು + ಇಲ್ಲ

ದಿವ್ಯಭೋಜನಮೆಂಬಿಂತಿವನುಂಡೆನಾಂ = ದಿವ್ಯಭೋಜನಮ್ + ಎಂಬ + ಇಂತು + ಇವನ್ + ಉಂಡೆನ್ + ಆಂ

ತಡಮಾಯ್ತಿದೊಂದೆಡೆಯೊಳಂ = ತಡಮಾಯ್ತು + ಇದು + ಒಂದು + ಎಡೆಯೊಳಂ

ನೀನುಮಗಲ್ದೆತ್ತವೋದೆಯಂಗಾಧಿಪತೀ = ನೀನುಮ್ + ಅಗಲ್ದು + ಎತ್ತ + ಪೋದೆಯ್ + ಅಂಗಾಧಿಪತೀ

ಏಕುಸಿರದಿರ್ಪೆಯಂಗಾಧಿಪತೀ = ಏಕೆ + ಉಸಿರದೆ + ಇರ್ಪೆ + ಅಂಗಾಧಿಪತೀ

ದಾನವರಿಪುವಱಿವನರ್ಕನಱಿವಂ = ದಾನವರಿಪು + ಅಱಿವನ್ + ಅರ್ಕನ್ + ಅಱಿವಂ

ನೀನಾರ್ಗೆಂದಾರುಮಱಿಯರಂಗಾಧಿಪತೀ = ನೀನು +ಆರ್ಗೆ+ಎಂದು+ಆರುಮ್ + ಅಱಿಯರ್+ಅಂಗಾಧಿಪತೀ

ನೀನಿಲ್ಲದಿವೆಲ್ಲಮೊಳವೆ = ನೀನು + ಇಲ್ಲದೆ + ಇವೆಲ್ಲಂ + ಒಳವೆ

## ಉತ್ತರಿಸಿರಿ

1. ತನ್ನ ಮಗನ ಕಳೇಬರವನ್ನು ಕಂಡು ದುರ್ಯೋಧನನು ದುಃಖದಿಂದ ಆಡಿದ ಮಾತುಗಳಾವುವು?
2. ದುಶ್ಶಾಸನನ ವಿನಯಶೀಲ ಗುಣ ಯಾವುದು?
3. ಕರ್ಣನ ಜನ್ಮ ರಹಸ್ಯವನ್ನು ಯಾರೆಲ್ಲ ಅರಿತಿದ್ದರು?
4. ದುರ್ಯೋಧನನು ಕರ್ಣನ ಗುಣವನ್ನು ಹೇಗೆ ಪ್ರಶಂಸಿಸಿದ್ದಾನೆ?
5. ದುರ್ಯೋಧನನಿಗೆ ಕರ್ಣನ ಮೇಲಿನ ಪ್ರೀತಿ ಹೇಗೆ ವ್ಯಕ್ತವಾಗಿದೆ?

## ಆಶಯ ಬರಹ

'ನೀನಿಲ್ಲದಿವೆಲ್ಲಮೊಳವೆ' ಕಾವ್ಯಭಾಗದ ಆಶಯವನ್ನು ಬರೆಯಿರಿ.

## ಸಂದರ್ಭ ವಿವರಣೆ

'ನೀಂ ಕ್ರಮವಿಪರ್ಯಯಂ ಮಾಡುವುದೇ' - ಈ ಮಾತನ್ನು ಸಂದರ್ಭ ಸಹಿತ ವಿವರಿಸಿರಿ.

## ಕಿರುಲೇಖನ ತಯಾರಿ

ದುರ್ಯೋಧನ, ದುಶ್ಶಾಸನ ಮತ್ತು ಕರ್ಣರ ನಡುವಿನ ಸಹಬಾಳ್ವೆಯ ಕುರಿತು 'ನೀನಿಲ್ಲದಿವೆಲ್ಲಮೊಳವೆ' ಕಾವ್ಯಭಾಗದಿಂದ ತಿಳಿದಿರುವಿರಿ. ಇದರ ಹಿನ್ನೆಲೆಯಲ್ಲಿ ಸಮಾಜದಲ್ಲಿ ಸಹಬಾಳ್ವೆಯ ಬದುಕಿನ ಅನಿವಾರ್ಯತೆಯ ಕುರಿತು ಕಿರುಲೇಖನ ಬರೆಯಿರಿ.

## ಪಾತ್ರಚಿತ್ರಣ

ಕಾವ್ಯ ಭಾಗದ ಆಧಾರದಲ್ಲಿ ದುರ್ಯೋಧನನ ಪಾತ್ರಚಿತ್ರಣ ಮಾಡಿರಿ.

## ಸ್ವಾರಸ್ಯ ಬರಹ

ಕೆಳಗಿನ ಪದ್ಯ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಜನನೀ ಸ್ತನ್ಯಮನುಂಡೆನಾಂ ಬೞಿಕೆ ನೀಂ ಸೋಮಾಮೃತಂ ದಿವ್ಯ ಭೋ
ಜನಮೆಂಬಿಂತಿವನುಂಡೆನಾಂ ಬೞಿಕ ನೀಂ ಬಾಲತ್ವದಿಂದೆಲ್ಲಿಯುಂ ।
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂೞ್ ತಡಮಾಯ್ತಿದೊಂದೆಡೆಯೊಳಂ ಹಾ ವತ್ಸ ದುಶ್ಶಾಸನಾ॥

## ಪರಿವರ್ತಿಸಿ ಬರೆಯಿರಿ

ೞ, ೞ ಕಾರವಿರುವ ಪದಗಳನ್ನು ಪಾಠ ಭಾಗದಿಂದ ಸಂಗ್ರಹಿಸಿ ಪರಿವರ್ತಿಸಿ ಬರೆಯಿರಿ.

## ಕಂದಪದ್ಯ

**ಕಂದ ಪದ್ಯದ ಲಕ್ಷಣಗಳು ಈ ಕೆಳಗಿನಂತಿವೆ :**

ಕಂದಪದ್ಯವು ಆದಿಪ್ರಾಸ ನಿಯತವಾಗಿದೆ. ಇದರ ಒಂದು ಮತ್ತು ಮೂರನೇ ಸಾಲುಗಳು ಕಿರುಚರಣಗಳಾಗಿದ್ದು, ಇಲ್ಲಿ ಪ್ರತಿ ಚರಣದಲ್ಲೂ ನಾಲ್ಕು ಮಾತ್ರೆಯ ಮೂರು ಗಣಗಳಿದ್ದು ಒಟ್ಟು ಹನ್ನೆರಡು ಮಾತ್ರೆಗಳು ಬರುತ್ತವೆ. ಎರಡು ಮತ್ತು ನಾಲ್ಕನೇ ಸಾಲುಗಳು ಹಿರಿಚರಣಗಳಾಗಿದ್ದು ಇಲ್ಲಿ ನಾಲ್ಕು ಮಾತ್ರೆಯ ಐದು ಗಣಗಳಿಂದ ಕೂಡಿದ ಒಟ್ಟು ಇಪ್ಪತ್ತು ಮಾತ್ರೆಗಳು ಬರುತ್ತವೆ.ಕಂದ ಪದ್ಯವು ಒಟ್ಟು ಅರುವತ್ತನಾಲ್ಕು ಮಾತ್ರೆಗಳನ್ನು ಒಳಗೊಂಡಿರುತ್ತದೆ. ಕಂದಪದ್ಯದ ವಿಷಮ ಸ್ಥಾನಗಳಲ್ಲಿ ಜಗಣ (U__U) ಬರಕೂಡದು. ಆರನೆಯ ಗಣಸ್ಥಾನದಲ್ಲಿ ಜಗಣ (U__U) ಅಥವಾ ನಾಲ್ಕು ಲಘುಗಳಿಂದ (UUUU) ಕೂಡಿದ ಗಣ ಬರಬೇಕು. ಎರಡು ಮತ್ತು ನಾಲ್ಕನೆಯ ಸಾಲಿನ ಅಂತ್ಯದಲ್ಲಿ ಗುರು ಬರಬೇಕು.

| | | |
|---|---|---|
| __ __ | U __ U | __ __ |
| ನೀನು | ಳ್ದೊಡುಂಟು | ರಾಜ್ಯಂ |

| | | | | |
|---|---|---|---|---|
| __ __ | UU __ | U __ U | __ UU | __ __ |
| ನೀನು | ಳ್ದೊಡೆಪ | ಟ್ಟಮುಂಟು | ಬೆಳ್ಗೊಡೆ | ಯುಂಟಯ್ |

| | | |
|---|---|---|
| __ __ | U __ U | __ U U |
| ನೀನು | ಳ್ದೊಡುಂಟು | ಪೀಱಿಗೆ |

| | | | | |
|---|---|---|---|---|
| __ __ | U U __ | U UUU | __ __ | UU __ |
| ನೀನಿ | ಲ್ಲದಿವೆ | ಲ್ಲಮೊಳವೆ | ಅಂಗಾ | ಧಿಪತೀ |

**ಕೆಳಗಿನ ಪದ್ಯಸಾಲುಗಳಿಗೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿರಿ.**

ಅನೃತಂ ಲೋಭಂ ಭಯಮೆಂ

ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ ।

ದನ ನನ್ನಿ ಚಾಗಮಣ್ಮೆಂ

ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್ ॥

**ಕಷ್ಟದಲ್ಲಿ ಸಹಾಯ ಮಾಡುವವನೇ ನಿಜವಾದ ಸ್ನೇಹಿತ**

# ಇರಬೇಕು ಇರುವಂತೆ

ಎಚ್. ಎಸ್. ವೆಂಕಟೇಶಮೂರ್ತಿ



ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ

ತನ್ನೊಡಲ ತಾರೆಗಳ ಗುಡಿಸಿ ರಾಶಿಯ ಮಾಡಿ
ಬೆಳಕಿನುಂಡೆಯ ಬಾನಿಗುರುಳು ಬಿಟ್ಟು
ಹೇಗೆ ಮರೆಯಾಗುವುದೊ ನಿರ್ಧನಿಕ ನಟ್ಟಿರುಳು
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು

ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವಗೆ
ತಣ್ಣಗಿನ ಆಸರೆಯ ನೆರಳ ಕೊಟ್ಟು
ಹೇಗೆ ಗೆಲುವಾಗುವುದೋ ಹಸಿರೆಲೆಯ ಹೊಂಗೆ ಮರ
ಹಾಗೆ ಬಾಳಿಸು ಗುರುವೆ ಪ್ರೀತಿಯಿಟ್ಟು

ತಾನು ಕೆಸರಲಿ ಕುಸಿಯುತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ಹೇಗೆ ತಾಯ್ತನವನ್ನು ಪ್ರೀತಿಯಲಿ ಮೆರೆಯುವುದೋ
ಹಾಗೆ ಬಾಳಿಸು ಗುರುವೆ ಕರುಣೆಯಿಟ್ಟು

ದಾರಿಯುದ್ದಕೂ ಪೈರು ನಗುವಂತೆ ನೀರುಣಿಸಿ
ಹಾಲುತೆನೆಯಲಿ ಅಮೃತ ತುಂಬಿ ನದಿಯು
ಹೇಗೆ ದೂರದ ನೀಲಿಯಲ್ಲಿ ಕೊನೆಗೊಳ್ಳುವುದೋ
ಹಾಗೆ ಕೊನೆಗಾಣಿಸು ಕೃಪೆಯನಿಟ್ಟು.



**ಎಚ್. ಎಸ್. ವೆಂಕಟೇಶಮೂರ್ತಿ :** ಹೊದಿಗೆರೆ ಶಾನುಭೋಗ್ ವೆಂಕಟೇಶಮೂರ್ತಿ (23 ಜೂನ್ 1944 - 30 ಮೇ 2025), ಕನ್ನಡದ ಕವಿ, ನಾಟಕಕಾರ, ವಿಮರ್ಶಕ ಮತ್ತು ಸಾಹಿತ್ಯ ವಿದ್ವಾಂಸರಾಗಿ ಪ್ರಸಿದ್ಧರಾಗಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ ಇವರು ಬೆಂಗಳೂರಿನ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ ನಿವೃತ್ತರಾದರು. 'ಕನ್ನಡದಲ್ಲಿ ಕಥನ ಕವನಗಳು' ಎಂಬ ವಿಷಯದಲ್ಲಿ ಸಂಶೋಧನೆಯನ್ನು ನಡೆಸಿ ಪಿ. ಹೆಚ್. ಡಿ. ಪದವಿಯನ್ನು ಪಡೆದಿದ್ದಾರೆ. ಆಳವಾದ ಚಿಂತನೆ, ಸುಲಭಗ್ರಾಹ್ಯ ನಿರೂಪಣೆ, ಆಕರ್ಷಕ ಶೈಲಿ ಇವರ ಬರವಣಿಗೆಯ ವೈಶಿಷ್ಟ್ಯ. ಪರಿವೃತ್ತ, ಬಾಗಿಲ ಬಡಿವ ಜನ, ಮೊಗ್ಗಾ, ಕ್ರಿಯಾಪರ್ವ, ಒಣಮರದ ಗಿಳಿಗಳು, ಸೌಗಂಧಿಕ, ಇಂದುಮುಖಿ, ಹರಿಗೋಲು, ಮರೆತ ಸಾಲುಗಳು, ಎಲೆಗಳು ನೂರಾರು, ಅಗ್ನಿ ಸ್ತಂಭ, ಎಷ್ಟೊಂದು ಮುಗಿಲು (ಕವನ ಸಂಕಲನಗಳು); ಹೆಜ್ಜೆಗಳು, ಒಂದು ಸೈನಿಕ ವೃತ್ತಾಂತ, ಕತ್ತಲೆಗೆ ಎಷ್ಟು ಮುಖ, ಉರಿಯ ಉಯ್ಯಾಲೆ, ಹೂವಿ ಮತ್ತು ಸಂಧಾನ (ನಾಟಕಗಳು); ಬಾನಸವಾಡಿಯ ಬೆಂಕಿ, ಪುಟ್ಟಾರಿಯ ಮತಾಂತರ (ಕಥಾ ಸಂಕಲನಗಳು); ನೂರು ಮರ ನೂರು ಸ್ವರ, ಕಥನ ಕವನ, ಮೇಘದೂತ, ಕವಿತೆಯ ಜೋಡಿ, ಆಕಾಶದ ಹಕ್ಕು (ವಿಮರ್ಶಾ ಲೇಖನಗಳು) ಇವರ ಪ್ರಮುಖ ಕೃತಿಗಳಾಗಿವೆ. ಇವರು ಬರೆದ ಅನೇಕ ಕವಿತೆಗಳು, ನಾಟಕಗಳು ಹಿಂದಿ, ಇಂಗ್ಲಿಷ್, ತೆಲುಗು, ತಮಿಳಿಗೆ ಅನುವಾದಗೊಂಡಿವೆ. ಸಂಸ್ಕೃತ ನಾಟಕ ಹಾಗೂ ಬಂಗಾಳಿ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕಾಳಿದಾಸನ 'ಋತುಸಂಹಾರ'ದ ಅನುವಾದಕ್ಕಾಗಿ ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ದೇವರಾಜ್ ಬಹದ್ದೂರ್ ಪ್ರಶಸ್ತಿ, ಬಿ.ಎಚ್. ಶ್ರೀಧರ ಪ್ರಶಸ್ತಿ, ದಿನಕರ ದೇಸಾಯಿ ಪ್ರತಿಷ್ಠಾನ ಪ್ರಶಸ್ತಿ ಮೊದಲಾದ ಗೌರವಗಳು ಸಂದಿವೆ.

## ನವೀನ ಪದಗಳ ಅರ್ಥ

ತಾರೆ - ನಕ್ಷತ್ರ. ನಟ್ಟಿರುಳು - ನಡುರಾತ್ರಿ. ಪೊರೆ – ಸಲಹು. ಪೈರು - ಬೆಳೆ. ತೆನೆ - ಕಾಳಿನ ಗೊಂಚಲು, ಕದಿರು. ಕೃಪೆ - ಕರುಣೆ. ನಿರ್ಧನಿಕ – ಬಡವ.

## ವಿಶದೀಕರಣ

**ಹೊಂಗೆ ಮರ :** ಇದು ನಿತ್ಯಹಸಿರಿನಿಂದ ಕೂಡಿದ ಮಧ್ಯಮ ಗಾತ್ರದ ಮರವಾಗಿದೆ. ಇದರ ಎಲೆಗಳು ಹಸಿರು ಮತ್ತು ಹೊಳಪಿನಿಂದ ಕೂಡಿರುತ್ತವೆ.ಹೂವುಗಳು ಗಾಢ ನೀಲಿವರ್ಣದಿಂದ ಕೂಡಿದ್ದು ಗುಚ್ಛಾಕಾರವಾಗಿ ಎಲೆಗಳ ನಡುವೆ ಕಂಗೊಳಿಸುತ್ತವೆ. ಬೀಜಗಳು ಗಟ್ಟಿಯಾಗಿದ್ದು ಇದರಿಂದ ಎಣ್ಣೆಯನ್ನು ತಯಾರಿಸುತ್ತಾರೆ. ಕನ್ನಡ ಕಾವ್ಯಗಳಲ್ಲಿ ಈ ಮರದ ವರ್ಣನೆಯನ್ನು ಕಾಣಬಹುದು.

## ಉತ್ತರಿಸಿರಿ

1. ತಾವರೆಯ ವೈಶಿಷ್ಟ್ಯವನ್ನು ಕವಿ ಹೇಗೆ ಕಟ್ಟಿಕೊಟ್ಟಿದ್ದಾರೆ?
2. ಹೊಂಗೆ ಮರದ ಪರೋಪಕಾರ ಗುಣವನ್ನು ಕವಿ ಹೇಗೆ ಚಿತ್ರಿಸಿದ್ದಾರೆ?
3. 'ಇರಬೇಕು ಇರುವಂತೆ' ಕವನವು ಸಮಾಜಕ್ಕೆ ನೀಡುವ ಸಂದೇಶವೇನು?
4. ಇರುಳು ಹೇಗೆ ಮರೆಯಾಯಿತು ಎಂದು ಕವಿ ಹೇಳಿರುವರು?
5. ನದಿಯ ನಿಸ್ವಾರ್ಥ ಮನೋಭಾವವನ್ನು ಕವಿ ಹೇಗೆ ಅನಾವರಣಗೊಳಿಸಿದ್ದಾರೆ?

## ಆಸ್ವಾದನಾ ಟಿಪ್ಪಣಿ

'ಇರಬೇಕು ಇರುವಂತೆ' ಕವನದ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ.

## ವಿಚಾರಗೋಷ್ಠಿ ಪ್ರಬಂಧ

'ಇರಬೇಕು ಇರುವಂತೆ' ಕವನದಲ್ಲಿ ನಿಸ್ವಾರ್ಥ ಸೇವೆಯ ಕುರಿತು ತಿಳಿದಿರುವಿರಿ. ಇದರ ಆಧಾರದಲ್ಲಿ 'ಪ್ರಕೃತಿಯಿಂದ ಮನುಷ್ಯ ಕಲಿಯಬಹುದಾದ ವಿಚಾರಗಳು' ಎಂಬ ವಿಷಯದ ಕುರಿತು ವಿಚಾರಗೋಷ್ಠಿಯಲ್ಲಿ ಮಂಡಿಸಲು ಯೋಗ್ಯವಾದ ಪ್ರಬಂಧವನ್ನು ಬರೆಯಿರಿ.

## ಕವಿಗೋಷ್ಠಿ

ಪ್ರಕೃತಿಯನ್ನುವಸ್ತುವಾಗಿರಿಸಿಕೊಂಡು ಕವನಗಳನ್ನುರಚಿಸಿ, ತರಗತಿಯಲ್ಲಿನಡೆಯುವ ಕವಿಗೋಷ್ಠಿಯಲ್ಲಿ ಮಂಡಿಸಿರಿ.

## ಟಿಪ್ಪಣಿ ಬರಹ

ಮಾನವನ ಬದುಕನ್ನು ಸಾಕಾರಗೊಳಿಸುವ ಪ್ರಕೃತಿಯ ನಿಸ್ವಾರ್ಥ ಭಾವಗಳನ್ನು ಗುರುತಿಸಿ ಟಿಪ್ಪಣಿ ಬರೆಯಿರಿ.

## ಪರ್ಯಾಯ ಪದಗಳು

ಬಾನು - ಆಕಾಶ, ಅಂಬರ, ನಭ, ಗಗನ

ರಾತ್ರಿ - ರಜನಿ, ತಿಮಿರ, ಕತ್ತಲು, ಇರುಳು

ಪಠ್ಯಭಾಗದಲ್ಲಿ ಬಂದಿರುವ ಇಂತಹ ಪದಗಳನ್ನು ಪಟ್ಟಿ ಮಾಡಿ ಅದಕ್ಕೆ ಪರ್ಯಾಯ ಪದಗಳನ್ನು ಬರೆಯಿರಿ.

**ಸೇವೆಯು ಸಮಾಜದ ಋಣ ತೀರಿಸುವ ಒಂದು ಸುಂದರ ಮಾರ್ಗ**

# ಅಮೇರಿಕದಲ್ಲಿ ಗೊರೂರು

ಗೊರೂರು ರಾಮಸ್ವಾಮಿ ಅಯ್ಯಂಗಾರ್






ಅಮೇರಿಕದಲ್ಲಿ ಗಂಡ-ಹೆಂಡತಿ ಇಬ್ಬರೂ ಸಾಧಾರಣವಾಗಿ ಕೆಲಸಕ್ಕೆ ಹೋಗುತ್ತಾರೆ. ಒಂದು ದಿನ ನನ್ನ ಮಗಳು ಮತ್ತು ಅಳಿಯ ಇಬ್ಬರೂ ಹೀಗೆ ಕೆಲಸಕ್ಕೆ ಹೋಗಿದ್ದರು. ಹೋಗುವಾಗ ಅವರು ವಿದ್ಯುತ್ ಒಲೆಯನ್ನು ಹತ್ತಿಸಿ ಅಡಿಗೆ ಮಾಡಿ ಒಲೆಯನ್ನು 'ಆಫ್' ಮಾಡಿ ಹೋದರು, ಒಲೆಯನ್ನು 'ಆಫ್' ಮಾಡಿದ್ದಾರೆಯೇ ಎಂದು ಅವರು ಹೊರಡುವಾಗಲೇ ನಾವು ಸ್ಪಷ್ಟವಾಗಿ ಕೇಳಿ ಖಾತರಿ ಮಾಡಿಕೊಂಡಿದ್ದೆವು. ಯಾಕೆಂದರೆ ಮನೆದೀಪ, ಅಡಿಗೆ, ನೆಲಮಾಳಿಗೆಯಲ್ಲಿರುವ ಬಟ್ಟೆ ಒಗೆಯುವ ಯಂತ್ರ, ಮನೆಶಾಖ, ಬೆಂಕಿ, ಅಪಾಯ, ಇವುಗಳಿಗೆಲ್ಲ ಬೇರೆ ಬೇರೆ ಸ್ವಿಚ್‌ಗಳು ಇರುತ್ತವೆ. ಮನೆಯವರು ಎಲ್ಲಿಗಾದರೂ ಹೊರಟರೆ ಸ್ವಿಚ್ಚಳನ್ನು 'ಆಫ್' ಮಾಡಿ ಹೋಗಿ ಎಂದೇ ಹೇಳುತ್ತಿದ್ದೆ. ನನ್ನ ಅಳಿಯ, ಮಗಳು, ಮಗು, ಮನೆ ಬಿಟ್ಟು ಹೋದ ಮೇಲೆ, ನಾನು ನನ್ನ ಹೆಂಡತಿ ಇಬ್ಬರೇ ಮಾತನಾಡುತ್ತ ಕುಳಿತಿದ್ದೆವು. ಇದ್ದಕ್ಕಿದ್ದಂತೆ ಮನೆಯ ಯಾವುದೋ ಮೂಲೆಯಲ್ಲಿ ಕೊಯ್ ಎಂದು ಶಬ್ದ ಪ್ರಾರಂಭವಾಯಿತು. ಅದು ಒಂದು ದೊಡ್ಡ ಧ್ವನಿಯ ಶ್ರುತಿಯಂತೆ ಅಥವಾ ಮೋಟಾರಿನ ಕೊಂಬಿನಂತೆ, ಒಂದೇ ಸಮನಾಗಿ ವಿಚ್ಛಿತಿಯೇ ಇಲ್ಲದೆ ಕೂಗತೊಡಗಿತು. ನಮಗೆ ತುಂಬ ಗಾಬರಿ. ಟೆಲಿವಿಜನ್‌ನಲ್ಲಿ "ಮನೆಯಲ್ಲಿ ಬೆಂಕಿ ಹತ್ತಿದರೆ ಒಂದು ಅಲಾರಂ ಕೂಗುತ್ತೆ ಅದು ಬೆಂಕಿ ಹತ್ತುವುದರ ಸೂಚನೆ ಈ ಸೂಚನೆ ನಿಮ್ಮ ಪ್ರಾಣವನ್ನು ಉಳಿಸುತ್ತದೆ. ಈ ಸೂಚನೆ ಕೇಳಿದ ಕೂಡಲೆ ಮನೆಯಿಂದ ಹೊರಕ್ಕೆ ಧಾವಿಸಿ, ಈ ಬೆಂಕಿ ಸೂಚನೆ ಕೊಡುವ ಯಂತ್ರ, ಸಿಗ್ನಲ್ ಕಂಪನಿಯದು ಸಿಗ್ನಲ್ ಫೈರ್ ಡಿಟೆಕ್ಟರ್ ಯಂತ್ರವನ್ನೇ ಕೊಳ್ಳಿ" ಎಂಬ ಜಾಹೀರಾತನ್ನು ಪ್ರತಿದಿನ ಕೇಳುತ್ತಿದ್ದ ನಮಗೆ, ಬೆಂಕಿಯ ಬಗ್ಗೆ ಗಾಬರಿ ಆಯಿತು. ನಾವು ತತ್‌ಕ್ಷಣ ಮನೆಯನ್ನೆಲ್ಲ ಸುತ್ತಿ ನೋಡಿದೆವು. ಸ್ವಿಚ್‌ಗಳು ನಮಗೆ ಸಿಕ್ಕಲಿಲ್ಲವಾದರೂ ಎಲ್ಲಿಯೂ ಹೊಗೆ ಕಾಣಲಿಲ್ಲ. ಆದರೂ ಧೈರ್ಯವಾಗಲಿಲ್ಲ. ಯಾಕೆಂದರೆ ಆ ಕೊಂಬಿನ ಸದ್ದು

ಒಂದೇ ಸಮನೆ ನಡೆದೇ ಇತ್ತು ಮತ್ತು ಅಡಿಗೆ ಮನೆಯ ವಿದ್ಯುತ್ ಒಲೆಯ ಕಡೆಯಿಂದಲೇ ಬರುತ್ತಿದ್ದಿತು. ಅಲ್ಲಿ ನೋಡಿ ಎಲ್ಲ ಸ್ವಿಚ್‌ಗಳೂ 'ಆಫ್' ಆಗಿವೆಯೆಂದೇ ನನ್ನ ಹೆಂಡತಿ ಹೇಳಿದಳು. ವಿದ್ಯುತ್ ಒಲೆ ನನ್ನ ಹೆಂಡತಿಗೆ ಸ್ವಲ್ಪ ಅನುಭವವಿತ್ತು. ಅಲ್ಲಿ ಒಂದು ಎರಡು ಒಲೆ ಹಾಕಿಕೊಂಡು ಸ್ವಿಚ್ ಇಟ್ಟುಕೊಂಡಿರುತ್ತೇವೆ. ಆದರೆ ಇಲ್ಲಿ ಆ ಒಲೆಗಳು, ಸ್ವಿಚ್‌ಗಳ ಜೋಡಣೆ ಹೊಸ ತರಹ. ಅವುಗಳ ಮೇಲೆ ಅಸಂಖ್ಯಾತ ಅಂಕಿಗಳು, ಗೆರೆಗಳು, ಬಣ್ಣಗಳು. ಯಾವುದನ್ನು ಮುಟ್ಟಿದರೆ ಏನೋ ಭಯ. ಕೊಯ್ ಶಬ್ದ ಕಟ್ಟಡವನ್ನೆಲ್ಲ ಆವರಿಸಿದುದರಿಂದ ಅದು ಇಂಥ ಕಡೆಯಿಂದ ಬರುತ್ತೆ ಎಂದು ಗುರುತಿಸಲು ಸಾಧ್ಯವೇ ಆಗಲಿಲ್ಲ. ಅಗ್ನಿಶಾಮಕದಳ ಮುಂತಾದುವು ಯಾವುದಕ್ಕಾದರೂ ಫೋನ್ ಮಾಡೋಣವೆಂದು ನೋಡಿದೆ. ಮನೆಯಲ್ಲಿ ಎರಡು ಫೋನ್‌ಗಳಿವೆ. ಆದರೆ ಗಾಬರಿಯಲ್ಲಿ ಫೋನ್ ಡೈರೆಕ್ಟರಿಯಲ್ಲಿ ಎಲ್ಲಿ ಹುಡುಕಿದರೂ ಅಗ್ನಿಶಾಮಕದಳದ ನಂಬರಾಗಲೀ ವಿಳಾಸವಾಗಲೀ ದೊರಕಲಿಲ್ಲ. ನನ್ನ ಹೆಂಡತಿ "ಮಗ್ಗಲು ಮನೆಗಾದರೂ ಹೋಗಿ, ಯಾರನ್ನಾದರೂ ಕರೆದುಕೊಂಡು ಬಂದು ತೋರಿಸಿ, ಮನೆಯಲ್ಲಿ ಬೆಂಕಿ ಹೊತ್ತಿ ಕೊಂಡೀತು" ಎಂದಳು. ನಾನು ಬಲಗಡೆಯ ಮೊದಲನೆಯ ಮನೆಗೆ ಹೋಗಿ ನೋಡಿದೆ. ಮನೆ ಬೀಗ ಹಾಕಿತ್ತು. ಗಂಡ ಹೆಂಡಿರಿಬ್ಬರೂ ದುಡಿಮೆಗೆ ಹೋಗುವುದರಿಂದ ಯಾರೂ ಮನೆಯಲ್ಲಿರಲಿಲ್ಲ. ಎಡಗಡೆ ಎರಡು ಮನೆಗಳಿಗೆ ಹೋದೆ. ಯಾರೂ ಇರಲಿಲ್ಲ. ಬೀದಿಯಲ್ಲಿ ಯಾರಾದರೂ ಇದ್ದಾರೆಯೆ ಎಂದು ನೋಡಿದೆ. ಅಮೆರಿಕದಲ್ಲಿ ನಡುಬೀದಿಯಲ್ಲಿ ನಡೆದುಕೊಂಡು ಹೋಗುವವರೇ ವಿರಳ, 65-70 ಮೈಲಿ ವೇಗದಲ್ಲಿ ಗರಹೊಡೆದವರಂತೆ ಆ ವಿಶಾಲವಾದ ರಸ್ತೆಯಲ್ಲಿನುಗ್ಗುತ್ತಾರೆ. ನಾವು ಇಷ್ಟೆಲ್ಲ ಗದ್ದಲ ಮಾಡುತ್ತಿದ್ದರೂ, ಮನೆಯೊಳಗಿನ ವಿದ್ಯುತ್ ಕೊಂಬು ಲಕ್ಷ್ಯವಿಲ್ಲದೆ ಒಂದೇ ಸಮನಾಗಿ ಕೂಗುತ್ತಲೇ ಇದ್ದಿತು.

ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಎದುರಿಗೆ ಒಂದು ಪ್ರೈಮರಿ ಪಾಠಶಾಲೆ ಇದ್ದಿತು. ನಾನು ಆ ಶಾಲೆಯೊಳಕ್ಕೆ ಹೋದೆ. ಅಲ್ಲಿ ಏಳನೇ ತರಗತಿಯೇ ದೊಡ್ಡ ತರಗತಿ. ಆ ತರಗತಿಯಲ್ಲಿ 8, 9, 10 ವಯಸ್ಸಿನ ಬಾಲಕ-ಬಾಲಕಿಯರು ಇದ್ದರು.

ಹುಡುಗರನ್ನು ವಿರಾಮಕ್ಕಾಗಿ ಬಿಟ್ಟುದನ್ನು ನೋಡಿ ನನ್ನ ಹೆಂಡತಿ "ಆ ಸ್ಕೂಲಿಗಾದರೂ ಹೋಗಿ ಯಾರಾದರೂ ಹುಡುಗರನ್ನೊ, ಮೇಷ್ಟರನ್ನೋ ಕರೆದುಕೊಂಡು ಬನ್ನಿ. ಮನೆ ಸುಟ್ಟು ಹೋಗುವುದರೊಳಗಾಗಿ ಬನ್ನಿ" ಎಂದು ಹೇಳಿದರು. ಅವಳಿಗೂ ನನ್ನ ಮೇಲೆ ಕೋಪ, ಹೆಂಗಸರೂ ಮಕ್ಕಳೂ ಸಹ ವಿದ್ಯುಚ್ಛಕ್ತಿ ಯಂತ್ರದ ಏಣಿ ಇವನ್ನೆಲ್ಲ ನಡೆಸುವುದನ್ನು ಕಲಿತಿರುವಾಗ ನಾನು ಯಾಕೆ ಅದನ್ನು ಸ್ವಲ್ಪವೂ ಕಲಿಯಲಿಲ್ಲ ಎಂದು. ಅದರ ವಿಷಯ ಯೋಚಿಸುವಾಗಲೆಲ್ಲ ಅದರಿಂದ ಅಪಾಯ ಹೊಂದಿ ಸತ್ತಿರುವ, ನಾನು ನೋಡಿರುವ ಹತ್ತಾರು ಜನ, ಕೇಳಿರುವ ಮೂವತ್ತು ನಲವತ್ತು ಜನ ಜ್ಞಾಪಕಕ್ಕೆ ಬರುತ್ತಾರೆ. ಸೀಮೆ ಎಣ್ಣೆಗೆ ರೇಶನ್ ಆದ ಕಾಲದಲ್ಲಿ ಕತ್ತಲೆಯಲ್ಲಿಯೇ ಕೈಗೂ ಬಾಯಿಗೂ ಗುರುತಿಲ್ಲ ಎಂದು ಊಟ ಮುಗಿಸಿದಾಗ, ಅಪರೂಪವಾಗಿ ಒಂದೆರಡು ಸಲ ಸ್ವಿಚ್‌ಗೆ ಕೈಹಾಕಿದಾಗ ಕೂಡ ಹೊಡೆದು ನನ್ನ ಭಯ ಇನ್ನೂ ಹೆಚ್ಚೇ ಆಗಿದೆ. ನನ್ನ ಹೆಂಡತಿ ನನ್ನನ್ನು ಕೋಪದಿಂದ ನೋಡುತ್ತ "ನನಗೆ ಮಾತ್ರ ಇಂಗ್ಲೀಷ್ ಬಂದಿದ್ದರೆ, ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿಬಿಡುತ್ತಿದ್ದೆ" ಎಂದಳು. ನಾನು "ನನಗೆ ಇಂಗ್ಲಿಷು ಬಂದಿರುವುದರಿಂದಲೇ ನಾನು ಇಷ್ಟು ಹೇಡಿಯಾಗಿರುವುದು" ಎಂದು ಹೇಳಿಕೊಂಡು ಸ್ಕೂಲಿನ ಕಾಂಪೌಂಡ್ ಒಳಕ್ಕೆ ಹೋದೆ.

ನನ್ನನ್ನು ನೋಡಿದ ಕೂಡಲೇ ಅವರೆಲ್ಲ -ಒಬ್ಬರಿದ್ದರೆ ಒಬ್ಬರು ಅನೇಕರಿದ್ದರೆ ಅಷ್ಟೂ ಜನ-ಅಲ್ಲಿಂದ ಎದ್ದು ನಿಧಾನವಾಗಿ ನನ್ನನ್ನೇ ನೋಡುತ್ತ ಸ್ಕೂಲಿನ ಕಡೆಗೆ ಹೋಗತೊಡಗಿದರು. ನಾನೂ ಸ್ಕೂಲಿನ ಕಡೆಗೇ ಹೋಗುತ್ತಿದ್ದುದರಿಂದ, ಅವರೆಲ್ಲ ನನ್ನನ್ನೇ ದುರದುರನೆ ನೋಡುತ್ತ ಸ್ಕೂಲಿನ ಕಡೆಗೆ ಹೊರಟೇ ಬಿಟ್ಟರು. ವಿರಾಮ ಮುಗಿದ ಗಂಟೆಯೂ ಇನ್ನೂ ಹೊಡೆದಿರಲಿಲ್ಲ. ನಾನು ನಾಲ್ಕಾರು ಹೆಜ್ಜೆ ಮುಂದುವರಿಸುವುದರೊಳಗಾಗಿ ಅವರೆಲ್ಲ ಓಡುತ್ತ ಸ್ಕೂಲಿನೊಳಕ್ಕೆ ಹೊರಟೇ ಹೋದರು. ನನಗೆ ಒಂದೂ ಅರ್ಥವಾಗಲಿಲ್ಲ. ಸ್ಕೂಲಿನ ಒಳ ಅಂಗಳದಲ್ಲಿ ಅವರೆಲ್ಲ ಗುಜುಗುಜು ಎನ್ನುತ್ತ ಸೇರಿದರು. ಅವರೆಲ್ಲರ ದೃಷ್ಟಿಯೂ ಒಂದು ವಿಚಿತ್ರ ಪ್ರಾಣಿಯ ಮೇಲೆಯೋ ಎಂಬಂತೆ ನನ್ನ ಕಡೆಯೇ ಇತ್ತು. ಆ ನೋಟದಲ್ಲಿ ಸ್ವಲ್ಪ ಗಾಬರಿ, ಸ್ವಲ್ಪ ಕುತೂಹಲ ಸಹ ಇತ್ತು. ನಾನು ಅವರನ್ನು ಇನ್ನೂ ಸಮೀಪಿಸಲು ಪ್ರಯತ್ನಿಸಿದಾಗ ಅವರೆಲ್ಲ ಒಟ್ಟಾಗಿ ಸ್ಕೂಲಿನ ಒಳಗಡೆ ಇದ್ದ ಒಂದು ಬ್ಯಾಡ್‌ಮಿಂಟನ್ ಟೆನ್ನಿಸ್ ಕೋರ್ಟ್ ಹಾಲ್‌ಗೆ ನುಗ್ಗಿದರು.

ಟೆನ್ನಿಸ್ ಹಾಲಿನ ಇನ್ನೊಂದು ಕೊನೆಯೇ ಉಪಾಧ್ಯಾಯರ ವಿಶ್ರಾಂತಿ ಕೊಠಡಿ. ವಿಶ್ರಾಂತಿ ಕಾಲವಾದುದರಿಂದ ಉಪಾಧ್ಯಾಯರೆಲ್ಲ ಅಲ್ಲಿ ಸೇರಿದ್ದರು. ವಿದ್ಯಾರ್ಥಿಗಳೆಲ್ಲ ಉಪಾಧ್ಯಾಯರ ರಕ್ಷಣೆಗಾಗಿ ಓಡಿದ್ದರೆಂಬುದು ನಾನು ಟೆನ್ನಿಸ್ ಕೋರ್ಟ್ ಹಾಲನ್ನು ಪ್ರವೇಶಿಸಿದಾಗ ತಿಳಿಯಿತು. ಯಾರಾದರೂ ವಿದ್ಯಾರ್ಥಿಯನ್ನು ಕರೆದುಕೊಂಡು ಬಂದು ಮನೆಯ ಬೆಂಕಿ ಆರಿಸುವ ನನ್ನ ಪ್ರಯತ್ನ ವಿಫಲವಾಗಿತ್ತು. ಹಾಲಿನ ಮತ್ತೊಂದು ಕಡೆ ಹುಡುಗರನ್ನು ಮೀರಿ ನಿಂತಿದ್ದ ನನ್ನ ಕಾಯವನ್ನು ಕಂಡು ಉಪಾಧ್ಯಾಯರೆಲ್ಲ ಕುತೂಹಲದಿಂದ ಎದ್ದು ನಿಂತು ನನ್ನನ್ನೇ ದೃಷ್ಟಿಸಿದರು. ವಿರಾಮ ಕಾಲದಲ್ಲಿ ಹೊರಗೆ ಆಡುತ್ತಿರಬೇಕಾದ ಹುಡುಗರೆಲ್ಲ ಹೀಗ್ಯಾಕೆ ಸ್ಕೂಲಿನೊಳಕ್ಕೆ ನುಗ್ಗುತ್ತಿದ್ದಾರೆ ಎಂಬುದು ಅವರಿಗೆ ಆಗ ಗೊತ್ತಾಯಿತು. ನಾನೇ ಅವರ ಹತ್ತಿರಕ್ಕೆ ಹೊರಟೆ. ಹುಡುಗರೆಲ್ಲ ನಮ್ಮ ನಡುವೆ ಯಾವುದಾದರೂ ಒಂದು ಭಯಂಕರ ಅಥವಾ ವಿಚಿತ್ರ ಪ್ರಾಣಿ ಹೋಗುತ್ತಿದ್ದರೆ ಹೇಗೋ ಹಾಗೆ ದಾರಿಬಿಟ್ಟು ಹಿಂದಕ್ಕೆ ನಿಂತುಕೊಂಡರು. ಉಪಾಧ್ಯಾಯರ ಕಣ್ಣುಗಳು ಸಹ ನನ್ನಲ್ಲಿಯೇ ಪೂರ್ಣವಾಗಿ ನೆಟ್ಟಿದ್ದವು. ಅವರಲ್ಲಿ ಶೇಕಡ 90 ಜನ ಉಪಾಧ್ಯಾಯಿನಿಯರು; ಅಷ್ಟು ಜನರ ಕಣ್ಣಿನ ತೋರಣದ ನಡುವೆ ನಡೆಯುತ್ತಿದ್ದ ನನಗೆ, ನಾನೊಬ್ಬ ಅಪರಾಧಿಯೋ, ಪ್ರಮುಖನೋ, ವಿಚಿತ್ರ ಪ್ರಾಣಿಯೋ ಎಂಬಂತೆ ಭಾಸವಾಯಿತು. ಇದ್ದಕ್ಕಿದ್ದಂತೆ ನನ್ನ ವೇಷ ವಿಚಿತ್ರವಾಗಿದೆ ಎಂಬ ಅಂಶ ನನಗೆ ಹೊಳೆಯಿತು. ಆ ದಿನ ನಾನು ಅಗಲವಾದ ಎಂಟೂವರೆ ಮೊಳ ಉದ್ದದ ಖಾದಿ ಪಂಚೆಯನ್ನು ಪಂಚಕಚ್ಚೆಯಾಗಿ ಉಟ್ಟಿದ್ದೆ. ಅದು ಖಾದಿಯಲ್ಲಿ ಸಹ ದಪ್ಪ ನೂಲಿನ ಬಟ್ಟೆ. ಅದಕ್ಕೆ ಅಗಲವಾದ ಕೆಂಪು ಕಂಬಿ, ಕಂಬಿಯ ತುದಿಯಲ್ಲಿ ನಾಲ್ಕು ಜರಿಗೆರೆಗಳು - ನನ್ನ ಮಿತ್ರರು ಶ್ರೀ ರಾಜಾರಾಮಯ್ಯಂಗಾರ್ಯರು ಯಾವುದೋ ಶುಭ ಸಂದರ್ಭದಲ್ಲಿ ನನಗೆ ಕೊಟ್ಟದ್ದು. ಭಾರತದಲ್ಲಿರುವಾಗ ಅತಿ ಜರ್ಬಾಗಿ ಕಾಣುತ್ತೆ ಎಂದು ಅದನ್ನು ಹೆಚ್ಚಾಗಿ ಉಡುತ್ತಲೇ ಇರಲಿಲ್ಲ. ಹೊರದೇಶಕ್ಕೆ ಹೊರಟಾಗ, ದಡೂತಿಯಾಗಿದೆ ಬೆಚ್ಚಗಿರುತ್ತೆ ಎಂದು ತೆಗೆದುಕೊಂಡಿದ್ದೆ. ಹಣೆಗೆ ಕೆಂಪು ನಾಮ ಇಕ್ಕಿದ್ದೆ. ಚಳಿಗಾಗಿ ತಲೆಗೆ ಒಂದು ಕೆಂಪು ಉಣ್ಣೆ ಶಾಲು, ನ್ಯೂಯಾರ್ಕ್ ಮಫ್ಲರ್ ಕಟ್ಟಿದ್ದೆ. ಸ್ಕೂಲಿಗೆ ಹೋಗುವ ದಾರಿಯಲ್ಲಿ ಅದು ಸಡಿಲವಾದುದರಿಂದ ಹೆಗಲ ಮೇಲೆ ಹಾಕಿಕೊಂಡಿದ್ದೆ. ಕಾವಿಬಣ್ಣದ ನೀಳವಾದ ಜುಬ್ಬ, ಬೆಂಗಳೂರಿನ ಕೋಟೆ ಜನತಾ ಬಜಾರಿನವರು ನನ್ನ 'ಫಾರಿನ್ ಟೂರ್'

ಗಾಗಿಯೇ ಹೊಲಿಸಿ ಕೊಟ್ಟಿದ್ದು, ಕಾಲಿಗೆ ದಪ್ಪವಾದ ಎಕ್ಕಡ, ತಲೆ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿಗಡ್ಡ ಮೀಸೆ - ನನ್ನ ಮೈ ಉಡುಪುಗಳಲ್ಲಿ ಏಳೆಂಟು ಬಣ್ಣಗಳು, ಹೊಳಪು, ಎಲ್ಲ ನೋಡಿ ಉಪಾಧ್ಯಾಯರು ನಕ್ಕರು. ತಕ್ಷಣ ಹುಡುಗರೆಲ್ಲ ಒಂದೇ ಉಸಿರಿಗೆ ದೀರ್ಘವಾಗಿ ನಕ್ಕರು. ಪೈಡ್ ಪೈಪರ್, ಸಂಟಕ್ಲಾಸ್, ಪಿಕ್ವಿಕ್ ಎಂದೆಲ್ಲ ಕೂಗಿದರು. ಉಪಾಧ್ಯಾಯರೊಬ್ಬರು some what “ನಿಮ್ಮ ಉಡುಪು ಸ್ವಲ್ಪ ವಿಚಿತ್ರವಾಗಿದೆ, It is your dress unusual ದಯವಿಟ್ಟು ಕೂತುಕೊಳ್ಳಿ. ನಿಮಗೆ ಏನಾಗಬೇಕು?'' ಎಂದು ಕುರ್ಚಿ ತೋರಿಸಿದರು. ಅಷ್ಟರಲ್ಲಿಯೇ ಮತ್ತೊಬ್ಬ ಉಪಾಧ್ಯಾಯಿನಿ “ನಿಮಗೆ ಚಳಿಯಾಗುವುದಿಲ್ಲವೆ? ನೀವು ಎಲ್ಲಿಂದ ಬಂದಿರುವಿರಿ?” ಎಂದು ಕೇಳಿದಳು.

ಈ ಅವಾಂತರದಲ್ಲಿ ನಾನು ಆ ಸ್ಕೂಲಿಗೆ ಬಂದ ಉದ್ದೇಶವನ್ನೇ ಮರೆತುಬಿಟ್ಟೆ. ನಾನು “ನೀವು ಗಾಂಧೀ ಹೆಸರು ಕೇಳಿದ್ದೀರಾ?'' ಎಂದೆ. ನಾಲ್ಕಾರು ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು “ಕೇಳಿದ್ದೇವೆ” ಎಂದರು. ಒಬ್ಬ ವಿದ್ಯಾರ್ಥಿ “ನಮ್ಮ ಪುಸ್ತಕ ದಲ್ಲಿ ಗಾಂಧೀ ಮೇಲೆ ಒಂದು ಪಾಠವಿದೆಯಲ್ಲ'' ಎಂದನು. ನಾನು “ನಾನು ಗಾಂಧೀ ಭಾರತದಲ್ಲಿ ಜನಿಸಿದವನು. ಭಾರತದ ಹವೆ ಬಹಳ ಹಿತವಾಗಿರುತ್ತದೆ. ಅಲ್ಲಿ ಅತ್ಯಂತ ಕಡಿಮೆ ಬಟ್ಟೆಗಳಿಂದಲೇ ಜೀವಿಸಬಹುದು. ನಾನು ಈಗ ಹಾಕಿರುವ ಬಟ್ಟೆಯಲ್ಲಿ ನಾಲ್ಕರಲ್ಲೊಂದು ಪಾಲನ್ನು ಗಾಂಧೀಜಿ ಧರಿಸುತ್ತಿದ್ದರು. ಅಷ್ಟೇ ಉಡುಪಿನಲ್ಲಿ ಅವರು ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿಯನ್ನು ಸಂಧಿಸಿದ್ದರು. ಈ ಬಟ್ಟೆಯನ್ನು ಭಾರತದಲ್ಲಿ ಪ್ರಚಾರಕ್ಕೆ ತಂದವರು ಗಾಂಧೀಜಿ. ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ. ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸಂಪರ್ಕವುಂಟಾಗುವುದಿಲ್ಲ'' ಎಂದೆ. ಅಮೆರಿಕಾದಲ್ಲಿ - ಬಹುಶಃ ಪ್ರತಿಯೊಂದು ವಸ್ತುವಿನ ಯಂತ್ರೀಕರಣದಿಂದಲೋ ಏನೋ ಅವರಿಗೆ ಕೈಯಲ್ಲಿ ಮಾಡಿದ್ದು ಎಂದರೆ ಅತಿ ಪ್ರೀತಿ. ನಾನು ಕೈಯಲ್ಲಿ ಮಾಡಿದ್ದು ಎಂದ ಕೂಡಲೆ ಎಲ್ಲ ಉಪಾಧ್ಯಾಯರೂ ಅನೇಕ ಹುಡುಗರೂ ಬಂದು ನನ್ನ ಬಟ್ಟೆಗಳನ್ನು ಮುಟ್ಟಿ ನೋಡಿದರು. ಒಬ್ಬ ಉಪಾಧ್ಯಾಯರು ‘ಕೈಯಿಂದ ಇದನ್ನು ಮಾಡುವುದು ಹೇಗೆ?’ ಎಂದು ನನ್ನ ಮಾತಿನಲ್ಲಿ ಅಪನಂಬಿಕೆಯನ್ನೇ ವ್ಯಕ್ತಪಡಿಸಿದರು. ನಾನು ರಾಟೆ(ಚರಕ) ಯಲ್ಲಿ ನೂಲನ್ನು ತೆಗೆಯುವುದು ಮಗ್ಗದಿಂದ ನೇಯುವುದು ಈ ವಿಷಯಗಳನ್ನೆಲ್ಲ ವಿವರಿಸಿದೆ. ಗಾಂಧೀಜಿ ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿಯನ್ನು ಈ ಉಡುಪಿನಲ್ಲಿ ಸಂಧಿಸಿದ್ದರು. ಅವರಿಗೆ ಮಕ್ಕಳೆಂದರೆ ತುಂಬ ಪ್ರೀತಿ. ಅವರ ಸುತ್ತ ಯಾವಾಗಲೂ ಮಕ್ಕಳು ನೆರೆದಿರುತ್ತಿದ್ದರು ಎಂದು ಹೇಳುತ್ತ ನಾನು ಬಾಗಿಲ ಕಡೆ ದೃಷ್ಟಿಸಿದಾಗ ನನ್ನ ಹೆಂಡತಿ ಬಾಗಿಲಿನಿಂದ ಒಳಕ್ಕೆ ಬರುತ್ತಿದ್ದಳು.

ಅವಳನ್ನು ನೋಡಿ ಕೂಡ ಉಪಾಧ್ಯಾಯರಿಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ನನ್ನನ್ನು ನೋಡಿದಷ್ಟೇ ದಿಗ್ಭ್ರಮೆಯಾಯಿತು. ಅವಳ 27 ಅಡಿ ಉದ್ದದ ಸೀರೆ, ಅದನ್ನು ಹಿಂದಕ್ಕೂ ಮುಂದಕ್ಕೂ ಕಾಮನಕಟ್ಟು, ಭೀಮನಕಟ್ಟು ಹಾಕಿ ಬಿಗಿದಿದ್ದ ಕ್ರಮ ತಲೆಯನ್ನು ಚೆನ್ನಾಗಿ ಬಾಚಿ ಬೈತಲೆ ತೆಗೆದು ಹಿಂದಕ್ಕೆ ಕಟ್ಟಿದ ದೊಡ್ಡ ಗಂಟು ನಾನು ಖಾದಿ ಬಟ್ಟೆಯ ವಿವರಣೆ ಮಹಿಮೆಯನ್ನು ವಿವರಿಸುತ್ತಲೇ ಇದ್ದೆ. ನನ್ನ ಹೆಂಡತಿ ನೆಟ್ಟಗೆ ಬಂದು ನನ್ನ ಮುಂದೆ ನಿಂತುಕೊಂಡು ತಮಿಳಿನಲ್ಲಿ “ಚೆನ್ನಾಯ್ತು ಬಂದ ಕೆಲಸವೇ ಬಿಟ್ಟು ಮಾತಾಡ್ತ ಕೂತು ಬಿಟ್ಟಿರಿ. ಈಗಲೋ ಆಗಲೋ ಮನೆ ಉರಿದು ಹೋಗುತ್ತೆ'' ಎಂದಳು. ನನಗೆ ಆಗ ನಾನು ಬಂದಿದ್ದ

ಕಾರ್ಯದ ಜ್ಞಾನೋದಯವಾಯಿತು. ನಾನು ಉಪಾಧ್ಯಾಯರಿಗೆ "ಈಕೆ ನನ್ನ ಹೆಂಡತಿ. ನಮ್ಮ ಮನೆ ನೋಡಿ ಆ ಎದುರು ಸಾಲಿನಲ್ಲಿದೆ. ಅಲ್ಲಿ ವಿದ್ಯುತ್ ಶಕ್ತಿ ಏನೋ ತೊಂದರೆ ಕೊಡುತ್ತಿದೆ. ನನಗೆ ಅದರ ಅಭ್ಯಾಸವಿಲ್ಲ. ನಿಮ್ಮ ವಿದ್ಯಾರ್ಥಿಗಳ ಪೈಕಿ ಈ ವಿಷಯ ಗೊತ್ತಿರುವವರು ಯಾರಾದರೂ ಬಂದು ಒಂದು ಗಳಿಗೆ ನೋಡಿ ಸರಿ ಮಾಡುವರೆ!" ಎಂದು ಕೇಳಿದೆ. ಉಪಾಧ್ಯಾಯರು ಹುಡುಗರ ಪೈಕಿ ಸ್ವಲ್ಪ ಬಲಿಷ್ಠನಾದವನನ್ನು ಕರೆದು "ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ" ಎಂದರು. ಆ ಹುಡುಗ ನನ್ನ ಜೊತೆ ಹೊರಟು ಮನೆಗೆ ಬಂದ. ನೆಟ್ಟಗೆ ಅಡಿಗೆ ಮನೆಗೆ ಬಂದು ಸುತ್ತ ನೋಡಿದ. ವಿದ್ಯುತ್ ಒಲೆಗೆ ಸಂಬಂಧಿಸಿದ ಒಂದು ಮುಳ್ಳಿಗೆ ಆ ಧ್ವನಿ ಸಂಬಂಧಿಸಿದುದೆಂದು ಅವನಿಗೆ ತಿಳಿಯಿತು. ಅದರ ಸ್ವಿಚ್ ನ್ನು ಪತ್ತೆಮಾಡಿ ಅವನು ಅದನ್ನು ಅಮುಕಿದ. ಕೂಡಲೇ ಧ್ವನಿ ನಿಂತಿತು.

ಅದು ಟೈಂ ಸ್ವಿಚ್. ಅಂದರೆ ಒಂದು ಪದಾರ್ಥವನ್ನು ಒಲೆಯ ಮೇಲೆ ಬೇಯುವುದಕ್ಕೆ ಇಟ್ಟರೆ, ಅದು ಬೇಯಲು ಇಷ್ಟು ನಿಮಿಷ 6-8-15 ತೆಗೆದುಕೊಳ್ಳುತ್ತದೆ ಎಂದು ಲೆಕ್ಕವುಂಟು. ಒಲೆಯ ಮೇಲೆ ಇಟ್ಟವರು ಅದನ್ನು ಮರೆಯಬಾರದು. ಕಾಲಕ್ಕೆ ಸರಿಯಾಗಿ ಅದನ್ನು ತೆಗೆದಿಡಬೇಕು. ಇಲ್ಲದಿದ್ದರೆ ಅತಿಯಾಗಿ ಬೆಂದು ಕರಕಲಾಗುತ್ತದೆ. ಅದಕ್ಕಾಗಿ ಆ ಕಾಲ ಕಳೆದ ಕೂಡಲೇ ಇವರನ್ನು ಎಚ್ಚರಿಸಲು ಒಂದು ಶಬ್ದವಾಗುತ್ತದೆ. (ಅಲರಾಂ ಇದ್ದ ಹಾಗೆ). ಇದಾದ ನಂತರ ನಾನು ಇನ್ನೂ ಮೂರು ನಾಲ್ಕು ದಿನ ಅದೇ ಸ್ಕೂಲಿಗೆ ಹೋಗಿ ವಿದ್ಯಾರ್ಥಿಗಳೊಂದಿಗೆ ಪ್ರಶ್ನೋತ್ತರದ ಸಂಭಾಷಣೆ ನಡೆಸಿದೆ. ಆ ಸ್ಕೂಲು ಪೌರರ ಸಹಾಯದಿಂದ ನಡೆಯುತ್ತಿದ್ದುದರಿಂದ ಅದು ಆ ಭಾಗದ ಎಲ್ಲ ಚಟುವಟಿಕೆಗಳು, ಸಭೆಗಳು, ವಿನೋದ ಕೂಟಗಳು, ಚುನಾವಣಾ ಪ್ರಚಾರ ವೇದಿಕೆ, ಬೇರೆ, ಬೇರೆ ವ್ಯಾಯಾಮ ಕ್ರೀಡೆಗಳು ಕೂಟಗಳು ಇವುಗಳೆಲ್ಲದರ ಕೇಂದ್ರವಾಗಿತ್ತು. ನನಗೂ ಅಲ್ಲಿಗೆಲ್ಲ ಖಾಯಂ ಆಹ್ವಾನವಿತ್ತು. ಅಮೆರಿಕದವರ ಜೀವನ ಕ್ರಮವನ್ನು ಹತ್ತಿರದಿಂದ ನೋಡುವುದೂ ನನ್ನ ಗುರಿಯಾಗಿದ್ದುದರಿಂದ ನಾನು ಎಲ್ಲ ಕಾರ್ಯಕ್ರಮಗಳಿಗೂ ಹೋಗುತ್ತಿದ್ದೆ. ನಾನು ಹೇಳುತ್ತಿದ್ದ ಕನ್ನಡ ನಾಡಿನ ಅನೇಕ ಜಾನಪದ ಹಾಸ್ಯ ಕಥೆಗಳು, ಗಾದೆಗಳು ಮತ್ತು ಪಂಚತಂತ್ರದ ಕಥೆಗಳೆಲ್ಲ ವಿದ್ಯಾರ್ಥಿಗಳನ್ನೂ ಉಪಾಧ್ಯಾಯರನ್ನೂ ಸಮಾನವಾಗಿಯೇ ರಂಜಿಸಿದವು. ದೇಶ ಬಿಟ್ಟು ಹೊರಟಾಗ ಅವರಿಂದ ಅತ್ಯಂತ ಆತ್ಮೀಯವಾದ ಬೀಳ್ಕೊಡುಗೆ ಹೊಂದಿದೆ.

ಅಮೇರಿಕದಲ್ಲಿ ಕಾಲಿಟ್ಟ ಕೂಡಲೇ ನಮಗೆ ಮೊದಲು ಹೊಳೆಯುವ ಅಂಶ ಅಲ್ಲಿ ಉಗಿಯುವುದಕ್ಕೆ ಅಥವಾ ಸಿಂಬಳ, ಎಸೆಯುವುದಕ್ಕೆ ಅಥವಾ ಬಾಳೆಹಣ್ಣು, ಕಿತ್ತಲೆಹಣ್ಣಿನ ಸಿಪ್ಪೆ, ಕಾಗದ ಯಾವುದನ್ನೂ ಎಸೆಯಲು ಸ್ಥಳವಿಲ್ಲದಿರುವುದು. ಕಾರಿನಲ್ಲಿ ಹೋಗುತ್ತಿರುವಾಗ ಸಹ ಬೀದಿಗೆ ಉಗಿಯುವುದು ಸಾಧ್ಯವಿಲ್ಲ. ಹೆಣ್ಣು ಗಂಡುಗಳು ಬಾಲಕರು ಕೈಯಲ್ಲಿ ಕರವಸ್ತ್ರ ಅಥವಾ ಕಾಗದದ ಚೀಲವನ್ನು ಹಿಡಿದುಕೊಂಡು, ಅದಕ್ಕೆ ಉಗುಳಿಕೊಂಡು, ಕಸದ ಬುಟ್ಟಿ ಅಥವಾ ಡಬ್ಬಗಳಿಗೆ ತೆಗೆದುಕೊಂಡು ಹೋಗಿ ಹಾಕುತ್ತಾರೆ. ಸ್ವಚ್ಛತೆ, ಸಾಮಾಜಿಕ ಸ್ವಚ್ಛತೆ, ಅಮೆರಿಕನ್ ಜೀವನದ ಒಂದು ಅತ್ಯಂತ ಪ್ರಮುಖ ಅಂಶ. ದೈಹಿಕ ಸ್ವಚ್ಛತೆ, ಸಾಮಾಜಿಕ ಸ್ವಚ್ಛತೆ, ಮನೆ, ಪರಿಸರ, ರಸ್ತೆ ಈ ಎಲ್ಲ ಬಗೆಯ ಸ್ವಚ್ಛತೆ ಅಮೆರಿಕನ್ನರ ಸದಾ ಚಿಂತೆ.



**ಗೊರೂರು ರಾಮಸ್ವಾಮಿ ಅಯ್ಯಂಗಾರ್ (04-07-1904 - 28-09-1991) :** ಕನ್ನಡದ ಪ್ರಮುಖ ಸಾಹಿತಿ, ಗಾಂಧಿವಾದಿ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಪ್ರಬಂಧ, ಕತೆ, ಕಾದಂಬರಿಗಳ ಮೂಲಕ ಪ್ರಸಿದ್ಧರಾಗಿದ್ದಾರೆ. ಹಳ್ಳಿಯ ಚಿತ್ರಗಳು, ನಮ್ಮೂರ ರಸಿಕರು, ಗರುಡಗಂಬದ ದಾಸಯ್ಯ (ಪ್ರಬಂಧ ಸಂಕಲನಗಳು), ಮೆರವಣಿಗೆ, ಹೇಮಾವತಿಯ ತೀರದಲ್ಲಿ (ಕಾದಂಬರಿಗಳು). ಅವರ 'ಬೂತಯ್ಯನ ಮಗ' ಅಯ್ಯು ಸಣ್ಣಕತೆಯು ಚಲನಚಿತ್ರವಾಗಿದೆ. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1980ರಲ್ಲಿ) ದೊರೆತಿದೆ. ಪ್ರಸ್ತುತ ಲೇಖನವನ್ನು ಅಮೇರಿಕದಲ್ಲಿ ಗೊರೂರು ಎಂಬ ಪ್ರವಾಸ ಕಥನದಿಂದ ಆಯ್ದುಕೊಳ್ಳಲಾಗಿದೆ.

## ನವೀನ ಪದಗಳ ಅರ್ಥ

ಖಾತರಿ - ದೃಢ. ಮನೆಶಾಖ - ಕೋಣೆಯನ್ನು ಬೆಚ್ಚಗಿರಿಸುವ ವಿದ್ಯುತ್ ಉಪಕರಣ(Heater). ವಿಚ್ಛಿತಿ - ತಡೆಯಿಲ್ಲದ. ಗರಹೊಡೆ - ದಿಗ್ಭ್ರಮೆಯಾಗು. ಲಕ್ಷ್ಯ – ಗಮನ, ಗುರಿ. ಜರ್ಬಾಗಿ - ಎದ್ದು ಕಾಣುವಂತೆ. ದಢೂತಿ - ದಪ್ಪವಾದ, ಸ್ಥೂಲ. ಖಾಯಂ - ಸ್ಥಿರ. ಎಕ್ಕಡ – ಚಪ್ಪಲಿ. ಅವಾಂತರ – ಅಪಾಯ, ಗಂಡಾಂತರ.

## ವಿಶದೀಕರಣ

ಮೊಳ - ಹಿಂದಿನ ಕಾಲದಲ್ಲಿ ಉದ್ದವನ್ನು ಅಳೆಯುತ್ತಿದ್ದ ಒಂದು ಮಾನ

ಪೈಡ್ ಪೈಪರ್ - ಸುಪ್ರಸಿದ್ಧ ವ್ಯಂಗ್ಯ ಕಥಾ ಪಾತ್ರ

ಸಂತ ಕ್ಲಾಸ್ - ಕ್ರಿಸ್ಮಸ್ ಹಬ್ಬದ ಸಂದೇಶ ವಾಹಕ

ಪಿಕ್ವಿಕ್ - ಚಾರ್ಲ್ಸ್ ಡಿಕೆನ್ಸ್ ಬರೆದ ಕಾದಂಬರಿಯ ಕಥಾಪಾತ್ರ

## ಉತ್ತರಿಸಿರಿ

1. ಲೇಖಕರಿಗೆ ಹಾಗೂ ಅವರ ಮಡದಿಗೆ ಗಾಬರಿಯಾಗಲು ಕಾರಣವೇನು?
2. ಯಂತ್ರದ ಶಬ್ದ ಮುಂದುವರಿದಾಗ ಲೇಖಕರ ಮಡದಿಯ ಸಲಹೆ ಏನಾಗಿತ್ತು?
3. ಮನೆ ಎದುರಿನ ಪ್ರೈಮರಿ ಶಾಲೆಗೆ ಲೇಖಕರು ತೆರಳಿದ್ದೇಕೆ?
4. ಲೇಖಕರ ಮನೆಯಲ್ಲಿ ಮೊಳಗಿದ ನಿಗೂಢ ಶಬ್ದಕ್ಕೆ ಕಾರಣವೇನು?
5. ಲೇಖಕರು ಪ್ರೈಮರಿ ಶಾಲೆಯ ಆವರಣಕ್ಕೆ ಬರುವಾಗ ಮಕ್ಕಳು ಯಾಕೆ ಓಡಿ ಹೋದರು?
6. ಮಕ್ಕಳ ದೃಷ್ಟಿಯಲ್ಲಿ ಗೊರೂರರು ವಿಚಿತ್ರ ಪ್ರಾಣಿಯಾಗಿ ಕಂಡಿದ್ದೇಕೆ?
7. ಅಮೇರಿಕದ ಸಾಮಾಜಿಕ ವ್ಯವಸ್ಥೆಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

## ಪತ್ರ ಬರಹ

ನೀವು ಕೈಗೊಂಡ ಪ್ರವಾಸದ ಅನುಭವವನ್ನು ನಿಮ್ಮ ಗೆಳೆಯ / ಗೆಳತಿಗೆ ತಿಳಿಸಲು ಒಂದು ಪತ್ರವನ್ನು ಬರೆಯಿರಿ.

## ಪ್ರಶ್ನಾವಳಿ ತಯಾರಿ

ಅಮೇರಿಕಾದ ಶಾಲಾ ಮಕ್ಕಳು ಗೊರೂರರನ್ನು ಸಂದರ್ಶಿಸಿದಾಗ ಕೇಳಿರಬಹುದಾದ ಪ್ರಶ್ನೆಗಳನ್ನು ಊಹಿಸಿ ಪ್ರಶ್ನಾವಳಿಯನ್ನು ತಯಾರಿಸಿರಿ.

## ಮಾಹಿತಿ ಕೈಪಿಡಿ

ನಿಮ್ಮೂರಿನ ಪ್ರವಾಸಿ ತಾಣಗಳ ಕುರಿತು ಮಾಹಿತಿಯನ್ನು ಒದಗಿಸುವ 'ಮಾಹಿತಿ ಕೈಪಿಡಿ'ಯನ್ನು ಸಿದ್ಧಪಡಿಸಿರಿ.

ಉದಾ -

1. ಬೇಕಲಕೋಟೆ
2. ಪೊಸಡಿಗುಂಪೆ
3. ರಾಣಿಪುರ

## ಭಾಷಾಂತರ

ಕೆಳಗೆ ನೀಡಲಾದ ಆಂಗ್ಲ ಭಾಷಾ ವಾಕ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಿರಿ.

A.P.J. Abdul Kalam was a famous Indian scientist.

He was known as the Missile Man of India.

He became the President of India in 2002.

He inspired many students with his speeches.

He believed that dreams help us achieve success.

## ಕನ್ನಡ ಸಂಧಿಗಳು

ಎರಡು ವರ್ಣಗಳು/ಅಕ್ಷರಗಳು ಅರ್ಥ ಕೆಡದಂತೆ ಕಾಲವಿಳಂಬವಿಲ್ಲದೆ ಸೇರುವುದನ್ನು ಸಂಧಿ ಎನ್ನುವರು. ಕನ್ನಡದಲ್ಲಿ ಒಟ್ಟು ಮೂರು ಸಂಧಿಕ್ರಿಯೆಗಳಿದ್ದು ಅವುಗಳನ್ನು ಲೋಪ, ಆಗಮ, ಆದೇಶ ಸಂಧಿ ಎಂದು ಗುರುತಿಸುವರು. ಇವುಗಳಲ್ಲಿ ಲೋಪ ಸಂಧಿ ಮತ್ತು ಆಗಮ ಸಂಧಿಗಳನ್ನು ಸ್ವರ ಸಂಧಿಗಳೆನ್ನುವರು. ಆದೇಶ ಸಂಧಿಯನ್ನು ವ್ಯಂಜನ ಸಂಧಿ ಎನ್ನುವರು.

**ಲೋಪ ಸಂಧಿ:** ಸಂಧಿ ಕಾರ್ಯ ನಡೆಯುವಾಗ ಸ್ವರದ ಮುಂದೆ ಸ್ವರವು ಪರವಾದಾಗ ಪೂರ್ವಪದದ ಅಂತ್ಯದ ಸ್ವರ ಲೋಪವಾದರೆ ಅದನ್ನು ಲೋಪ ಸಂಧಿ ಎನ್ನುವರು.

**ಉದಾ:** ಊರಲ್ಲಿ = ಊರು+ಅಲ್ಲಿ
ಬೇರೊಬ್ಬ = ಬೇರೆ+ಒಬ್ಬ
ಗೊತ್ತಿಲ್ಲ = ಗೊತ್ತು+ಇಲ್ಲ

**ಆಗಮ ಸಂಧಿ:** ಲೋಪ ಸಂಧಿ ಮಾಡುವಾಗ ಅರ್ಥವು ಕೆಡುವಂತಿದ್ದರೆ ಆ ಎರಡು ಸ್ವರಗಳ ಮಧ್ಯೆ 'ಯ್ ' ಅಥವಾ 'ವ್ ' ಕಾರವನ್ನು ಸೇರಿಸಿ ಸಂಧಿ ಮಾಡುವರು. ಇದನ್ನು ಆಗಮ ಸಂಧಿ ಎನ್ನುವರು.

**ಉದಾ:** ತಾಯಿಯಿಂದ = ತಾಯಿ + ಇಂದ

ಮರವೇರಿ = ಮರ + ಏರಿ

**ಆದೇಶ ಸಂಧಿ:** ಪೂರ್ವ ಪದ ಮತ್ತು ಉತ್ತರ ಪದಗಳು ಸೇರಿ ಸಂಧಿಯಾಗುವಾಗ ಉತ್ತರ ಪದದ ಆದಿಯ ಕ, ತ, ಪ ಗಳಿಗೆ ಅನುಕ್ರಮವಾಗಿ ಗ, ದ, ಬ ಗಳು ಆದೇಶವಾಗಿ ಬಂದು ಸೇರಿ ಸಂಧಿಯಾಗುವುದನ್ನು ಆದೇಶ ಸಂಧಿ ಎನ್ನುವರು.

**ಉದಾ:** ಮಳೆಗಾಲ = ಮಳೆ+ಕಾಲ
ತಲೆದೂಗು = ತಲೆ+ತೂಗು
ಕಂಬನಿ = ಕಣ್+ಪನಿ

## ಕರ್ಮಧಾರಯ ಸಮಾಸ

ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು, ವಿಶೇಷಣ – ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರಯ ಸಮಾಸ.

**ಉದಾ :** ಉರಿಯಾದ ಬಿಸಿಲು - ಉರಿ ಬಿಸಿಲು

ತಂಪಾದ ಎಲರ್ - ತಂಬೆಲರ್

ಕೆಳಗೆ ನೀಡಲಾದ ಪದಗಳನ್ನು ವಿಗ್ರಹಿಸಿ ಬರೆಯಿರಿ.

ಹೆಬ್ಬಾವು

ಬೆಳ್ಗೊಡೆ

**ದೇಶ ಸುತ್ತು ಕೋಶ ಓದು**

## ಘಟಕ ಮೌಲ್ಯಮಾಪನ

1. ‘ಪರಿಸರದ ಕತೆ’ ಪಾಠದಲ್ಲಿ ‘ಲೇಖಕರು ಕೆಟ್ಟು ಹೋಗಿದ್ದಾರೆ’ ಎಂದು ಊರವರು ಹೇಳಿಕೊಳ್ಳಲು ಕಾರಣವೇನು?
2. ಲೇಖಕರ ನಾಯಿಗೆ ‘ಕಿವಿ’ ಎಂಬ ಹೆಸರು ಬಂದುದು ಹೇಗೆ?
3. ‘ಸಹಜೀವಿಗಳೊಂದಿಗೆ ಸಹಬಾಳ್ವೆ’ ಎಂಬ ಆಶಯ ‘ಪರಿಸರದ ಕತೆ’ ಪಾಠದಲ್ಲಿ ಹೇಗೆ ವ್ಯಕ್ತವಾಗಿದೆ?
4. ಪ್ರಾಣಿಗಳನ್ನು ಬೇಟೆಯಾಡುವುದರ ಬಗ್ಗೆ ತೇಜಸ್ವಿಯವರ ಚಿಂತನೆ ಬದಲಾಗಲು ಕಾರಣವೇನು?
5. ವನ್ಯಜೀವಿ ಸಂರಕ್ಷಣೆಯ ಕುರಿತು ‘ಪರಿಸರದ ಕಥೆ’ ಪಾಠ ನೀಡುವ ಸಂದೇಶವೇನು?
6. ಮಗನ ಕಳೇಬರವನ್ನು ಕಂಡು ಆಘಾತಗೊಂಡ ದುರ್ಯೋಧನನ ಮಾನಸಿಕ ಸಂಘರ್ಷವನ್ನು ವಿವರಿಸಿರಿ.
7. ಕರ್ಣ ಮತ್ತು ದುರ್ಯೋಧನರ ಗೆಳೆತನವನ್ನು ‘ನೀನಿಲ್ಲದಿವೆಲ್ಲಮೊಳವೆ’ ಕಾವ್ಯಭಾಗದ ಹಿನ್ನೆಲೆಯಲ್ಲಿ ವಿವರಿಸಿರಿ.
8. ‘ಯುದ್ಧವು ಯಾವ ಸಮಸ್ಯೆಗೂ ಪರಿಹಾರವಲ್ಲ. ಅದು ಇತ್ತಂಡಕ್ಕೂ ವಿನಾಶವನ್ನೇ ಬಿತ್ತುವುದು’ ಎಂಬ ಸಂದೇಶವನ್ನು ‘ನೀನಿಲ್ಲದಿವೆಲ್ಲಮೊಳವೆ’ ಪಾಠದ ಆಧಾರದಲ್ಲಿ ವಿಶದೀಕರಿಸಿರಿ.
9. ಕೆಳಗೆ ನೀಡಲಾದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

    ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ

    ಮಳೆ ಸುರಿಸಿ ಹಗುರಾದ ಮುಗಿಲಿನಂತೆ

10. ಮುಗಿಲಿನ ಯಾವ ಗುಣವು ‘ಇರಬೇಕು ಇರುವಂತೆ’ ಕವನದಲ್ಲಿ ವರ್ಣಿತವಾಗಿದೆ?
11. ‘ಇರಬೇಕು ಇರುವಂತೆ’ ಕವನದಲ್ಲಿ ಇರುಳಿನ ತ್ಯಾಗಮನೋಭಾವವನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ?
12. ಪ್ರಕೃತಿಯ ಸಹಜ ಪ್ರವೃತ್ತಿಗಳು ಮಾನವನ ಬದುಕಿಗೆ ಹೇಗೆ ಪೂರಕವಾಗಿವೆ? ‘ಇರಬೇಕು ಇರುವಂತೆ’ ಕವನದ ಆಧಾರದಲ್ಲಿ ವಿವರಿಸಿರಿ.
13. ಅಮೇರಿಕದ ಪ್ರಾಥಮಿಕ ಶಾಲೆಯ ವ್ಯವಸ್ಥೆ ಮತ್ತು ಶಿಕ್ಷಣ ಪದ್ಧತಿಯ ಬಗ್ಗೆ ಪಾಠದ ಆಧಾರದಲ್ಲಿ ನಿಮಗೆ ತಿಳಿದು ಬಂದ ವಿಚಾರಗಳನ್ನು ಪ್ರಬಂಧ ರೂಪದಲ್ಲಿ ಬರೆಯಿರಿ.
14. ನೆರೆಹೊರೆಯ ಬಾಂಧವ್ಯವು ‘ಅಮೇರಿಕಾದಲ್ಲಿ ಗೊರೂರು’ ಪ್ರವಾಸ ಕಥನದಲ್ಲಿ ಹೇಗೆ ಚಿತ್ರಿತವಾಗಿದೆ? ನಿಮ್ಮ ಮಾತುಗಳಲ್ಲಿ ವಿವರಿಸಿರಿ.
15. ವಿದೇಶಿ ಪ್ರಜೆಯೊಬ್ಬನನ್ನು ಅಮೇರಿಕಾದ ಪ್ರಾಥಮಿಕ ಶಾಲೆಯ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳು ಉಪಚರಿಸಿದ ರೀತಿಯನ್ನು ವಿವರಿಸಿರಿ.

# ಘಟಕ – 3

# ಸಾಧನೆಯ ಹಾದಿ



ಸಮಾನತೆಯು ಸಮಾಜದ ಸಮಗ್ರ ಅಭಿವೃದ್ಧಿಯ ಮೂಲಾಧಾರ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಲು ಅವಕಾಶ ದೊರೆತಾಗ ಅದು ದೇಶದ ಒಟ್ಟು ಅಭಿವೃದ್ಧಿಗೆ ಕಾರಣವಾಗುತ್ತದೆ. ಸಾಧಕರನ್ನು ಸಮಾಜ ಮನ್ನಿಸದಿದ್ದರೂ ಸಾಧಕರು ತಮ್ಮ ಕೆಲಸವನ್ನು ಮಾಡುತ್ತಲೇ ಇರುತ್ತಾರೆ ಎಂಬ ಆಶಯವನ್ನು 'ಭೀಮ' ಎಂಬ ಕವಿತೆ ಪ್ರತಿಬಿಂಬಿಸುತ್ತದೆ. ಲಿಂಗ ಸಮಾನತೆ ಸಾಮಾಜಿಕ ಜೀವನದಲ್ಲಿ ಹೇಗೆ ಅಗತ್ಯವೋ ಹಾಗೆಯೇ ಕೌಟುಂಬಿಕ ಜೀವನದಲ್ಲೂ ಅಗತ್ಯ. ಇವು ನೆಲೆ ನಿಂತಾಗ ಮಾತ್ರ ಸಮತೋಲಿತ ಫಲಿತಾಂಶಗಳು ಹೊರಬರುತ್ತವೆ. ಇದಕ್ಕೆ 'ಅನ್ನಿ ಅನ್ನಪೂರ್ಣೆಯಾದಳು' ಎಂಬ ಕಥೆ ಸಾಕ್ಷಿಯಾಗುತ್ತದೆ. ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಪುರುಷರಷ್ಟೇ ಸಮರ್ಥರು, ಮಾತ್ರವಲ್ಲದೆ ಅಸಾಧ್ಯವಾದುದನ್ನು ಸಾಧಿಸಬಲ್ಲರು ಎಂಬುದನ್ನು 'ರುದ್ರ ಹೆಲಿಕಾಪ್ಟರ್ ಹಿಂದಿನ ಸ್ತ್ರೀ ಶಕ್ತಿ' ಎಂಬ ಪಾಠ ನಿರೂಪಿಸುತ್ತದೆ. ಸೃಷ್ಟಿಯ ವೈಚಿತ್ರ್ಯಗಳಲ್ಲಿ ಭಿನ್ನತೆಗಳಿರುವುದು ಸಹಜ. ಅವುಗಳನ್ನು ಮೀರಿ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ ಎಂಬುದಕ್ಕೆ ಪೂರಕವಾಗಿ, ಲಿಂಗ ಸಮಾನತೆಯನ್ನು ಸಾರುವ 'ಬದುಕಿನ ತಿರುವು' ಎಂಬ ನಿರೂಪಿತ ಆತ್ಮಕಥೆಯ ಪಾಠವು ಈ ಘಟಕದಲ್ಲಿ ಒಳಗೊಂಡಿದೆ.

# ಭೀಮ

ಸುಂದರ ಬಾರಡ್ಕ




ಭಾರತ ಸಮರ
ದುಷ್ಟ ಶಕ್ತಿಗಳ ನಿಗ್ರಹಿಸಿ
ಸಮ ಸಾಮ್ರಾಜ್ಯದ ಗುರಿ ಭೀಮನಿಗೆ
ಎಷ್ಟೋ ಯುದ್ಧಗಳ ಗೆದ್ದರೂ
ಆತ ಹಿಗ್ಗಲಿಲ್ಲ - ಕುಗ್ಗಲೂ ಇಲ್ಲ

ರಣರಂಗಕ್ಕೆ ತೇರನೆಳೆದು ತಂದ
ನಡುದಾರಿಯಲಿಟ್ಟು ಭೀಮನೆಂದ-
ತೇರನು ಹಿಂದಕೆ ತಳ್ಳದಿರಿ.
ಛಲ, ಬಲವಿದ್ದರೆ ಮುಂದಕ್ಕೊಯ್ಯಿರಿ
ಇಲ್ಲಾ ಬಿಟ್ಟು ಬಿಡಿ. ಇರಲಿ ಇಲ್ಲೇ
ಸಾಧಿಸಬಹುದು ಗುರಿಯನ್ನು
ಇಲ್ಲಿಂದಲೇ...

ಭೀಮನಿಗೆ ತನ್ನ ಅಂತ್ಯದ ಅರಿವಿತ್ತು
ವೈರಿಗಳು ಇಲ್ಲ ಸಾವು ಬೇಟೆಯಾಡುತ್ತಿದೆ.
ಸಾವಿಗೆ ಅಂಜಿದವನಲ್ಲ ಭೀಮ
ಆದರೂ ಒಂದೇ ಒಂದು ಕೊರಗು
ತನ್ನ ಬಳಿಕ ಸೇನೆ ಮುನ್ನಡೆಸುವವರಾರು?

ಇಷ್ಟಾದರೂ ಭೀಮ ಭಾರತದಲ್ಲಿ
ಎಷ್ಟೋ ಬಾರಿ ಏನೂ ಆಗಲಿಲ್ಲ
ಮಹರನಾಗಿ ಸಾಯದೆ ಅಮರನಾದ
ಮಾನವತಾವಾದಿಯಾಗಿ
ಶುದ್ಧನಾದ – ಬುದ್ಧನಾದ



**ಸುಂದರ ಬಾರಡ್ಕ :** ಸುಂದರ ಬಾರಡ್ಕ ಅವರು ಕಾಸರಗೋಡು ಜಿಲ್ಲೆಯ ಬದಿಯಡ್ಕ ಸಮೀಪದ ಬಾರಡ್ಕದಲ್ಲಿ ಐತ್ತ ಹಾಗೂ ಬೆಳ್ಳೆಚ್ಚಿ ದಂಪತಿಯ ಮಗನಾಗಿ 14-11-1971ರಲ್ಲಿ ಜನಿಸಿದರು. ಕೆಲವು ವರ್ಷ ಪತ್ರಕರ್ತರಾಗಿ ದುಡಿದರು. ಬದಿಯಡ್ಕ ಕೇಂದ್ರೀಕರಿಸಿ ಸ್ಥಾಪನೆಗೊಂಡ ಅಂಬೇಡ್ಕರ್ ವಿಚಾರ ವೇದಿಕೆ, ತುಳುವೆರೆ ಆಯನಕೂಟ ಮುಂತಾದ ಸಂಘಟನೆಗಳಲ್ಲಿ ಸಮಾಜ ಸೇವೆ, ಸಂಘಟನಾ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಸಂವೇದನಾಶೀಲ ಕವಿಯಾದ ಇವರು, ಸಮಾಜವನ್ನು ಸೂಕ್ಷ್ಮವಾಗಿ ಪರಿಗ್ರಹಿಸಿ ವರ್ಗ, ವರ್ಣಭೇದ, ಅಸಮಾನತೆಯ ವಿರುದ್ಧ ಸೌಮ್ಯ ಪ್ರತಿಭಟನೆ ನಡೆಸುತ್ತಲೇ ಬಂದಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದು ಆ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿದ್ದಾರೆ. ಕಪ್ಪು ಹಾದಿಯ ಕೆಂಪು ಹೆಜ್ಜೆಗಳು (ಕವನ ಸಂಕಲನ), ಮಿತ್ತಮ್ಮನ ಕಡೆಂಜೊಳು (ಕಥಾ ಸಂಕಲನ), ಪೊಲ (ಜಾನಪದ ಚಿಕಿತ್ಸೆಗಳ ಮಾಹಿತಿ ಸಂಗ್ರಹ ಕೃತಿ), ನೆಲದನಿ (ಸಂಸ್ಕೃತಿ ಚಿಂತನ), ಒಂದು ಹೆಜ್ಜೆ ಜಾಗ ಕೊಡಿ (ಸಂಪಾದಿತ) ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರಿಗೆ ಪಂಡಿತ್ ಕರುಪ್ಪನ್ ಸ್ಮಾರಕ ಪ್ರಶಸ್ತಿ, ಕೇರಳ ತುಳು ಅಕಾಡೆಮಿ ಗೌರವ ಸನ್ಮಾನ, ಕನ್ನಡ ಪಯಸ್ವಿನಿ ಪುರಸ್ಕಾರ, ಕೇರಳೋದಯ ಗೌರವ ಸನ್ಮಾನ , ದ್ರಾವಿಡ ಭಾಷಾ ಪುರಸ್ಕಾರಗಳು ದೊರೆತಿವೆ. ಪ್ರಸ್ತುತ ಕವನವನ್ನು ರಾಧಾಕೃಷ್ಣ ಉಳಿಯತ್ತಡ್ಕ ಅವರು ಸಂಪಾದಿಸಿ ಪ್ರಕಟಿಸಿದ 'ರಾಮ ಕಂಡ ಭೀಮ' ಸಂಕಲನದಿಂದ ಆರಿಸಲಾಗಿದೆ. ಭೀಮರಾವ್ ರಾಮ್ ಜಿ ಅಂಬೇಡ್ಕರ್ ಅವರ ಹೋರಾಟದ ಸಾಧನೆಯನ್ನು ನೋಡುವ ಪ್ರಯತ್ನ ಈ ಕವಿತೆಯಲ್ಲಿದೆ.

## ನವೀನ ಪದಗಳ ಅರ್ಥ

ನಿಗ್ರಹಿಸು - ಹತೋಟಿಗೆ ತರು. ತೇರು - ರಥ. ಮಹರ - ಪಲ್ಲಕ್ಕಿ ಹೊರುವವ.

## ಉತ್ತರಿಸಿರಿ

1. ತನ್ನ ಬಳಿಕ ಸೇನೆ ಮುನ್ನಡೆಸುವವರಾರು ಎಂದು ಭೀಮನು ಚಿಂತಿಸಲು ಕಾರಣವೇನು?
2. 'ಭೀಮ' ಕವನದಲ್ಲಿ ಭೀಮನ ಕೊರಗು ಏನಾಗಿತ್ತು?
3. ಭೀಮನು ಸ್ಥಿತಪ್ರಜ್ಞನಾಗಿದ್ದ - ಯಾಕೆ?
4. ಭೀಮನ ಸಾಧನೆಗಳೇನು?

## ಆಶಯ ಬರಹ

'ಭೀಮ' ಕವನದ ಆಶಯ ಬರೆಯಿರಿ.

## ಸ್ವಾರಸ್ಯ ಬರಹ

'ಮಹರನಾಗಿ ಸಾಯದೆ ಅಮರನಾದ' - ಈ ಸಾಲಿನ ಸ್ವಾರಸ್ಯವನ್ನು ಬರೆಯಿರಿ.

## ಟಿಪ್ಪಣಿ

ಸಂವಿಧಾನ ಶಿಲ್ಪಿ ಡಾ. ಭೀಮರಾವ್ ಅಂಬೇಡ್ಕರ್ ಇವರ ಜೀವನದ ಕುರಿತು ಕವನದ ಹಿನ್ನೆಲೆಯಲ್ಲಿ ಟಿಪ್ಪಣಿಯನ್ನು ಬರೆಯಿರಿ.

## ಲಿಖಿತ ಭಾಷಣ ತಯಾರಿ

ಅಂಬೇಡ್ಕರ್ ಜಯಂತಿಯ ಅಂಗವಾಗಿ ನಡೆಯುವ ಸಮಾರಂಭದಲ್ಲಿ ಭಾಷಣ ಮಾಡಲು 'ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆ' ಎಂಬ ವಿಷಯದ ಕುರಿತು ಲಿಖಿತ ಭಾಷಣವನ್ನು ತಯಾರಿಸಿರಿ.

## ವಚನಗಳು

ವಚನಗಳಲ್ಲಿ ಎರಡು ವಿಧ. ಏಕವಚನ ಮತ್ತು ಬಹುವಚನ. ಏಕವಚನ ಎಂದರೆ ಒಂದೇ ವಸ್ತು ಅಥವಾ ವ್ಯಕ್ತಿಯನ್ನು ಸೂಚಿಸುವ ಪದ. ಇದು ಸಂಖ್ಯೆಯನ್ನು ತಿಳಿಸುವ ಒಂದು ವಿಧಾನವಾಗಿದ್ದು, ಒಂದು ವಸ್ತು, ಪ್ರಾಣಿ ಅಥವಾ ವ್ಯಕ್ತಿಯನ್ನು ಹೇಳಲು ಬಳಸಲಾಗುತ್ತದೆ.

**ಉದಾ:** ಮರ, ಮಗು, ಕಲ್ಲು, ಮನುಷ್ಯ.

ಬಹುವಚನ ಎಂದರೆ ಒಬ್ಬರಿಗಿಂತ ಹೆಚ್ಚು ಅಥವಾ ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಸೂಚಿಸುವ ಪದ.

**ಉದಾ:** ಮರಗಳು, ಮಕ್ಕಳು, ಕಲ್ಲುಗಳು, ಮನುಷ್ಯರು.

**ಕೆಳಗಿನ ಪಟ್ಟಿಯನ್ನು ಭರ್ತಿಮಾಡಿರಿ**

| ಏಕವಚನ | ಬಹುವಚನ |
|---|---|
| ಹಸು | ಹಸುಗಳು |
| ಪಕ್ಷಿ | |
| ಹುಡುಗ | |
| ಸ್ನೇಹಿತ | |
| ಹುಡುಗಿ | |
| ಬಾಗಿಲು | |
| ಹೂವು | |
| ಹಾಡು | |
| ಮಗು | |

# ಅನ್ನಿ ಅನ್ನಪೂರ್ಣೆಯಾದಳು

ಕೃಷ್ಣಮೂರ್ತಿ ಪುರಾಣಿಕ



ಹದಿನೈದು ವರ್ಷಗಳ ಹಿಂದೆ ತನ್ನ ತಾಯಿಯೊಡನೆ ನಮ್ಮ ಮನೆಗೆ ಬರುತ್ತಿದ್ದ ಅನ್ನಿಗೆ ಆಗ ಐದು ವರುಷಗಳಾಗಿರಬೇಕು. ವಯಸ್ಸಿಗೆ ತಕ್ಕಹಾಗೆ ಮುದ್ದು ಮುದ್ದಾಗಿದ್ದಳು. ಬುದ್ಧಿಶಕ್ತಿಯಲ್ಲಿ ವಯಸ್ಸಿನ ಪ್ರಮಾಣವನ್ನು ಮೀರಿದ್ದಳು. ಒಳ್ಳೆ ಸುಟಿಸುಟಿಯಾಗಿ ನಮ್ಮ ಮನೆಯಲ್ಲಿ ಓಡಾಡುತ್ತಿದ್ದಳು.

ಅನ್ನಿಯ ಪೂರ್ಣವಾದ ಹೆಸರು ಅನ್ನಪೂರ್ಣ. ಅಡಿಗೆಯವಳ ಮಗಳನ್ನು ಪೂರ್ಣವಾದ ಹೆಸರಿನಿಂದ ಯಾರು ಬಾಯಿ ತುಂಬಾ ಕರೆಯಬೇಕು? ಅವಳ ಪೂರ್ಣ ಹೆಸರು ಹೀಗೆಂಬುದು ಕೂಡ ಮೊನ್ನೆ ಮೊನ್ನೆ ನನಗೆ ಗೊತ್ತಾಯಿತು.

ಅನ್ನಿ ಚೆಲುವೆಯರಾದ ಆ ವಯಸ್ಸಿನ ಹುಡುಗಿಯರಲ್ಲಿ ಎದ್ದು ಕಾಣುತ್ತಿದ್ದಳು. ತನಗೆ ಹಾಳತಾಗದ ಇನ್ನೊಬ್ಬರು ಕೊಟ್ಟ ವಸ್ತ್ರಗಳನ್ನು ಧರಿಸಿದರೂ ಅವಳು ಅವನ್ನೆ ಓರಣದಿಂದ ಧರಿಸುತ್ತಿದ್ದಳು. ತೇಪೆಗಳಿಗೆ ಏನೇನೋ ಹೊಲಿಗೆ ಹಾಕಿ ಅವು ಹರಕಲು ಅಲ್ಲವೆಂದು ಕಲಾಪೂರ್ಣವಾಗಿ ತೋರಿಸುತ್ತಿದ್ದಳು. ಸುಂದರವಾದ, ಮಾಟಾದ ಮುಖದಲ್ಲಿ ಮೂಗು ಸಪ್ರಮಾಣವಾಗಿ ಶೋಭಿಸುತ್ತಿತ್ತು. ಅವಳು ಮುಖವನ್ನು ತೊಳೆದುಕೊಂಡು ಶುದ್ಧವಾಗಿ ನಮ್ಮ ಮನೆಗೆ ಬಂದಾಗ ನನಗೆ ಅವಳು ತಿಳಿಬೆಳದಿಂಗಳ ತಿಂಗಳಿನಂತೆ ಕಾಣುತ್ತಿದ್ದಳು. ನನಗೆ ಅವಳೊಡನೆ ಮಾತನಾಡಬೇಕೆಂಬ ಲವಲವಿಕೆ. ಆದರೆ ಅವಳು ಅಡಿಗೆಯವಳ ಮಗಳು, ಅವಳೊಡನೆ ಮಾತಾಡಿದರೆ ಅಮ್ಮ ಸುಮ್ಮನೆ ಬಿಟ್ಟಾಳೆ?

ನಮ್ಮ ಅಮ್ಮನ ತವರು ಮನೆಯೂ ಶ್ರೀಮಂತರದು. ಶ್ರೀಮಂತಿಕೆಯ ಸುಪ್ಪತ್ತಿಗೆಯಲ್ಲಿಯೇ ಬೆಳೆದವಳು. ಆ ವಾತಾವರಣದಲ್ಲಿ ಬೆಳೆದ ಅಮ್ಮನಿಗೆ ಸಿರಿತನ-ಬಡತನಗಳ ತಾರತಮ್ಯ ಭಾವ ಯಾವಾಗಲೂ ಇದ್ದೇ ಇರುತ್ತಿತ್ತು.

ಆಳುಗಳೊಡನೆ ಮಾತಾಡುವಾಗ ಅವಳು ಗಂಭೀರಳಾಗಿ ಮೇಲೆತ್ತರದಲ್ಲಿಯೇ ಇರುತ್ತಿದ್ದಳು. ಅವರ ಮಕ್ಕಳನ್ನು ಅಸಹ್ಯದಿಂದ ನೋಡುತ್ತಿದ್ದಳು. ಆದರೆ ಅವರ ಬಗ್ಗೆ ಅವಳಲ್ಲಿ ತಿರಸ್ಕಾರ ಮಾತ್ರ ಇರುತ್ತಿರಲಿಲ್ಲ. ತಿಂಡಿ ತಿನಿಸುಗಳನ್ನು ಬೇಕಾದಷ್ಟು ಕೊಡುತ್ತಿದ್ದಳು. ಇದರಲ್ಲಿ ಕೂಡ ಶ್ರೀಮಂತಿಕೆಯ ಭಾವವು ಎದ್ದು ಕಾಣುತ್ತಿತ್ತು.

ಅನ್ನಿಯನ್ನು ಕೂಡ ಅವಳು ಅದೇ ಭಾವದಿಂದ ನೋಡುತ್ತಿದ್ದಳು, ತನ್ನ ಮಕ್ಕಳೊಡನೆ ಅವಳು ಕೂತು ತಿನ್ನುವುದು ಅವಳಿಗೆ ಸರಿ ಬರುತ್ತಿರಲಿಲ್ಲ. ಅವಳಿಗೆ ತಿಂಡಿಯನ್ನು ಕೈಯಲ್ಲಿ ಕೊಟ್ಟು 'ಹಿತ್ತಲಲ್ಲಿ ಹೋಗಿ ತಿಂದು ಬಾ' ಎಂದು ಹೇಳುತ್ತಿದ್ದಳು. ನಮಗೆಲ್ಲ ಅಡಿಗೆಯ ಮನೆಯಲ್ಲಿಯೇ ಕೊಡುತ್ತಿದ್ದಳು.

ನಾವೆಲ್ಲ ಅನ್ನಿಯ ತಾಯಿ ಮಾಡಿದ ತಿಂಡಿಗಳನ್ನೆ ತಿನ್ನುತ್ತಿದ್ದೆವು. ಆದರೆ ಅವಳ ಮಗಳು ಮಾತ್ರ ಆ ತಿನಿಸನ್ನು ದೂರ ಹೋಗಿ ತಿಂದು ಹೊರಗಿನ ನಲ್ಲಿಯಲ್ಲಿ ಕೈತೊಳೆದುಕೊಂಡು ಬರುತ್ತಿದ್ದಳು. ಅವಳಿಗೆ ತಿಂಡಿ ಇನ್ನೂ ಬೇಕಾದರೆ ಯಾರು ಕೊಡಬೇಕು? ಅವಳು ಬೇಡುತ್ತಿರಲಿಲ್ಲ. ಸುಮ್ಮನೆ ಹೋಗಿ ಹೊರಗಿನ ಪಡಸಾಲೆಯಲ್ಲಿ ಆಣೆಕಲ್ಲು ಆಡುತ್ತಿದ್ದಳು.

ಇದು ನನಗೆ ವಿಚಿತ್ರವೆನಿಸುತ್ತಿತ್ತು. ಆದರೆ ಅಮ್ಮನ ಎದುರು ಮಾತಾಡುವ ಧೈರ್ಯ ನನಗೆ ಇರಲಿಲ್ಲ.

ಅಂದು ಅಮ್ಮ ಭಾನುವಾರದ ಚಿರೋಟಿಗಳನ್ನು ಅನ್ನಿಯ ತಾಯಿಯಿಂದ ಮಾಡಿಸುತ್ತಿದ್ದಳು. ಅಮ್ಮ ಅಲ್ಲಿಯೇ ಕುಳಿತು ಮೇಲ್ವಿಚಾರಣೆ ಮಾಡುತ್ತಿದ್ದಳು. ನಾನು ಅದೇ ಆಟ ಮುಗಿಸಿಕೊಂಡು ಮನೆಗೆ ಬಂದೆ. ಅನ್ನಿ ನನ್ನನ್ನು ನೋಡಿ ಆಣೆಕಲ್ಲು ತೂರುವುದನ್ನು ಅಲ್ಲಿಯೇ ನಿಲ್ಲಿಸಿ ಚಟಕ್ಕನೆ ಎದ್ದಳು, ಬಡವಿಯ ಮಗಳು: ಶ್ರೀಮಂತೆಯ ಮಗನೊಡನೆ ನಡೆದುಕೊಳ್ಳಬೇಕಾದ ರೀತಿಯೇ ಅದು ಆಗಿರಬೇಕು.

ಅವಳನ್ನು ನೋಡಿದ ಕೂಡಲೆ ನನಗೆ ಸಂತೋಷವಾಯಿತು. ಬಹಳ ದಿನಗಳಿಂದ ಅವಳಿಗೆ ಒಂದು ಮಾತನ್ನು ಹೇಳಬೇಕೆಂದು ಮಾಡಿದ್ದೆ. ಅದನ್ನು ಈ ದಿನ ಹೇಳಬೇಕೆಂದು, ಅವಳು ನಿಲ್ಲುವಂತೆ ಸನ್ನೆಮಾಡಿ ಒಳಗೆ ಕರೆದೆ.

ಅವಳು ಅಂಜುತ್ತ ಅಂಜುತ್ತ ಒಳಗೆ ಬಂದಳು.

"ನೀನು ಸಾಲೆಗೆ ಹೋಗುವುದಿಲ್ಲವೇನು ಅನ್ನಿ?"

"ಇಲ್ಲ. ನಾನು ಅಡಿಗೆಯವಳ ಮಗಳು, ಸಾಲೆ ಬೇಡವೆಂದು ಅನ್ನುತ್ತಾಳೆ ನಮ್ಮ ಅಮ್ಮ".

"ಅಡಿಗೆಯವರ ಮಕ್ಕಳು ವಿದ್ಯಾಭ್ಯಾಸ ಮಾಡಬಾರದೆಂದು ಯಾರು ಹೇಳುತ್ತಾರೆಯೆ? ನೀನು ಹಟ ಹಿಡಿದು ಸಾಲೆಗೆ ಹೋಗು".

"ಕಲಿತು ಮಾಡೂದಾದರೂ ಏನು?"

"ನಿನಗೆ ನನ್ನಂತಹ ಗಂಡನು ಬೇಕಾದರೆ ನೀನು ಕಲಿತು ಜಾಣಳಾಗಬೇಕು".

ಅನ್ನಿ ಮುಗ್ಧ ಭಾವದಿಂದ ನನ್ನನ್ನು ನೋಡಿದಳು. ಆ ನೋಟವನ್ನು ನಾನು ಮರೆಯಲಾರೆ, ಆ ಹೊತ್ತಿಗೆ ಅಮ್ಮ ಬರದಿದ್ದರೆ ನಾನು ಅವಳಿಗೆ ಕಲಿಯುವ ಸಾಮುಗ್ರಿಗಳನ್ನು ಪೂರೈಸುವದಾಗಿ ಹೇಳುತ್ತಿದೆ .

"ಈ ಹುಡಿಗೀ ಕೂಡ ಏನು ಮಾತಾಡತೀಯೋ ಬುದ್ದಿ ಇಲ್ಲದವನೆ! ಹೋಗು ಜಳಕ ಮಾಡು..."

"ನಾನೆಲ್ಲಿ ಮಾತಾಡಿದೆ ಅಮ್ಮ!"

"ಮತ್ತೆ ಏನೇನೋ ಗುಣಗುಣು: ನಡೆಸಿದಿರಲ್ಲ".

" ಅವಳಿಗೆ ಸುಮ್ಮನೆ ಅವಳಮ್ಮನ ಬೆನ್ನು ಹತ್ತಿ ತಿರಗುವದಕ್ಕಿಂತ ಸಾಲೆಗೆ ಏಕೆ ಹೋಗಬಾರದು ಎಂದು ಕೇಳಿದೆ. ಅಮ್ಮ! ಅವರ ತಾಯಿಗೆ ಹೇಳಿ ಇವಳನ್ನು ಸಾಲೆಗೆ ಕಳಿಸಮ್ಮ!"

"ಯಾಕೆ? ನಿನಗೆ ಇವಳನ್ನು ಮದುವೆ ಮಾಡಿಕೊಳ್ಳಬೇಕಾಗಿದೆಯೇನೋ ಹುಚ್ಚಪ್ಪ!"

"ಯಾರು ಮದುವೆ ಮಾಡಿಕೊಂಡರೂ ವಿದ್ಯೆ ಅವಳಲ್ಲಿ ಬೇಡವೇನು? ಅವಳು ಕಲಿಯಲಿ ಅಮ್ಮ!"

"ಕಲಿತು ಮೇಡಮ್ಮನಾಗಲಿ! ಇಲ್ಲಾ ಹೊಟೇಲ್ ಮಾಣಿಯ ಕೈ ಹಿಡಿದು ಪಕೋಡಾ ಕರಿಯಲಿ".

ಅಮ್ಮ ನಕ್ಕಳು.

ಅದು ಅಷ್ಟು ಒಳ್ಳೆಯ ನಗೆಯೆಂದು ನನಗನಿಸಲಿಲ್ಲ.

ಅಮ್ಮನಿಗೆ ನನ್ನ ನಡವಳಿಕೆ ಸರಿಬರುತ್ತಿರಲಿಲ್ಲ. ಅನ್ನಿಗೆ ನಾನು ಪುಸ್ತಕ, ಪೆನ್ನುಗಳನ್ನು ಕೊಡುತ್ತಿದ್ದೆ. ಒಮ್ಮೊಮ್ಮೆ ಪಾಠವನ್ನೂ ಹೇಳುತ್ತಿದ್ದೆ. ಅವಳು ಹತ್ತು ವರುಷಗಳವರೆಗೆ ಕಲಿತು ಎಸ್.ಎಸ್.ಎಲ್.ಸಿ ಗೆ ಬರುವ ಹೊತ್ತಿಗೆ ನಾನು ಕಾಲೇಜಿನಲ್ಲಿ ಸ್ಕಾಲರನಾಗಿ ಮೆರೆಯುತ್ತಿದ್ದೆ.

ಹದಿನಾರು ವರುಷದ ಅನ್ನಿ ಈಗ ಬಹು ಸುಂದರವಾಗಿ ಕಾಣುತ್ತಿದ್ದಳು. ಆನುವಂಶಿಕತೆಯನ್ನು ಅವಳು ದೂರ ಸರಿಸಿ ಪರಿಸರಣದ ಪ್ರಭಾವದಲ್ಲಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡಳು. ಅವಳು ಧ್ಯೇಯವನ್ನು ಸಾಧಿಸಲು ಹಟ ತೊಟ್ಟಂತೆ ಕಾಣುತ್ತಿತ್ತು. ಅವಳು ಒಳ್ಳೆಯ ಕಸೂತಿ ಬಿಡಿಸುತ್ತಿದ್ದಳು. ಒಳ್ಳೆ ಚಿತ್ರ ಬರೆಯುತ್ತಿದ್ದಳು. ತಕ್ಕಮಟ್ಟಿಗೆ ಸಂಗೀತ ಅಭ್ಯಾಸವನ್ನು ಅನುಕರಣೆ ಮಾಡಿ ಕಲಿತುಕೊಂಡಿದ್ದಳು. ತನ್ನ ತರಗತಿಯ ಹುಡುಗಿಯರಲ್ಲಿ ಅವಳು ಯಾವಾಗಲೂ ಮೇಲ್ತರಗತಿಯಲ್ಲಿಯೇ ಅಂಕಗಳನ್ನು ಪಡೆಯುತ್ತಿದ್ದಳು. ಅವಳ ಗುಣಗಳನ್ನು ತರಗತಿಯ ವಿಷಯ ಶಿಕ್ಷಕರು ತುಂಬಾ ಮೆಚ್ಚಿಕೊಂಡಿದ್ದರು. ಅವಳು ಗುಣವತಿ, ರೂಪವತಿ. ನಯ, ಸೌಜನ್ಯಗಳಲ್ಲಿ ಶ್ರೀಮಂತಿಕೆ ಹಾಗೂ ಬಡತನ, ಮೇಲು-ಕೀಳು ಇವುಗಳ ತಿರುಗಣೆಯಲ್ಲಿ ಸಿಕ್ಕ ಅವಳು ಆ ಭಾವದ ಸುಳಿಯಲ್ಲಿಯೆ ಸಿಕ್ಕಿದ್ದಳು. ಹೊಸ ಗಾಳಿ ಅವಳಲ್ಲಿ ಸುಳಿದಿರಲಿಲ್ಲ. ಶ್ರೀಮಂತರು ಶ್ರೀಮಂತರೊಡನೆ ವ್ಯವಹರಿಸಬೇಕು ಎಂಬುದು ಅವಳ ಸಿದ್ಧಾಂತವಾಗಿತ್ತು. ಇದರಲ್ಲಿ ಅವಳು ಪ್ರಾಮಾಣಿಕಳಾಗಿದ್ದಳು.

ಅಡಿಗೆಯವಳಿಗೆ ಈಗ ಅಷ್ಟಷ್ಟು ವಯಸ್ಸಾಗಿತ್ತು. ಆದರೂ ಅವಳು ನಮ್ಮ ಮನೆಗೆ ಬರುವದನ್ನು ನಿಲ್ಲಿಸಿರಲಿಲ್ಲ. ಅಮ್ಮನ ಮನಸ್ಸು ಅವಳ ಬಗ್ಗೆ ಧಾರಾಳವಾಗಿಯೇ ಇತ್ತು, ಆದರೆ ಅನ್ನಿ ಮನೆಗೆ ಬಂದ ಕೂಡಲೇ ಅಮ್ಮ ಸಿಡಿಮಿಡಿಗುಟ್ಟುತ್ತಿದ್ದಳು.

"ಇದೇನು ಅಚ್ಚಮ್ಮ! ನಿನ್ನ ಮಗಳನ್ನು ಬಾರಿಷ್ಟರ ಮಾಡಬೇಕೆಂದು ಮಾಡಿಯೇನು?" ಅಮ್ಮ ಅನ್ನಿಯ ತಾಯಿಯನ್ನು ಕೇಳಿದಳು.

"ಅದಕ್ಕ ಕಲಿಯೂ ಹುಚ್ಚೇ ಹಿಡಿದದ್ರೆವಾ! ನಿಮ್ಮ ಮಗಾ ಅವಳ ತಲೀಯಾಗ ಏನ ತುಂಬ್ಯಾನೋ ಏನು ಮಣ್ಣೂ ಬರೇ ಓದೂದೂ, ಬರೆಯೂದು ಅದನ್ನ ಮಾಡೂದು, ಇದನ್ನ ಮಾಡೂದು ನಡಿಸಿಬಿಟ್ಟಾಳ".

"ಅವಳಿಗೆ ಅಡಿಗೆ ಮಾಡೂದೂ ಕಲಿಸೀಯಲ್ಲೊ?"

"ಹೆಣ್ಣು ಮಗಳಿಗೆ ಅಡಿಗೆ ಕಲಿಸೂದು ಏನ ಬಂತು. ಮೀನಕ್ಕೆ ಈಜಲಿಕ್ಕೆ ಯಾರಾರ ಕಲಿಸತಾರೇನು? ಆದರೆ ಒಂದು ಮಾತು. ನನ್ನ ಮಗಳನ್ನ ನನ್ನ ಕೆಲಸಕ್ಕೆ ಹಚ್ಚೂದಿಲ್ರೆವಾ. ಅಡಿಗೇ ಆಕಿ ಮಗಳು ಅಡಿಗೇನೇ ಮಾಡಬೇಕೆಂಬುದೇನೂ ಶಾಸ್ತ್ರ ಇಲ್ಲ".

"ಮತ್ತ ಏನ ಮಾಡತೀಯೆ?"

"ಯಾವನಾದರೂ ಪುಣ್ಯವಂತನಿಗೆ ಕೊಟ್ಟು ಮದುವೆ ಮಾಡತೀನಿ, ಇಲ್ಲದಿದ್ದರ..."

"ಇಲ್ಲದಿದ್ದರ ಏನ ಮಾಡತಿ?"

"ಹ್ಯಾಂಗಾದರೂ ನಾಕಕ್ಷರ ಕಲಿತಾಳ, ಸಾಲ್ಯಾಗ ಮಾಸ್ತರತೆನ್ನ ಮಾಡತೀನಿ".

"ನಿನಗೆ ತಿಳಿಯೂದಿಲ್ಲ ಅಚ್ಚಮ್ಮ! ನಿನ್ನ ಹುಡಿಗೆ ಬುದ್ಧಿ ಛಲೋ ಆದ. ರೂಪ ಏನೋ ಅದ. ಜ್ವಾಕೆ (ಜೋಕೆ) ಯಿಂದಿರು".

"ಅಂದರ ಬಡವರ ಮಕ್ಕಳು ಬುದ್ಧಿವಂತರಿರಬಾರದು. ರೂಪವತಿ ಇರಬಾರದು ಅಂದಂಗಾತು, ರೂಪಾ, ಬುದ್ದಿ ಎಲ್ಲಾ ಶ್ರೀಮಂತರ ಗುತ್ತಿಗಿ ಏನು?"

"ಅಂತೂ ಮಗಳ ಪುಣ್ಯದಿಂದ ನೀನು ಮಾತಾಡಲಿಕ್ಕೆ ಕಲಿತೀ ಬಿಡು. ನನ್ನ ಮಾತು ಕೇಳು ಅಚ್ಚಮ್ಮ! ನಿನ್ನ ಮಗಳು ಇಷ್ಟು ಕಲಿತದ್ದು ಸಾಕು. ಸಾಲಿ ಬಿಡಿಸಿ ಬಿಡು. ಒಂದು ಛಲೋ ಗಂಡು ನೋಡಿ ಕೊರಳಿಗೆ ಕಟ್ಟಿಬಿಡು".

"ನೀವು ಹೆಂಗ ಹೇಳತೀರಿ ಹಂಗ ಮಾಡತೀನಿ ಬಿಡ್ರಿ. ಆದರ ಆಕೆ ಒಂದು ನನ್ನ ಮಾತು

ಕೇಳಬೇಕಲಾ!"

ಈ ಮಾತುಗಳನ್ನು ನಾನು ಕೋಣೆಯಲ್ಲಿ ಕುಳಿತು ಕೇಳುತ್ತಿದ್ದೆ. ಇನ್ನೊಬ್ಬರ ಸ್ವಾತಂತ್ರ್ಯದಲ್ಲಿ ಕೈ ಹಾಕುವ ಈ ಆಧುನಿಕ ಪ್ರಜಾಪ್ರಭುತ್ವ ಪದ್ಧತಿಯನ್ನು ಅಳವಡಿಸಿಕೊಂಡ ತಾಯಿಯ ಬಗ್ಗೆ ನನಗೆ ಕನಿಕರವಾಯಿತು.

ಎಂತಹ ಪರಿಸ್ಥಿತಿಯಲ್ಲಿಯೂ ಅನ್ನಿಯನ್ನು ಸಾಲೆ ಬಿಡಿಸಬಾರದೆಂದು ಹೇಳಿ ಬರಲು ನಾನು ಸಿದ್ಧನಾದೆ. ಅರಳುವ ಹೂವಿನ ಬೇರನ್ನು ಕಿತ್ತು ಮಗ ಮಗಿಸುವ ಸುಗಂಧವನ್ನು ಹಾಳು ಮಾಡುವದು ಮಾನವೀಯತೆಗೊಂದು ಅವಲಕ್ಷಣವೆನ್ನುವುದು ನನ್ನ ದೃಢ ನಿರ್ಧಾರವಾಗಿತ್ತು. ನಾನು ಅನ್ನಿಯ ಸೂಕ್ಷ್ಮ ಬೆಳವಣಿಗೆಯನ್ನು ನೋಡುತ್ತಲೇ ಇದ್ದೆ. ಅವಳು ಪರಿಶ್ರಮದಿಂದ ಅಸಾಧಾರಣವಾದ ಸಿದ್ಧಿಯನ್ನು ಪಡೆದುಕೊಂಡದ್ದು ವೇದ್ಯವಾಗಿತ್ತು. ಅವಳಲ್ಲಿ ರೂಪವಿತ್ತು. ಗುಣವಿತ್ತು. ಬುದ್ಧಿ ಇತ್ತು. ಜೊತೆಗೆ ಬಡತನವೂ ಇತ್ತು. ಅಡಿಗೆಯವಳ ಮಗಳಾಗಿ ಹುಟ್ಟಿದ ಅವಳಿಗೆ ಬುದ್ಧಿ, ಸೌಂದರ್ಯವನ್ನು ಕೊಡುವಾಗ ಭಗವಂತನು ಬಹಳ ಧಾರಾಳಿಯಾದದ್ದೂ ಇತ್ತು.

ಆ ಹೊತ್ತು ಮನೆಗೆ ಬಂದ ಕೂಡಲೆ ಅಮ್ಮ ನನ್ನನ್ನು ತರಾಟೆಗೆ ತೆಗೆದುಕೊಂಡಳು. ಅವಳ ಅಭಿಮಾನಕ್ಕೆ ಬರೆ ಎಳೆದಂತಾಗಿತ್ತು. ಶ್ರೀಮಂತನ ಮಗಳು, ಶ್ರೀಮಂತನ ಸೊಸೆ. ಶ್ರೀಮಂತನ ಪತ್ನಿ. ಇಂಥವಳ ಮಗನಾದ ನಾನು ಅಡಿಗೆಯವಳ ಮಗಳ ಮನೆಗೆ ಹೋಗಿ ಮಾತನಾಡಿದ್ದು ಅವಳ ಶ್ರೀಮಂತ ಮಾತೃಹೃದಯಕ್ಕೆ ಸಹಿಸಲಾಗದ ಪೆಟ್ಟಾಗಿತ್ತು.

"ನಿನ್ನ ಬುದ್ದಿ ಸರಿಯಾಗಿದೆಯೊ ಇಲ್ಲವೊ?"

"ಯಾಕಮ್ಮ! ನೀನು ಕೇಳುವುದು ವಿಚಿತ್ರವಾಗಿದೆ".

"ನೀನು ಎಂಥವನು, ನಿನ್ನ ಮನೆತನದ ಅಂತಸ್ತು ಎಂತಹುದು ಒಬ್ಬ ಕ್ಷುಲ್ಲಕ ಅಡಿಗೆಯವಳ ಮನೆಗೆ ಹೋಗಿಬರಬೇಕೆಂದರೆ..."

"ಅಡಿಗೆಯವಳು ಕ್ಷುಲ್ಲಕಳು ಹೇಗೆ ಅಮ್ಮ! ಅವಳ ಪುಣ್ಯದಿಂದಲೇ ಅಲ್ಲವೆ ನಮ್ಮ ಹೊಟ್ಟೆ ತುಂಬುತ್ತಿರುವುದು".

"ಅವಳು ಕೂಲಿಯ ಅಳು: ನೀನು ಕೂಲಿ ಕೊಡುವ ಯಜಮಾನ".

"ಆದರೆ ಅವಳು ಅನ್ನಪೂರ್ಣೆ. ಅನ್ನದಾತೆ. ಅವಳನ್ನು ಆದಿಶಂಕರಾಚಾರ್ಯರೂ ಕೂಡ ...

'ಮಾತಾನ್ನ ಪರಮೇಶ್ವರಿ' ಎಂದಿದ್ದಾರೆ".

"ಅಡ್ಡಡ್ಡ ಮಾತನಾಡಬೇಡ, ಆ ಅನ್ನಿಯೊಡನೆ ನೀನು ಮಾತಾಡಿದ್ದು ನಿಜವೋ!"

"ಯಾರು ಹೇಳಿದರು!"

"ಪ್ರತ್ಯಕ್ಷ ಅವಳ ಅವ್ವ ಅಚ್ಚವ್ವನೆ ಹೇಳಿದ್ದಾಳೆ".

"ಅಂದ ಬಳಿಕ ನಾನು ಹೋಗಿದ್ದು ನಿಜ".

"ನಾಚಿಕೆ ಇಲ್ಲದವನಂತೆ ಹೇಳುತ್ತೀಯಲ್ಲ. ಯಾತಕ್ಕೆ ಹೋಗಿದ್ದಿ. ಏನು ಕೆಲಸವಿತ್ತು?"

"ಇದಕ್ಕೆ ನೀನೇ ಕಾರಣ ಅಮ್ಮಾ!"

"ಅಡಿಗೆಯವಳ ಮನೆಗೆ ನಾನು ಹೋಗೆಂದು ನಿನಗೆ ಹೇಳಿದೆನೆ. ಅಚ್ಚಮ್ಮ ಬರಲು ವಿಳಂಬವಾದಾಗ ಮನೆಗೆಲಸದ ಮಾಯಮ್ಮನನ್ನು ಮಾತ್ರ ಕಳಿಸುತ್ತೇನೆ. ಸುಳ್ಳು ಹೇಳಬೇಡ".

"ನೀನು ನನ್ನನ್ನು ಕಳಿಸಲಿಲ್ಲವಮ್ಮ, ಹೋಗುವಂತೆ ಮಾಡಿದಿ".

"ಈ ಕವಡ ಕಂಟಕ ಮಾತು ಬಿಡಿ".

"ಅನ್ನಿಯನ್ನು ಸಾಲೆ ಬಿಡಿಸು ಎಂದು ನೀನು ಹೇಳಲಿಲ್ಲವೇನು?"

"ಹೇಳಿದೆ ಏನಾಯಿತು? ಬಡವಿಯಾಗಿ ಅವಳು ಕಲಿತರೆ ನಾಳೆ ಕಠಿಣವಾಗುತ್ತದೆ".

"ಅಂದರೆ ಸರಸ್ವತಿಯನ್ನು ಶ್ರೀಮಂತರು ಮಾತ್ರ ಒತ್ತೆ ಇಟ್ಟುಕೊಂಡು ಲಕ್ಷ್ಮಿಯನ್ನು ಪೂಜಿಸುತ್ತಾರೇನು? ಹಾಗೆ ಕೇಳಿದರೆ ಬಡವರ ಭಾಗ್ಯದೇವತೆಯೆ ಶಾರದೆ".

"ನಾ ಬಡವಿ ಮಾತು ಹೇಳಲಿಲ್ಲೊ ಪಂಡಿತಾ! ನಾ ಹೇಳಿದ್ದು ಅಡಿಗೆಯವಳ ಮಾತು. ಈಗ ಆದದ್ದು ಆಗಿ ಹೋತು. ಇನ್ನು ಮ್ಯಾಲ ಆ ಹುಡುಗಿ ಗೂಡ ಮಾತಾಡಬೇಡ".

"ಹಾಗೆ ಕೇಳಿದರೆ ಅವಳೊಡನೆ ಮಾತನಾಡುವಾಗ ನನಗೆ ಶ್ರೀಗಂಧ ತೀಡಿದ ವಾಸನೆ ಬಂದಂತೆ ಆಗುತ್ತದೆ. ಅಷ್ಟು ಸವಿಯಾಗಿ ಮಾತಾಡುತ್ತಾಳೆ".

"ಸವಿಯಾಗಿ ಮಾತಾಡದೇ ಏನು ಮಾಡ್ಯಾಳು, ಅವಳ ಅವ್ವ ಸವಿ ಸವಿ ಅಡಿಗಿ ಮಾಡತಾಳ; ಅವಳ ಮಗಳು ಸವಿ ಸವಿ ಮಾತನಾಡತಾಳ".

"ಯಾತರಿಂದ ಏನು ಕಡಿಮೆಯಾಗಿದ್ದಾಳೆ ಹೇಳು ಅನ್ನಿ. ಸುಂದರಿಯಾಗಿದ್ದಾಳೆ. ಬುದ್ಧಿವಂತೆಯಾಗಿದ್ದಾಳೆ. ವಿದ್ಯಾ ಶಾರದೆ ಅವಳಿಗೆ ಒಲಿದು ನಿಂತಿದ್ದಾಳೆ..."

"ನಿನ್ನ ಮಾತಿಗೆ ನಾನೂ ಇಲ್ಲ ಅನ್ನೂದಿಲ್ಲ ಮಗಾ! ಆದರೆ ಎಲ್ಲ ಬಣ್ಣಗಳನ್ನೂ ಮಸಿ ನುಂಗಿತು ಎಂಬುವಂತೆ ಅವಳು ಅಡಿಗೆಯವಳ ಮಗಳಾಗಿದ್ದಾಳೆ..."

"ಅವಳು ಅಡಿಗೆಯವಳ ಮಗಳಾಗಿ ಜನ್ಮ ತಾಳಬೇಕೆಂದು ಹರಕೆ ಹೊತ್ತಿದ್ದಳೇನು? ಅಲ್ಲದೆ ಅವಳ ತಾಯಿಗೆ ಅಡಿಗೆಯನ್ನು ಮಾಡಿ ಹೊಟ್ಟೆ ಹೊರಕೊಳ್ಳುವದರಲ್ಲಿ ಸೌಖ್ಯವಿದೆಯೆಂದು ತಿಳಿದೆಯೇನು? ಇದಕ್ಕೆಲ್ಲ ಪರಿಸ್ಥಿತಿ ಕಾರಣ, ತಿಪ್ಪೆ ಉಪ್ಪರಿಗೆಯಾಗುವುದನ್ನೂ, ಉಪ್ಪರಿಗೆ ತಿಪ್ಪೆಯಾಗಿರುವುದನ್ನೂ ನಾವು ಪ್ರತ್ಯಕ್ಷವಾಗಿ ನೋಡಿದ್ದೇವೆ. ನಮ್ಮ ಅಜ್ಜನ ತಂದೆ ಭಿಕ್ಷಾನ್ನ ಎತ್ತುತ್ತಿದ್ದರು ಎಂತಲೆ ನಮಗೆ ಭಿಕ್ಷಪತಿ ಎಂಬ ಅಡ್ಡ ಹೆಸರು ಬಂದಿದೆ. ನಿನ್ನ ಅಜ್ಜನ ತಂದೆ ಎಲೆ ಹಚ್ಚಿ ಜೀವನ ಸಾಗಿಸುತ್ತಿದ್ದರು. ಇದಕ್ಕೆಲ್ಲ ದೈವೀಕೃಪೆ, ಪರಿಶ್ರಮ ಕಾರಣವಾಗಿರುತ್ತದೆ. ಅಮ್ಮ! ಅಂತಸ್ತು ಹೊರಗಿನಿಂದ ಬರುವುದಿಲ್ಲ; ಒಳಗಿನಿಂದ ಬರುತ್ತದೆ".

ಇಂಥ ಹಾಗೂ ಈ ರೀತಿಗೆ ಸಂಬಂಧಿಸಿದ ಮಾತುಗಳನ್ನು ನಾನು ಆಗಾಗ ಹೇಳತೊಡಗಿದೆ. ಇದರಿಂದ ಅಮ್ಮನ ತಲೆಯಲ್ಲಿ ತುಸು ಬೆಳಕು ಬಿದ್ದರೂ ಕತ್ತಲೆ ಮೊತ್ತವು ಬಹಳ ದೊಡ್ಡದಿತ್ತು. ಅದು ಕರಗುವುದು ದುಸ್ತರವಾಗಿತ್ತು.

ಈ ಮಧ್ಯೆ ನನ್ನ ತಾಯಿ ಆಡಿದ ಮಾತುಗಳಲ್ಲಿ ಕೆಲವನ್ನು ಅನ್ನಿಯ ತಾಯಿ ಅವಳ ಮುಂದೆ ಹೇಳಿದ್ದರಿಂದ ಅವಳು ಮನೆಗೆ ಬರುವುದನ್ನು ಪೂರ ನಿಲ್ಲಿಸಿದಳು. ಸೌಜನ್ಯವತಿಯಾದ ಅವಳಿಗೆ ತಾನು ಬಂದು ವಾತಾವರಣವನ್ನು ಕಲಕಬಾರದೆಂದು ಅನ್ನಿಸಿರಬೇಕು. ಆದರೆ ಅವಳಲ್ಲಿ ಯಾವಾಗಲೂ ನನ್ನ ಬಗ್ಗೆ ಕೃತಜ್ಞತಾಭಾವ ತುಂಬಿ ತುಳುಕುತ್ತಿತ್ತು. ಅವಳ ಈ ಸಂಪನ್ನತೆಗೆ ನಾನೇ ಕಾರಣವೆಂದು ಅವಳು ನಂಬಿದ್ದೇ ಈ ಭಾವಕ್ಕೆ ಕಾರಣವಾಗಿತ್ತು.

ಅವಳ ಬಗ್ಗೆ ನನ್ನಲ್ಲಿಯೂ ಹೆಮ್ಮೆ ಮೂಡಿತು. ನನ್ನ ಒಂದು ಮಾತನ್ನೇ ಹಚ್ಚಿಕೊಂಡು ಸಾತ್ವಿಕ ಹಟದಿಂದ ಸಾಧನೆ ಮಾಡಿ ಸಿದ್ಧಿಯನ್ನು ಪಡೆದುಕೊಂಡ ಈ ಹೆಣ್ಣು ಮಹಾ ಸಂಪನ್ನೆಯಾದವಳೆಂದು ನನ್ನ ಅಂತರಂಗ ಹೇಳತೊಡಗಿತ್ತು.

ಅನ್ನಿಯ ಬಗ್ಗೆ ಅವ್ವನಿಗೆ ಯಾವ ದ್ವೇಷವೂ ಇರಲಿಲ್ಲ. ಆದರೆ ಅವಳ ಅಂತಸ್ತಿನ ಬಗ್ಗೆ ಅವಳ ತಕರಾರು ಯಾವಾಗಲೂ ಇರುತ್ತಿತ್ತು. ಈ ಅನ್ನಿ ಶ್ರೀಮಂತನ ಮನೆಯಲ್ಲಿ ಜನ್ಮ ತಾಳಿದ್ದರೆ ... ಎಂದೂ ಯೋಚಿಸುತ್ತಿದ್ದಳು.

• • •

ತಂದೆಗೆ ತೀವ್ರ ಕಾಯಿಲೆಯಾಯಿತು. ಅಗ ನನಗೆ ಪರೀಕ್ಷಾ ದಿನಗಳು. ನಾನು ಓಡಾಡಲು ಸಾಧ್ಯವಿರಲಿಲ್ಲ. ಆದರೆ ಕರ್ತವ್ಯವನ್ನು ಬಿಡುವಂತಿರಲಿಲ್ಲ. ನಾನು ಮ್ಲಾನವದನನಾಗಿ ಗಾಣದ ಎತ್ತಿನಂತೆ ಸುತ್ತುತ್ತಿದ್ದೆ. ಔಷಧ ಉಪಚಾರಗಳಲ್ಲಿ ನನಗೆ ಸೇವಕರ ಮೇಲೆ ನಂಬಿಕೆ ಇರಲಿಲ್ಲ. ಅಶಕ್ತ ತಾಯಿ ಒಬ್ಬಳೇ ಸತತವಾಗಿ ತಂದೆಯ ಆರೈಕೆ ಮಾಡುವಂತಿಲ್ಲ. ಹೀಗಾಗಿ ಎಲ್ಲವನ್ನೂ ನಾನೇ ಮಾಡುವುದು ಅನಿವಾರ್ಯವಾಗಿತ್ತು.

ಆ ಹೊತ್ತು ಅಡಿಗೆಯ ಮನೆಯಲ್ಲಿ ಅಕಸ್ಮಾತ್ ಅನ್ನಿ ಬಂದು ಮಾತಾಡುತ್ತಿರುವಂತೆ ಬೋಧೆಯಾಯಿತು. ನಾನು ದೇಹವನ್ನೇ ಕಿವಿ ಮಾಡಿ ಕೇಳತೊಡಗಿದೆ.

"ನಿಮ್ಮ ಮಗನ ಪರೀಕ್ಷೆಯ ದಿನಗಳು ತೀರಾ ಹತ್ತಿರ ಇರುತ್ತವೆ ಅಮ್ಮ! ನೀವು ನನಗೆ ವಹಿಸಿಕೊಟ್ಟರೆ ನಾನು ದಕ್ಷಳಾಗಿ ತಂದೆಯವರ ಸೇವೆ ಮಾಡುತ್ತೇನೆ. ಡಾಕ್ಟರರ ಕಡೆಗೆ ಹೋಗುತ್ತೇನೆ. ಔಷಧಿ ತರುತ್ತೇನೆ. ಹಣ್ಣು ಹಂಪಲ ರಸ ಮಾಡಿ ಕುಡಿಸುತ್ತೇನೆ. ಅವರ ಆರೋಗ್ಯ ಸುಧಾರಿಸಲು ಏನು ಬೇಕೋ ಅದನ್ನು ಮಾಡುತ್ತೇನೆ. ಸುಮ್ಮನೆ ನಿಮ್ಮ ಮಗನ ವರುಷ ಹಾಳಾಗಬಾರದು".

ತಾಯಿ ತುಸು ಹೊತ್ತು ಗಂಭೀರವಾಗಿ ಹೇಳಿದಳು.

"ನನಗೂ ಅನ್ನಿಸುತ್ತದೆ ಏನು ಮಾಡಲಿ ಹೇಳು".

"ನಾನು ಮಾಡುವುದು ನಿಮಗೆ ಒಪ್ಪಿಗೆಯಿಲ್ಲವೇನು? ಬೇಕಾದರೆ ನಾನು ತಂದೆಯವರನ್ನೆ ಕೇಳುತ್ತೇನೆ".

"ಹಾಗೆ ಕೇಳಿದರೆ ಈ ಸೂಚನೆಯನ್ನು ಅವರೂ ಮಾಡಿದ್ದಾರೆ ಅನ್ನಿ! ಅಡಿಗೆ ಅಚ್ಚಮ್ಮನ ಮಗಳು ಹುಷಾರ ಇದ್ದಾಳೆ. ಹೇಗೂ ಮಗ ಮನೆಯಲ್ಲಿರುವಾಗ ನೋಡಿಕೊಳ್ಳುತ್ತಾನೆ. ಕಲಿತ ಹುಡುಗಿ ಆಮೇಲೆ ಎಲ್ಲವನ್ನೂ ನೋಡಿಕೊಳ್ಳಲಿ... ಬೇಕಾದರೆ... ಏನಾದರೂ ಆಮೇಲೆ ಕೊಡಲು ಬಂದೀತು" ಎಂದ ಮಾತನ್ನು ಕೇಳಿ ನನ್ನ ಹೃದಯದಲ್ಲಿ ಅಸಹ್ಯ ವೇದನೆಯಾಯಿತು. 'ಸೇವೆಗೂ ಕೂಲಿ ಕೊಡುವ ಶ್ರೀಮಂತಿಕೆ...'

ನಾನು ಒಳಗೆ ಬಂದು ಹೇಳಿದೆ.

"ಅನ್ನಿ ಬರುವುದು ಬೇಡ ಅಮ್ಮ! ನಾಡದ್ದು ಅವಳ ಪರೀಕ್ಷೆಯ ದಿನಾಂಕವಿದೆ".

"ಹೌದೇ?"

"ಇರಬಹುದು. ನನ್ನ ವರುಷ ಹೋದರೆ ಏನೂ ಹಾನಿಯಾಗುವುದಿಲ್ಲ. ಇವಳ ವರುಷ ಹೋದರೆ.."

ಅಮ್ಮ ಉಗುಳು ನುಂಗಿದುದನ್ನು ನಾನು ನೋಡಿದೆ.

ಅನ್ನಿ ಪಟ್ಟು ಹಿಡಿದಳು. ತಾಯಿ ಒಪ್ಪಿದಳು. ತಂದೆಗೆ ಹರುಷವಾಯಿತು.

ಅನ್ನಿಯ ಸೇವೆ ಅದ್ಭುತವಾಗಿ ಸಾಗಿತು. ಈ ಕರ್ತೃತ್ವ ಶಕ್ತಿಯನ್ನು ಕಂಡು ತಾಯಿ ಬೆರಗಾದಳು.

ಅವಳ ಕಣ್ಣ ಮುಂದೆ ಈಗ ನಿಂತವಳು ಅನ್ನಪೂರ್ಣೆಯಾದ ಅನ್ನಿಯಾಗಿದ್ದಳಲ್ಲದೆ, ಅಡಿಗೆಯ ಅಚ್ಚವ್ವನ ಮಗಳು ಅನ್ನಿಯಾಗಿರಲಿಲ್ಲ. ಅವಳ ಚಾಕಚಕ್ಯತೆ, ಸುಂದರ ಮನೋಭಾವ, ನಯ, ನಡತೆ, ಸೌಜನ್ಯಗಳು ನನ್ನ ತಂದೆ ತಾಯಿಗಳ ಮನಸ್ಸನ್ನು ಸೂರೆಗೊಂಡವು.

ನನ್ನ ಪರೀಕ್ಷೆ ಮುಗಿದ ಕೂಡಲೆ ಅನ್ನಿ ತನ್ನ ಮನೆಗೆ ಹೋದಳು.

"ಅವಳಿಗೊಂದು ಜರದ ಶೀರೆ ಉಡಿಸಿ ಕಳಿಸಬೇಕಾಗಿತ್ತು. ಹಾಗೇ ಕಳಿಸಿದೆಯೇನು?" ತಂದೆಯ ಮಾತು.

"ಅವಳು ನನ್ನ ಕುಂಕುಮವನ್ನು ಉಳಿಸಿದ್ದಾಳೆ, ಜರದ ಉಡುಗೊರೆಯೇನು ಮಹಾ!"

ತಾಯಿ ಗದ್ಗದಿತಳಾಗಿ ನುಡಿದಳು.

"ಹಾಗಾದರೆ ಏನು ಕೊಡುತ್ತೀ?"

"ಅದನ್ನೇ ಯೋಚಿಸತೊಡಗಿದ್ದೇನೆ" ಎಂದ ತಾಯಿ ನನ್ನ ಕಡೆಗೆ ನೋಡಿ ನಕ್ಕಳು.

• • •

ಅನ್ನಿ ಹುಡುಗಿಯಾಗಿದ್ದಾಗಲೂ ನನ್ನೊಡನೆ ಹೆಚ್ಚು ಮಾತನಾಡುತ್ತಿರಲಿಲ್ಲ. ಇದಕ್ಕೆ ನಾನು ಶ್ರೀಮಂತನ ಮಗನೆಂಬ ಭೀತಿಯೇ ಕಾರಣವಾಗಿರಬೇಕು. ಮುಂದೆ ಧೀಮಂತೆಯಾಗಿ ಸುಂದರಿಯಾಗಿ ಬೆಳೆದು ನಿಂತಾಗಲೂ ನನ್ನೊಡನೆ ಹೆಚ್ಚು ಮಾತಾಡುತ್ತಿರಲಿಲ್ಲ. ಇದಕ್ಕೆ ಅವಳ ತಾರುಣ್ಯೋದಯವೇ ಕಾರಣವಾಗಿರಬೇಕು.

ಈಗ ಮಾತ್ರ ಅವಳು ನನ್ನೊಡನೆ ಬೇಕಾದಷ್ಟು ಮಾತನಾಡುತ್ತಾಳೆ. ಹೃದಯದ ತುಂಬಿದ ಜೇನನ್ನು ಮಾತಿನ ಸವಿ ರಸದಲ್ಲಿ ಬೆರಸಿ ಬೇಕಾದಷ್ಟು ಹರಟುತ್ತಾಳೆ.

ಕಾರಣ ಊಹಿಸುವುದು ಸುಲಭ...

ಕಲಿತ ಹೆಂಡತಿ ಕರ್ತೃತ್ವಶಾಲಿಯಾದ ಮಾತಿನ ಮಲ್ಲಿಯಾಗದೆ ಏನಾಗಬೇಕು?

ನನ್ನ ಅನ್ನಿ ಮಾತಿನ ಮಲ್ಲಿಯೂ ಹೌದು; ಅನ್ನಪೂರ್ಣೆಯೂ ಹೌದು:

ಅನ್ನಿ ಅನ್ನಪೂರ್ಣೆಯಾದಳು.



**ಕೃಷ್ಣಮೂರ್ತಿ ಪುರಾಣಿಕ :** ಬಾಗಲಕೋಟೆ ಜಿಲ್ಲೆಯ ಬೀಳಗಿಯವರಾದ ಕೃಷ್ಣಮೂರ್ತಿ ಪುರಾಣಿಕ (1911 - 1985) ತಮ್ಮ ವಿದ್ಯಾಭ್ಯಾಸವನ್ನು ಬಾಗಲಕೋಟೆ, ಧಾರವಾಡಗಳಲ್ಲಿ ಪಡೆದು, ಗೋಕಾಕದ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದರು. ಮುಖ್ಯವಾಗಿ ಕಾದಂಬರಿಕಾರರಾಗಿ ಗುರುತಿಸಿಕೊಂಡ ಪುರಾಣಿಕರು ಧರ್ಮದೇವತೆ, ಕುಲವಧು, ಭಾಗೀರಥಿ, ಮಣ್ಣಿನ ಮಗಳು, ಪಾವನ ಗಂಗಾ, ಸನಾದಿ ಅಪ್ಪಣ್ಣ, ಮುತ್ತೈದೆ, ದೇವರ ಕೂಸು, ಮೌನಗೌರಿ, ಮಂಗಳಾಕ್ಷತೆ, ಬೆವರಿನ ಬೆಲೆ, ವಸಂತಲಕ್ಷ್ಮೀ ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಕೆಲವು ಕಾದಂಬರಿಗಳು ಕನ್ನಡ ಚಲಚಿತ್ರಗಳಾಗಿಯೂ ಜನಪ್ರಿಯವಾಗಿವೆ. ರಾಮೂನ ಕಥೆಗಳು ಎಂಬ ಕಥಾಸಂಕಲನವನ್ನೂ ಬಾಳ ಕನಸು ಎಂಬ ಕವನ ಸಂಕಲನವನ್ನೂ ಇವರು ರಚಿಸಿದ್ದಾರೆ.

## ನವೀನ ಪದಗಳ ಅರ್ಥ

ಹಾಳತಾಗದ - ಅಳತೆ ಸರಿ ಹೊಂದದ. ಓರಣ – ಅಚ್ಚುಕಟ್ಟು. ತೇಪೆ - ಹರಿದ ಭಾಗಕ್ಕೆ ಕಲಾತ್ಮಕ ಹೊಲಿಗೆ ಹಾಕುವುದು. ಮಾಟ – ಚೆಲುವು. ತಿಂಗಳು - ಚಂದಿರ. ಲವಲವಿಕೆ - ಉತ್ಸಾಹ, ಉಲ್ಲಾಸ. ಸುಪ್ಪತ್ತಿಗೆ - ಮೆತ್ತಗಿನ ಹಾಸಿಗೆ, ಗಾದಿ. ತಾರತಮ್ಯ – ಮೇಲು ಕೀಳು ಭಾವನೆ. ಪಡಸಾಲೆ - ಮೊಗಸಾಲೆ, ಹಜಾರ. ಆಣೆಕಲ್ಲು ಆಟ - ಸಣ್ಣ ಕಲ್ಲುಗಳನ್ನು ಉಪಯೋಗಿಸಿ ಆಡುವ ಆಟ. ಚಿರೋಟಿ - ಒಂದು ಬಗೆಯ ಸಿಹಿತಿಂಡಿ. ಜಳಕ – ಸ್ನಾನ. ಪಕೋಡ – ಒಂದು ಬಗೆಯ ಎಣ್ಣೆ ತಿಂಡಿ. ಸ್ಕಾಲರ - ವಿದ್ವಾಂಸ. ಆನುವಂಶಿಕ - ವಂಶಪಾರಂಪರ್ಯ. ಕಸೂತಿ - ಬಟ್ಟೆಯ ಮೇಲಿನ ಹೊಲಿಗೆ ವಿನ್ಯಾಸ. ಹೊತ್ತಗೆ - ಪುಸ್ತಕ. ಬ್ಯಾರಿಸ್ಟರ್ - ವಕೀಲರು. ಜ್ವಾಕೆ - ಜಾಗ್ರತೆ. ಗುತ್ತಿಗೆ - ಒಂದು ನಿರ್ದಿಷ್ಟ ಅವಧಿಯ ಒಪ್ಪಂದ. ವೇದ್ಯ - ತಿಳಿದ. ಕವಡ ಕಂಟಕ - ವಂಚನೆ, ಕಪಟತನ. ತಿಪ್ಪೆ - ಕಸದ ರಾಶಿ. ಭಿಕ್ಷಾನ್ನ - ಭಿಕ್ಷೆಯಾಗಿ ಬೇಡಿ ಪಡೆದ ಅನ್ನ. ಸಾತ್ವಿಕ - ಉತ್ತಮವಾದ. ತಕರಾರು - ವಿವಾದ, ಆಕ್ಷೇಪಣೆ. ಮ್ಲಾನವದನ - ಕಾಂತಿಹೀನ ಮುಖ, ಬಾಡಿದ ಮುಖ. ಗಾಣ - ಆಲೆಮನೆ. ಕರ್ತೃತ್ವ ಶಕ್ತಿ - ಕ್ರಿಯಾಶಕ್ತಿ, ಕೆಲಸ ಮಾಡುವ ಸಾಮರ್ಥ್ಯ. ಚಾಕಚಕ್ಯತೆ - ಜಾಣ್ಮೆ, ಚತುರತೆ. ಜರದ ಶೀರೆ - ಬಂಗಾರದ ದಾರ (ಜರಿ) ಬಳಸಿ ನೇಯ್ದ ಸೀರೆ. ಗದ್ಗದಿತ - ಭಾವತೀರೇಕ, ಗಂಟಲು ಕಟ್ಟುವುದು. ಧೀಮಂತ - ಜ್ಞಾನವಂತ, ಬುದ್ಧಿವಂತ. ಮಾಸ್ತರತೆ - ಉಪಾಧ್ಯಾಯ, ಶಿಕ್ಷಕ. ಎಲೆಹಚ್ಚು - ವೀಳ್ಯದೆಲೆ ಕೃಷಿ ಮಾಡು. ಮೈಯನ್ನೇ ಕಿವಿಯಾಗಿಸು - ಸೂಕ್ಷ್ಮವಾಗಿ ಕೇಳಿಸಿಕೊಳ್ಳು.

## ಉತ್ತರಿಸಿರಿ

1. ನಿರೂಪಕನ ತಾಯಿಯ ತರತಮ ಭಾವ ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ?
2. ಅನ್ನಿಯನ್ನು ಶಾಲೆಗೆ ಕಳುಹಿಸುವುದರಲ್ಲಿ ಕಥೆಗಾರನ ಪಾತ್ರವೇನು?
3. ಅಚ್ಚಮ್ಮನೊಂದಿಗೆ ತನ್ನ ತಾಯಿ ಆಡುವ ಮಾತು ಕಥೆಗಾರನ ಅಸಮಾಧಾನಕ್ಕೆ ಹೇಗೆ ಕಾರಣವಾಯಿತು?
4. ನಿರೂಪಕರಿಗೆ ಅನ್ನಿ ಬಗ್ಗೆ ಹೆಮ್ಮೆ ಮೂಡಲು ಕಾರಣವೇನು?
5. ಕತೆಯಲ್ಲಿನ ಅನ್ನಿ ಹೇಗೆ ಅನ್ನಪೂರ್ಣೆಯಾದಳು ಎಂಬುದನ್ನು ವಿವರಿಸಿ ಬರೆಯಿರಿ.
6. 'ಅನ್ನಿ ಅನ್ನಪೂರ್ಣೆಯಾದಳು' ಕತೆಯಲ್ಲಿ ಬಡತನದ ಚಿತ್ರಣ ಹೇಗೆ ಮೂಡಿ ಬಂದಿದೆ?

## ಸಂದರ್ಭ ತಿಳಿಯುವುದು

**ಈ ಕೆಳಗಿನ ಮಾತುಗಳ ಸಂದರ್ಭವನ್ನು ವಿವರಿಸಿರಿ.**

"ಅರಳುವ ಹೂವಿನ ಬೇರನ್ನು ಕಿತ್ತು ಮಗಮಗಿಸುವ ಸುಗಂಧವನ್ನು ಹಾಳಮಾಡುವದು ಮಾನವೀಯತೆಗೊಂದು ಅವಲಕ್ಷಣ"

"ಮೀನಕ್ಕೆ ಈಜಲಿಕ್ಕೆ ಯಾರಾರ ಕಲಿಸತಾರೇನು?"

## ಸ್ವಾರಸ್ಯ ಬರಹ

**ಕೆಳಗಿನ ಮಾತಿನ ಸ್ವಾರಸ್ಯವನ್ನು ವಿವರಿಸಿರಿ.**

"ತಿಪ್ಪೆ ಉಪ್ಪರಿಗೆಯಾಗುವುದನ್ನೂ, ಉಪ್ಪರಿಗೆ ತಿಪ್ಪೆಯಾಗಿರುವುದನ್ನೂ ನಾವು ಪ್ರತ್ಯಕ್ಷವಾಗಿ ನೋಡಿದ್ದೇವೆ".

## ಶಿಷ್ಟಭಾಷೆಗೆ ಪರಿವರ್ತನೆ

**ಕೆಳಗಿನ ಮಾತನ್ನು ಶಿಷ್ಟಭಾಷೆಗೆ ಪರಿವರ್ತಿಸಿರಿ.**

"ಅದಕ್ಕ ಕಲಿಯೂ ಹುಚ್ಚೇ ಹಿಡಿದದ್ರೆವಾ! ನಿಮ್ಮ ಮಗಾ ಅವಳ ತಲೀಯಾಗ ಏನ ತುಂಬ್ಯಾನೋ ಏನು ಮಣ್ಣೂ ಬರೇ ಓದೂದೂ, ಬರೆಯೂದು, ಅದನ್ನ ಮಾಡೂದು, ಇದನ್ನ ಮಾಡೂದು ನಡೆಸಿ ಬಿಟ್ಟಾಳ".

## ಗಾದೆಮಾತಿನ ವಿಸ್ತರಣೆ

**ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.**

'ಎಲ್ಲ ಬಣ್ಣಗಳನ್ನೂ ಮಸಿ ನುಂಗಿತು'

## ಔಚಿತ್ಯ ಬರಹ

**ಕೆಳಗೆ ನೀಡಿದ ಮಾತಿನ ಔಚಿತ್ಯವನ್ನು ವಿವರಿಸಿರಿ.**

"ಅಡಿಗೇ ಆಕಿ ಮಗಳು ಅಡಿಗೇನೇ ಮಾಡಬೇಕೆಂಬುದೇನೂ ಶಾಸ್ತ್ರ ಇಲ್ಲ"

## ತದ್ಧಿತ ಪ್ರತ್ಯಯಗಳು

ಕೆಳಗಿನ ಪದಗಳನ್ನು ಗಮನಿಸಿರಿ.

ಗೆಳೆತನ, ತೋಟಗಾರ, ಬುದ್ಧಿವಂತ, ಸಿರಿತನ, ಬಡತನ, ಪುಣ್ಯವಂತ, ಸತ್ಯವಂತ – ಈ ಪದಗಳನ್ನು ಹೀಗೆ ಪ್ರತ್ಯೇಕಿಸಬಹುದು.

| ಅ | ಆ |
|---|---|
| ಗೆಳೆ | ತನ |
| ತೋಟ | ಗಾರ |
| ಬುದ್ಧಿ | ವಂತ |
| ಸಿರಿ | ತನ |
| ಬಡ | ತನ |
| ಪುಣ್ಯ | ವಂತ |
| ಸತ್ಯ | ವಂತ |

ಮೇಲಿನ ಪಟ್ಟಿಯಲ್ಲಿ 'ಅ' ವಿಭಾಗದ ಪದಗಳು ನಾಮಪದಗಳು. 'ಆ' ವಿಭಾಗದವು ಪ್ರತ್ಯಯಗಳು. ನಾಮಪದಗಳಿಗೆ ಸೇರುವ ಇಂತಹ ಪ್ರತ್ಯಯಗಳನ್ನು ತದ್ಧಿತ ಪ್ರತ್ಯಯಗಳು ಎನ್ನುವರು. ಇಂತಹ ಪದಗಳನ್ನು ಪಾಠಭಾಗಗಳಿಂದ ಆಯ್ದು ಬರೆಯಿರಿ.

## ಲೇಖನ ಚಿಹ್ನೆಗಳು

ಬರೆವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಮುಖ್ಯವಾದುದು. ಲೇಖನ ಚಿಹ್ನೆಗಳಿಲ್ಲದ ಬರೆವಣಿಗೆ ಸ್ಪಷ್ಟಾರ್ಥವನ್ನು ಕೊಡದೆ ತೊಡಕುಗಳಿಗೆ ಕಾರಣವಾಗುವುದುಂಟು. ಹಾಗಾಗಿ ಲೇಖನ ಚಿಹ್ನೆಗಳು ಅತ್ಯಂತ ಅಗತ್ಯ. ಇಲ್ಲಿ ಕೊಟ್ಟಿರುವ ವಿವರಗಳನ್ನು ಗಮನಿಸಿ.

**1. ಪೂರ್ಣ ವಿರಾಮ : (.)**

ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಬೇಕು.

**ಉದಾ :**

i) ವಿದ್ಯಾರ್ಥಿಗಳು ತರಗತಿಯಲ್ಲಿ ಕುಳಿತಿದ್ದರು.

ii) ಅರಳಿದ ಹೂಗಳು ಎಲ್ಲರ ಗಮನವನ್ನು ಸೆಳೆದವು.

**2. ಅರ್ಧ ವಿರಾಮ : (;)**

ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾ :**

i) ಎಳನೀರು ಧಾರಾಳವಿತ್ತು; ಹುಳಿ ಮಿಶ್ರಿತ ಸ್ವಾದದಿಂದ ಕೂಡಿತ್ತು.

ii) ತಾಯಿ ಅಡುಗೆ ನಿರತಳಾಗಿದ್ದಳು; ಆಕೆಯ ಗಮನ ತೊಟ್ಟಿಲಿನ ಕಡೆಗಿತ್ತು.

iii) ಅಣ್ಣಾ; ಇತ್ತ ಬಾ.

**3. ಅಲ್ಪವಿರಾಮ : (,)**

ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪವಿರಾಮ ಬಳಸಬೇಕು.

**ಉದಾ :**

i) ಕಾಡಿನಲ್ಲಿ ಹುಲಿ, ಚಿರತೆ, ಆನೆ, ಜಿಂಕೆ, ಸಿಂಹ ಮೊದಲಾದ ಮೃಗಗಳು ವಾಸಿಸುತ್ತಿದ್ದವು.

ii) ಆಯುರ್ವೇದ ವೈದ್ಯಪದ್ಧತಿಯಲ್ಲಿ ಸಸ್ಯಗಳ ಎಲೆ, ಹೂವು, ಕಾಂಡ, ಬೇರು, ತೊಗಟೆ, ಹಣ್ಣು - ಎಲ್ಲವೂ ಔಷಧಿಗೆ ಉಪಯೋಗವಾಗುತ್ತವೆ.

**4. ಪ್ರಶ್ನಾರ್ಥಕ ಚಿಹ್ನೆ : (?)**

ಪ್ರಶ್ನೆರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುವುದು.

**ಉದಾ :**

i) ಕರ್ಣನ ನಿಜವಾದ ಹೆಸರೇನು?

ii) ಕೂಡಲಸಂಗಮದೇವ ಎಂಬುದು ಯಾರ ಅಂಕಿತವಾಗಿದೆ?

iii) ಕುವೆಂಪು ಅವರ ಮೇರುಕೃತಿ ಯಾವುದು?

**5. ಉದ್ಧರಣ ಚಿಹ್ನೆ : (" ")**

ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾ :**

i) "ಅನ್ನಿ ಬರುವುದು ಬೇಡಮ್ಮ. ನಾಡಿದ್ದು ಅವಳಿಗೆ ಪರೀಕ್ಷೆಯಿದೆ" ಎಂದು ಬಾಲಕನು ಹೇಳಿದನು.

ii) "ನನಗೆ ನಿಮ್ಮ ರಕ್ತವನ್ನು ನೀಡಿರಿ. ನಿಮಗೆ ಸ್ವಾತಂತ್ರ್ಯವನ್ನು ನಾನು ತಂದುಕೊಡುತ್ತೇನೆ" ಎಂದು ತನ್ನ ಅನುಯಾಯಿಗಳನ್ನು ಉದ್ದೇಶಿಸಿ ಸುಭಾಷ್ ಚಂದ್ರ ಬೋಸರು ಕರೆ ನೀಡಿದರು.

**6. ಭಾವಸೂಚಕ ಚಿಹ್ನೆ : (!)**

ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾ :**

i) ಅಬ್ಬಬ್ಬಾ! ಎಷ್ಟೊಂದು ನೀರು!

ii) ಅಯ್ಯೋ! ನೀನಿನ್ನೂ ನಿಂತೇ ಇರುವೆಯಾ!

**7. ವಾಕ್ಯವೇಷ್ಟನ ಚಿಹ್ನೆ : (' ')**

ಪಾರಿಭಾಷಿಕ ಪದಗಳನ್ನು ಬಳಸುವಾಗ, ಕೃತಿಗಳನ್ನು ಸೂಚಿಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾ :**

i) ರಾಷ್ಟ್ರಕವಿ ಗೋವಿಂದ ಪೈ ಅವರು 'ಹೆಬ್ಬೆರಳು', 'ಚಿತ್ರಭಾನು', 'ಗೊಲ್ಗೊಥಾ', 'ವೈಶಾಖ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ii) ಎರಡನೇ ಲೋಕ ಮಹಾಯುದ್ಧದಲ್ಲಿ 'ಹಿರೋಶಿಮಾ' ಮತ್ತು 'ನಾಗಸಾಕಿ'ಯಲ್ಲಿ ನಡೆದ 'ಅಣುಬಾಂಬ್' ದಾಳಿಯು ಅನೇಕರ ಜೀವನವನ್ನು ಕಸಿದುಕೊಂಡಿತು.

**8. ವಿವರಣಾತ್ಮಕ ಚಿಹ್ನೆ : (:)**

ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾ :**

i) ನವರಸಗಳು : ಶೃಂಗಾರ, ವೀರ, ಕರುಣ, ಭಯಾನಕ, ಅದ್ಭುತ, ಹಾಸ್ಯ, ಶಾಂತ, ರೌದ್ರ, ಭೀಭತ್ಸ.

ii) ಪಂಚಲೋಹಗಳು : ಸುವರ್ಣ, ರಜತ, ತಾಮ್ರ, ಸತು, ಕಬ್ಬಿಣ.

**9. ಆವರಣ ಚಿಹ್ನೆ : ( )**

ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾ :**

i) ವಾತಾವರಣದ ಅಂಗಾರಾಮ್ಲವನ್ನು (Carbon Dioxide) ಆಮ್ಲಜನಕವಾಗಿ (Oxygen) ಪರಿವರ್ತಿಸುವ ಶಕ್ತಿ ಸಸ್ಯಗಳಿಗಿದೆ.

**ಕೆಳಗೆ ನೀಡಲಾದ ವಾಕ್ಯಕ್ಕೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಅಳವಡಿಸಿ ಬರೆಯಿರಿ.**

ಮನೆಯವರ ಹೆಸರನ್ನು ಹೇಳುತ್ತಾ ಅಣ್ಣಾ ನಂಗೂ ಒಮ್ಮೆ ಕಲ್ಲು ಕೊಡಿ ನಾನು ಒಂದು ಕೆತ್ತೆ ತೆಗೆಯುತ್ತೇನೆ ಎಂದು ಅತಿ ವಿನಯದಿಂದ ಹೇಳಿದೆನು ಅದಕ್ಕವರು ಅಕ್ಕಾ ನೀವು ಅಲ್ಲೇ ನಿಲ್ಲಿ ಇಲ್ಲಿ ತುಂಬಾ ಕೆಸರಿದೆ ನಾನೇ ಒಂದು ಕೆತ್ತೆ (ತುಂಡು) ತಂದು ಕೊಡುತ್ತೇನೆ ಎಂದು ದಿವ್ಯ ಔಷಧವನ್ನು ನನ್ನ ಕೈಗೆ ಹಸ್ತಾಂತರಿಸಿದರು

# ‘ರುದ್ರ’ ಹೆಲಿಕಾಪ್ಟರ್ ಹಿಂದಿನ ಸ್ತ್ರೀ ಶಕ್ತಿ

ನೇಮಿಚಂದ್ರ





೨೦೧೩ರಂದು ಬೆಂಗಳೂರಿನಲ್ಲಿ ಆಯೋಜಿಸಲಾದ ‘ವಾಯುಪಡೆ ಪ್ರದರ್ಶನ’ದಲ್ಲಿ ನಮ್ಮ ‘ರುದ್ರ’ ಹೆಲಿಕಾಪ್ಟರ್ ಭೂಸೇನೆಗೆ ಸೇರ್ಪಡೆಯಾದದ್ದು ಭಾರತದ ವೈಮಾನಿಕ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅತ್ಯಾಧುನಿಕ ಹಗುರ ಹೆಲಿಕಾಪ್ಟರ್ ‘ಧ್ರುವ’, ಭಾರತದ ಮೊಟ್ಟ ಮೊದಲ ಸ್ವದೇಶಿ ವಿನ್ಯಾಸದ ಹೆಲಿಕಾಪ್ಟರ್. ಇದು ಜಗತ್ತಿನ ವಾಯುಯಾನದ ನಕಾಶೆಯಲ್ಲಿ ಭಾರತಕ್ಕೆ ಹೆಮ್ಮೆಯ ಸ್ಥಾನವನ್ನು ಗಳಿಸಿಕೊಟ್ಟಿದೆ. ಅದಾಗಲೇ ೧೩೦ಕ್ಕೂ ಹೆಚ್ಚು ಹೆಲಿಕಾಪ್ಟರ್‌ಗಳು ಭೂಸೇನೆ, ವಾಯುಸೇನೆ, ನೌಕಾಪಡೆ ಮತ್ತು ತಟರಕ್ಷಕ ದಳಗಳಲ್ಲಿ ಕಾರ್ಯನಿರತವಾಗಿವೆ. ‘ಧ್ರುವ’ ಹೊರದೇಶಗಳಿಗೂ ರಫ್ತಾಗಿದೆ.

ಇದೇ ಧ್ರುವ ಹೆಲಿಕಾಪ್ಟರ್ ಶತ್ರುಪಡೆಯನ್ನು ಪತ್ತೆ ಹಚ್ಚುವ ಸೂಕ್ಷ್ಮ ಸಂವೇದಕಗಳನ್ನು ಅಳವಡಿಸಿಕೊಂಡು, ತಿರುಗುವ ಗನ್, ರಾಕೆಟ್, ಕ್ಷಿಪಣಿಗಳನ್ನು ಹೊತ್ತು ಯುದ್ಧರಂಗಕ್ಕೆ ಸಿದ್ಧವಾಗಿ, ಹೊಸ ರೂಪದಲ್ಲಿ ಭೂಸೇನೆಗೆ ಸೇರ್ಪಡೆಯಾದಾಗ ನಮ್ಮ ಹೆಲಿಕಾಪ್ಟರಿಗೆ ಸೇನೆ ಕೊಟ್ಟ ಹೆಸರು ‘ರುದ್ರ’. ಇದು ಶತ್ರುಗಳನ್ನು ಧ್ವಂಸ ಮಾಡಿ ದೇಶದ ರಕ್ಷಣೆಗೆ ತೊಡಗಲಿರುವ ಹೆಲಿಕಾಪ್ಟರ್.

ಸಾಮಾನ್ಯವಾಗಿ ಹೆಲಿಕಾಪ್ಟರ್‌ಗಳನ್ನು ನಿರ್ದಿಷ್ಟ ಕಾರ್ಯಕ್ಕೆ ವಿನ್ಯಾಸ ಮಾಡುವುದುಂಟು. ಭೂಸೇನೆಗೆ ಕಾರ್ಗಿಲ್‌ನಂಥ ಅತಿ ಎತ್ತರದ ಪ್ರದೇಶದಲ್ಲಿ, ಕೊರೆಯುವ ಹಿಮದಲ್ಲಿ ಹಾರುವ ಹೆಲಿಕಾಪ್ಟರಿನ ಅಗತ್ಯವಿದ್ದರೆ, ನೌಕಾಪಡೆಗೆ ಸಮುದ್ರಮಟ್ಟದಲ್ಲಿ ಕಡಲಿನ ಉಪ್ಪು ಮಿಶ್ರಿತ ಹವೆಯಲ್ಲೂ ಸಮರ್ಥವಾಗಿ ಕಾರ್ಯನಿರ್ವಹಿಸುವ ಹೆಲಿಕಾಪ್ಟರ್ ಬೇಕಾಗುತ್ತದೆ. ಸಾಧಾರಣವಾಗಿ ಭೂಸೇನೆಗೆಂದೇ ಯೋಜಿಸಿದ ಹೆಲಿಕಾಪ್ಟರ್‌ಗಳು, ನಾಗರಿಕ ಸೇವೆಯ ಹೆಲಿಕಾಪ್ಟರ್‌ಗಳು ಎಂದು ನಿರ್ದಿಷ್ಟ ಕೆಲಸಕ್ಕಾಗಿಯೇ ತಯಾರಿಸಿದ ಹೆಲಿಕಾಪ್ಟರ್‌ಗಳಿವೆ. ‘ಧ್ರುವ’ ಹೆಲಿಕಾಪ್ಟರ್‌ನ ವಿಶೇಷವೆಂದರೆ, ಇದು ಬಹು ಪಾತ್ರಧಾರಿ, ಮಲ್ಟಿರೋಲ್, ಮಲ್ಟಿಮಿಶನ್ ಹೆಲಿಕಾಪ್ಟರ್ ಆಗಿದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡ ‘ಧ್ರುವ’ ಜಗತ್ತಿನ

ಹೆಲಿಕಾಪ್ಟರ್‌ಗಳ ಸಾಲಿನಲ್ಲಿ ಮುಂಚೂಣಿಯಲ್ಲಿ ನಿಲ್ಲಬಲ್ಲದು. ಮೂಲತಃ ಯುದ್ಧವಿಮಾನವಾಗಿ ವಿನ್ಯಾಸಗೊಂಡ 'ಧ್ರುವ' 'ಸಿವಿಲ್ ಸರ್ಟಿಫಿಕೇಟ್' ಪಡೆದಿದ್ದು, ಯುದ್ಧ ಮತ್ತು ಶಾಂತಿಯ ಸಮಯದಲ್ಲೂ ನೆರವಿಗೆ ಧಾವಿಸಬಲ್ಲದು.

೧೯೯೮ ಜನವರಿ ತಿಂಗಳಲ್ಲಿ, ಹಿಮವತ್ಪರ್ವತಗಳ ನಡುವಿನ ಲೇನಲ್ಲಿ, ೧೦,೦೦೦ ಅಡಿಗಳಿಗೂ ಮೀರಿದ ಎತ್ತರದಲ್ಲಿ ಕೊರೆಯುವ ತೀವ್ರ ಚಳಿಯಲ್ಲಿ 'ಧ್ರುವ' ನಿರಾತಂಕವಾಗಿ ಹಾರಿತು. ಜಗತ್ತಿನ ಅತಿ ಎತ್ತರದ ರಣಭೂಮಿಯಲ್ಲಿ ಹಾರಾಡಿ, ಹಿಮದಿಂದ ಮುಚ್ಚಿದ ಕಿರಿದಾದ ಹೆಲಿಪ್ಯಾಡಿನ ಮೇಲೆ ಇಳಿಯಿತು. ಇದೇ ಹೆಲಿಕಾಪ್ಟರ್ ಬಿರುಬೇಸಿಗೆಯಲ್ಲಿ ರಾಜಸ್ಥಾನದ ಕುದಿಯುವ ಕೊಪ್ಪರಿಗೆಯಾದ ಮರುಭೂಮಿಯಲ್ಲಿ ಸಮರ್ಥವಾಗಿ ಹಾರಿ ಬಂದಿತು. ಚೆನ್ನೈ, ಕೊಚ್ಚಿನ್, ಗೋವಾ ಕಡಲ ತೀರಗಳ ಉಪ್ಪುಮಿಶ್ರಿತ ವಾತಾವರಣದಲ್ಲಿ ಹಾರಾಡಿತು. ಗೋವಾದಲ್ಲಿ ಯುದ್ಧದ ಹಡಗುಗಳ ತೆರೆದ ಮಾಡಿನ ಮೇಲೆ ಇಳಿಯಿತು. ಹಗಲಿರುಳೆನ್ನದೆ ಹಾರಬಲ್ಲ, ಎಂಥ ಪರಿಸರದಲ್ಲೂ, ಹದಗೆಟ್ಟ ಹವಾಮಾನದಲ್ಲೂ ಸಮರ್ಥವಾಗಿ ಕಾರ್ಯನಿರ್ವಹಿಸಬಲ್ಲ ತಾಂತ್ರಿಕ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವಿದೆಯೆಂದು ತೋರಿಸಿಕೊಟ್ಟಿತು.

'ಧ್ರುವ' ಈಗಾಗಲೇ ಮಾರ್ಕ್ ೧, ಮಾರ್ಕ್ ೨ ಮತ್ತು ಸ್ಕಿಡ್ ಮಾರ್ಕ್ ೩ ರೂಪದಲ್ಲಿ ಸೇನೆಗೆ ಸೇರ್ಪಡೆಯಾಗಿತ್ತು. ಅಸ್ತ್ರ ಶಸ್ತ್ರಗಳನ್ನು ಅಳವಡಿಸಿಕೊಂಡು ಯುದ್ಧರಂಗದ ಪಾತ್ರಕ್ಕೆ ಸಿದ್ಧವಾದ ಇದೇ ಹೆಲಿಕಾಪ್ಟರನ್ನು ಮಾರ್ಕ್ ೪ ಎಂದು ಗುರುತಿಸಲಾಗಿದೆ. ಭಾರತದಲ್ಲಿ ಮೊಟ್ಟ ಮೊದಲಿಗೆ ದೇಶೀಯವಾಗಿ ಅಸ್ತ್ರ ಶಸ್ತ್ರದ ಇಂಟಿಗ್ರೇಶನ್ ನಡೆಸಿ 'ವೆಪನೈಸ್' ಆದ 'ಧ್ರುವ', ಇದೀಗ 'ಇನಿಷಿಯಲ್ ಆಪರೇಷನ್ ಕ್ಲಿಯರೆನ್ಸ್' ಪಡೆದು 'ರುದ್ರ' ರೂಪದಲ್ಲಿ ಭೂಸೇನೆಗೆ ಸೇರ್ಪಡೆಯಾಯಿತು.

ಈ ಹೆಲಿಕಾಪ್ಟರಿನೊಡನೆ ನನಗೆ ದಶಕಗಳ ಸಂಬಂಧವಿದ್ದು, ಇಂತಹ ದೇಶೀಯ ವಿನ್ಯಾಸದ 'ರುದ್ರ' ಹೆಲಿಕಾಪ್ಟರಿನ ಯೋಜನೆಯಲ್ಲಿ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿರುವುದು ಸಂತಸದ ಸಂಗತಿ. ಅತ್ಯಂತ ಸೂಕ್ಷ್ಮ ಸಂವೇದಕಗಳು, ಅತ್ಯಾಧುನಿಕ ಅಸ್ತ್ರ ಶಸ್ತ್ರಗಳು, 'ಎಲೆಕ್ಟ್ರಾನಿಕ್ ವಾರ್‌ಫೇರ್' ಮತ್ತು 'ಕೌಂಟರ್ ಮೆಷರ್'ಗಳನ್ನು ಒಳಗೊಂಡ 'ರುದ್ರ' ಹೆಲಿಕಾಪ್ಟರಿನ 'ವೆಪನೈಸೇಶನ್' ಯೋಜನೆಯಲ್ಲಿ ಮಹಿಳೆಯರ ಪಾತ್ರವನ್ನು ನಮ್ಮ ಕಾರ್ಖಾನೆಯ ವ್ಯವಸ್ಥಾಪಕ ಮಂಡಳಿ ಗುರುತಿಸಿದಾಗ, ನಮ್ಮ ಪುರುಷ ಸಹೋದ್ಯೋಗಿಗಳು ಹೃತ್ಪೂರ್ವಕವಾಗಿ ನಮ್ಮೆಲ್ಲರ ಕೈಕುಲುಕಿದಾಗ ಅತ್ಯಂತ ಖುಷಿಯಾಗಿತ್ತು.

೧೯೭೫ರಲ್ಲಿ ಮೊಟ್ಟ ಮೊದಲ ಮಹಿಳಾ 'ಡಿಸೈನ್ ಟ್ರೈನೀ' ಆಗಿ ವಿಮಾನ ಕಾರ್ಖಾನೆಯನ್ನು ಸೇರಿದ ಶ್ರೀಮತಿ ಕೆ. ಎನ್. ಮಾಲತಿಯವರು ನಮ್ಮ ವಿಭಾಗದಲ್ಲಿದ್ದರು. 'ಹಿಂದೂಸ್ಥಾನ್ ಏರೋನಾಟಿಕಲ್ ಲಿಮಿಟೆಡ್'ನ ಮೊತ್ತಮೊದಲ ಮಹಿಳಾ 'ಅಡಿಶನಲ್ ಜನರಲ್ ಮ್ಯಾನೇಜರ್' ಆದ ಕೀರ್ತಿ ಅವರದ್ದು. ಅವರ ತಾಂತ್ರಿಕ ನಿಪುಣತೆ, ಕಾರ್ಯ ನಿರ್ವಹಣೆಯ ಕ್ಷಮತೆ ನಮಗೆ ಮಾದರಿಯಾಗಿದ್ದು ನಮ್ಮಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿತ್ತು. ಶ್ರೀಮತಿ ತೇನ್‌ಮೊಳಿಯವರು ನಮ್ಮ ವಿಭಾಗದ ಎರಡನೇ ಮಹಿಳಾ ಅಡಿಶನ್ ಜನರಲ್ ಮ್ಯಾನೇಜರ್ ಆದರು. ಅದರ ಬಳಿಕ ನಾನು, ರಮಾ, ಶ್ರೀಕುಮಾರಿ 'ಅಡಿಶನಲ್ ಜನರಲ್ ಮ್ಯಾನೇಜರ್' ಹುದ್ದೆಗೆ ಭಡ್ತಿ ಪಡೆದೆವು. ಇಷ್ಟಲ್ಲದೆ 'ಹೆಲಿಕಾಪ್ಟರ್ ಸಂಶೋಧನಾ ವಿಭಾಗ'ದಲ್ಲಿ ಅಧಿಕ ಸಂಖ್ಯೆಯ ಮಹಿಳಾ ಡಿ. ಜಿ. ಎಂ. ಗಳೂ ಇದ್ದಾರೆ. ಹೆಲಿಕಾಪ್ಟರಿನ ಸಂಶೋಧನೆ ಮತ್ತು ವಿನ್ಯಾಸದಲ್ಲಿ ಮಹಿಳಾ ಡಿಸೈನರ್‌ಗಳು ಅಧಿಕ ಸಂಖ್ಯೆಯಲ್ಲಿದ್ದಾರೆ.

ಈ ವಿಮಾನ ಕಾರ್ಖಾನೆಯ ಹೆಲಿಕಾಪ್ಟರ್ ವಿಭಾಗದಲ್ಲಿ ಇಷ್ಟೊಂದು ಮಹಿಳೆಯರು ಸಂಶೋಧನೆಯ ತಾಂತ್ರಿಕ ತಂಡಗಳನ್ನು ಮುನ್ನಡೆಸುವ ಅವಕಾಶವನ್ನು ಪಡೆಯಲು ಅನೇಕ ಕಾರಣಗಳಿವೆ. ವಿಮಾನ ಕಾರ್ಖಾನೆಯು ನಮ್ಮ ಸಾಮರ್ಥ್ಯದ ಮೇಲೆ ಭರವಸೆ ಇಟ್ಟಿತ್ತು. ಹೆಚ್ಚು ಕಡಿಮೆ ಕಾಲು ಶತಮಾನದ ಹಿಂದೆ ವಿಮಾನ ಕಾರ್ಖಾನೆಯನ್ನು ಸೇರಿದ್ದ ಮಹಿಳೆಯರಿಗೆ ಸವಾಲೊಡ್ಡುವಂಥ ವಾತಾವರಣ ದೊರೆತುದಲ್ಲದೆ, ತಾರತಮ್ಯವಿಲ್ಲದ ಪ್ರೋತ್ಸಾಹ ಲಭಿಸಿತ್ತು. ಮಹಿಳೆಯರ ಪ್ರತಿಭೆ ಅರಳಲು ಅವಕಾಶ ಮಾಡಿಕೊಟ್ಟಿತ್ತು. ಮಾಲತಿಯವರಂಥ ಮಹಿಳಾ ಮಾದರಿ ನಮಗೆ ಪ್ರೇರಣೆಯಾಗಿತ್ತು.

ನಾವು ವಿಮಾನ ಕಾರ್ಖಾನೆಯನ್ನು ಸೇರಿದಾಗ, ಆಗಷ್ಟೇ ದೇಶೀಯ ವಿನ್ಯಾಸದ ಮೊತ್ತಮೊದಲ ಮಿಲಿಟರಿ ಹೆಲಿಕಾಪ್ಟರ್ 'ಅಡ್ವಾನ್ಸ್ಡ್ ಲೈಟ್ ಹೆಲಿಕಾಪ್ಟರ್' ಪ್ರಾಜೆಕ್ಟ್ ಆರಂಭವಾಗಿತ್ತು. ಒಂದು ಹೆಲಿಕಾಪ್ಟರ್ ಡ್ರಾಯಿಂಗ್ ಬೋರ್ಡಿನ ಗೀಟು, ಗೆರೆಗಳಿಂದ ಹೊರಬಿದ್ದು, ಮೈದುಂಬಿ ರೂಪು ಪಡೆದು, ಮೆಲ್ಲನೆ ಮೇಲೆದ್ದು, ನೆಲ ಬಿಟ್ಟು ಮುಗಿಲಿಗೆ ಹಾರುವ ಅದ್ಭುತ ಅನುಭವ ನಮ್ಮ ಈ ರಂಗದಲ್ಲಿ ದೊರೆಯಿತು. ದಶಕಕ್ಕೂ ಹಿಂದೆ ಮೊಟ್ಟ ಮೊದಲ 'ಪ್ರೊಟೋಟೈಪ್ ಹೆಲಿಕಾಪ್ಟರ್' ನೆಲದಿಂದ ಮೇಲೇಳುವ ಕ್ಷಣಕ್ಕಾಗಿ ನಾವೆಲ್ಲರೂ ಕಾತರದಿಂದ ಕಾದದ್ದು ನಿನ್ನೆ ನಡೆದಂತೆ ನೆನಪಿದೆ. ಇದೇ ಹೆಲಿಕಾಪ್ಟರ್ ಲಡಾಕಿನ 'ಲೇ' ನಲ್ಲಿ ಪರೀಕ್ಷಣಾ ಹಾರಾಟಕ್ಕೆ ಹೋದಾಗ ತಣ್ಣನೆಯ ಕಣಿವೆಯಲ್ಲಿ, ಕೊರೆಯುವ ಚಳಿಯಲ್ಲಿ, ಜೋಡುಬೆಟ್ಟಗಳ ನಡುವೆ ಹಾರಿದ ಹೆಲಿಕಾಪ್ಟರ್ ಅನ್ನು ಅಭಿಮಾನದಿಂದ ನೋಡಿದ್ದೇವೆ.

ಅದರಾಚೆಗೆ ಭಾರತದ ಮೂಲೆ ಮೂಲೆಗಳಲ್ಲಿ ನಡೆದ 'ಧ್ರುವ' ಹೆಲಿಕಾಪ್ಟರಿನ ಅಸ್ತ್ರ ಶಸ್ತ್ರಗಳ ಪರೀಕ್ಷಣಾ ಹಾರಾಟದಲ್ಲಿ ಮಹಿಳಾ ತಂಡವಿತ್ತು. ಜನವರಿ 2012ರಲ್ಲಿ ಸರ್ಟಿಫಿಕೇಶನಿಗೆ ಅಗತ್ಯವಿದ್ದ ಕಟ್ಟ ಕಡೆಯ ಅಸ್ತ್ರ ಪರೀಕ್ಷೆ ಯಶಸ್ವಿಯಾಗಿ, ನಿಖರವಾಗಿ ಗುರಿ ಮುಟ್ಟಿದಾಗ ನಾನು, ರಜನಿ ಮತ್ತು ತುಲಿಕಾ ತಿವಾರಿ ಕುಣಿದು ಕುಪ್ಪಳಿಸಿದೆವು. ಕಿರಿಯ ವಯಸ್ಸಿನ ಚೀಫ್ ಮ್ಯಾನೇಜರ್ ರಜನಿ ಮತ್ತು ಮ್ಯಾನೇಜರ್ ತುಲಿಕಾ ಅಸ್ತ್ರಗಳ ಇಂಟಿಗ್ರೇಶನ್ ನಲ್ಲಿ ತೀವ್ರವಾಗಿ ತೊಡಗಿಸಿದ ಮಹಿಳಾ ಇಂಜಿನಿಯರುಗಳು. ಹಾಗೆಯೇ ಆ ಸಂಜೆ ಖರಗಪುರ ಐ. ಐ. ಟಿ ಕೋಣೆಯಲ್ಲಿ ನಾವುಗಳು ಸೇರಿದಾಗ ಅನಿಸಿತ್ತು 'ಇಲ್ಲಿಗೆ ಯುಗವೊಂದು ಮುಗಿಯಿತು'. ನಮ್ಮೆದುರು ಈಗ 'ಲೈಟ್ ಕಾಂಬಾಟ್' ಹೆಲಿಕಾಪ್ಟರಿನ ಸವಾಲಿತ್ತು.

ವಾಯು ಪ್ರದರ್ಶನದ ಉರಿ ಬಿಸಿನಲ್ಲಿ ಕುಳಿತು ತಲೆಯೆತ್ತಿ ನಮ್ಮ ಎ.ಎಲ್.ಎಚ್ ಮತ್ತು ಎಲ್.ಸಿ.ಎಚ್ ಎರಡೂ ಹೆಲಿಕಾಪ್ಟರುಗಳು ಹಾರುವುದನ್ನು ನೋಡುವಾಗ ದಶಕಗಳ ಹಿಂದಿನ ನೆನಪುಗಳು ತೇಲಿ ಬಂದುವು. ಆಗಿನ್ನು ನಾನು ಕಿರಿಯ ಡಿಸೈನ್ ಇಂಜಿನಿಯರ್ ಆಗಿದ್ದೆ. ನೌಕಾಪಡೆಯ 'ಚೇತಕ್' ಹೆಲಿಕಾಪ್ಟರುಗಳ ಮೇಲೆ ದೇಶೀಯ ವಿನ್ಯಾಸದ ಸಬ್ ಮೆರಿನ್ ವಿರುದ್ಧದ ಟಾರ್ಪಿಡೋ ವ್ಯವಸ್ಥೆಯೊಂದನ್ನು ಜೋಡಿಸಿ, ಸರ್ಟಿಫೈ ಮಾಡುವ ಕೆಲಸ ನಮ್ಮ ವಿಭಾಗಕ್ಕೆ ಬಂದಿತ್ತು. ಅದರ ಮೆಕಾನಿಕಲ್ ಡಿಸೈನನ್ನು ಭೀಮರಾಯರು ವಹಿಸಿಕೊಂಡರೆ, ಆ ಅಸ್ತ್ರದ 'ರಿಲೀಸ್ ಮತ್ತು ಸೇಫ್ಟಿ ಸರ್ಕ್ಯೂಟು'ಗಳ ವಿನ್ಯಾಸ ನನ್ನ ಜವಾಬ್ದಾರಿಯಾಗಿತ್ತು. ಅರಬ್ಬೀ ಸಮುದ್ರದ ತಟದಿಂದ ನೂರಾರು ಕಿಲೋಮೀಟರು ಸಾಗಿ, ನಿರ್ದಿಷ್ಟ ಸ್ಥಳದಲ್ಲಿ ಈ ಹೆಲಿಕಾಪ್ಟರಿನ ಪರೀಕ್ಷಣಾ ಹಾರಾಟ ನಡೆಯಬೇಕಿತ್ತು.

ಮುಂಬಯಿ ಬಂದರಿನಲ್ಲಿ, ನೌಕಾಪಡೆಯ ಯುದ್ಧದ ಹಡಗಿನೊಳಗೆ ನಾನು ಪ್ರವೇಶಿಸಿದಂತೆ ಶಿಸ್ತಿನಿಂದ ನಿಂತ ಯೋಧರು ಥಟ್ಟನೆ ಸೆಲ್ಯೂಟ್ ಮಾಡಿದಾಗ

ಕಕ್ಕಾಬಿಕ್ಕಿಯಾಗಿದ್ದೆ. ನಂತರ ತಿಳಿಯಿತು, ಹಿರಿಯ ಅಧಿಕಾರಿಗಳ ಮನೆಯ ಮಹಿಳೆಯರಿಗೆ ಕೆಲವೊಂದು ದಿನ ಯುದ್ಧದ ಹಡಗನ್ನು ಒಳಗೆ ಬಂದು ನೋಡುವ ಅವಕಾಶವಿರುತ್ತದೆ. ಈ ರೀತಿ ಮಹಿಳೆಯರು ಪ್ರವೇಶಿಸಿದಾಗ ಅವರಿಗೆ ಗೌರವಸೂಚಕವಾಗಿ ಸೆಲ್ಯೂಟ್ ಮಾಡುವ ಪದ್ಧತಿಯಿದೆ. ಆದರೆ ನಾನು ಹಡಗನ್ನು ನೋಡಲು ಬಂದಿರಲಿಲ್ಲ, ಇಂಜಿನಿಯರ್ ಆಗಿ ಇಲ್ಲಿ ನಿಂತಿದ್ದೆ. ನಮಗೆ ಮೊದಲೇ ಈ ಪರೀಕ್ಷಣಾ ಹಾರಾಟದಲ್ಲಿ ಭಾಗವಹಿಸಲು ನೌಕಾಪಡೆಯಿಂದ ಅನುಮತಿ ದೊರೆತಿತ್ತು. ನನ್ನ 'ನೇಮೀಚಂದ್ರ' ಹೆಸರು ಬಹುಶಃ ಪುರುಷನೆಂಬ ಗೊಂದಲಕ್ಕೆ ಕಾರಣವಾಗಿ ಅನುಮತಿ ಕೊಟ್ಟಂತೆ ಕಂಡಿತು. ರಾತ್ರಿ ಕಾಲದಲ್ಲಿ ಮಹಿಳೆಯರಿಗೆ ತಂಗಲು ಯುದ್ಧದ ಹಡಗಿನಲ್ಲಿ ಯಾವುದೇ ವ್ಯವಸ್ಥೆ ಇಲ್ಲದಿದ್ದುದರಿಂದ ಮಹಿಳೆಯರಿಗೆ ಅದರಲ್ಲಿ ಪಯಣಿಸುವ ಅವಕಾಶವಿರಲಿಲ್ಲ. ಆದರೆ ನಾನು ಈ ಅಸ್ತ್ರದ 'ರಿಲೀಸ್' ಮತ್ತು 'ಸೇಫ್ಟಿ ಸರ್ಕ್ಯೂಟ್'ನ ವಿನ್ಯಾಸವನ್ನು ಮಾಡಿದವಳಾದ್ದರಿಂದ ಪರೀಕ್ಷಣಾ ಹಾರಾಟಕ್ಕೆ ನನ್ನನ್ನು ಕರೆದೊಯ್ಯುವುದು ಅನಿವಾರ್ಯವಾಗಿತ್ತು. ಕೆಲವು ಗಂಟೆಗಳಲ್ಲಿ ಅಲ್ಲಿಂದಿಲ್ಲಿಗೆ 'ಸಿಗ್ನಲ್ಲುಗಳು' ಹರಿದಾಡಿ, ಕಡೆಗೂ ವಿಶೇಷ ಅನುಮತಿ ದೊರೆತು, ನಾನು ಹಡಗನ್ನು ಏರಿ ಹೊರಟಿದ್ದೆ. ವಿಶಾಲ ಸಾಗರದ ನಡುವೆ ಚುಕ್ಕಿಯಾದ ನಮ್ಮ ಹಡಗು, ಮರುದಿನ ಹಡಗಿನ ಮಾಡಿನಿಂದ ಹಾರಿದ ಹೆಲಿಕಾಪ್ಟರ್ ರೋಮಾಂಚನದ 'ಫ್ಲೈಟ್ ಟೆಸ್ಟ್' ಅನುಭವ ನನ್ನದಾಗಿತ್ತು. ರಾತ್ರಿ ಮಲಗಲು ಹಿರಿಯ ಅಧಿಕಾರಿಗಳ ಕೋಣೆಯನ್ನು ನನಗೆ ನೀಡಿದ್ದರು. ಅದನ್ನು ಕೋಣೆ ಅನ್ನುವ ಹಾಗಿರಲಿಲ್ಲ. ಕಿರಿದಾದ ಜಾಗದಲ್ಲಿ ಮಲಗಿದರೆ ಮೇಲಿನ ತಾರಸಿ ಮೂಗಿಗೆ ತಾಗುವುದೋ ಎಂಬಂತೆ ಒಂದು ಪೆಟ್ಟಿಗೆಯಲ್ಲಿ ಪವಡಿಸಿದ ಅನುಭವ. ನಮ್ಮ ಯೋಧರು ಎಂಥ ಕಷ್ಟದ ಪರಸರದಲ್ಲಿ ದೇಶ ರಕ್ಷಣೆಗೆ ದುಡಿಯುತ್ತಾರೆ ಎಂಬ ಕಿರುನೋಟ ಅಂದು ನನಗೆ ದೊರೆತಿತ್ತು.

ಹೆಲಿಕಾಪ್ಟರಿನ ಮೇಲೆ ದೇಶೀಯವಾಗಿ ಅಳವಡಿಸಿದ ದೇಶೀಯ ಅಸ್ತ್ರದ ಎಲೆಕ್ಟ್ರಾನಿಕ್ಸ್‌ನ ಆ ಮೊದಲ ಯೋಜನೆ ನನಗೆ ಆತ್ಮವಿಶ್ವಾಸ ನೀಡಿತ್ತು. ಹಿಂದಿರುಗಿ ನೋಡುವಾಗ ನಾನು ಹುಡುಗಿ ಎಂಬುದರ ಯಾವ ಹಿಂಜರಿಕೆಯಿಲ್ಲದೆ, ನನಗೆ ಅವಕಾಶ ಮತ್ತು ಜವಾಬ್ದಾರಿ ಕೊಟ್ಟು ಭರವಸೆಯಿಂದ ಕಳುಹಿಸಿದ ನಮ್ಮ ವಿಭಾಗದ ಆ ಹಿರಿಯರನ್ನು ವಂದಿಸಬೇಕಿದೆ. ದೇಶೀಯ ಹೆಲಿಕಾಪ್ಟರಿನ ವಿನ್ಯಾಸದ ನನ್ನ ಕೆಲಸ ಮಹಿಳೆಯರಿಗೆ ಅತ್ಯಂತ ಅಪರೂಪವಾದ ಇಂತಹ ಅನುಭವಗಳನ್ನು ಒದಗಿಸಿತು. ನನಗೆ ತಿಳಿದಿರದ ಒಂದು ಹೊಸದೇ ಜಗತ್ತನ್ನು ನನ್ನೆದುರು ನನ್ನ ಉದ್ಯೋಗ ತೆರೆದಿಟ್ಟಿತು. ಇಷ್ಟೆಲ್ಲ ಅವಕಾಶವನ್ನು ಕೊಟ್ಟ ವಿಮಾನ ಕಾರ್ಖಾನೆ ಈಗ 'ಐದನೇ ಪೀಳಿಗೆಯ ಯುದ್ಧ ವಿಮಾನ'ದ ಜವಾಬ್ದಾರಿಯ ಅದ್ಭುತ ಅವಕಾಶವನ್ನು ನೀಡಿದೆ. ನನ್ನ ವೃತ್ತಿ ಜೀವನದ ಮತ್ತೊಂದು ರೋಚಕ ಅಧ್ಯಾಯ ಆರಂಭವಾಗಲಿದೆ.

ಶಾಲೆ, ಕಾಲೇಜುಗಳಲ್ಲಿ ಟೆಕ್ನಿಕಲ್ ಸೆಮಿನಾರ್ ಅಥವಾ ಸಾಹಿತ್ಯಿಕ ಸಮಾರಂಭಗಳಿಗೆ ಹೋದಾಗ ಎಳೆಯ ಹುಡುಗರು ವೈಮಾನಿಕ ರಂಗದಲ್ಲಿ ಆಸಕ್ತಿಯನ್ನು ತೋರಿಸಿ ನನ್ನನ್ನು ಕೇಳುತ್ತಿರುತ್ತಾರೆ. ವೈಜ್ಞಾನಿಕ ರಂಗದಲ್ಲಿ ಅದ್ಭುತ ಅವಕಾಶಗಳು ತೆರದಿವೆ. ರಕ್ಕೆ ಬಿಚ್ಚಿ ಹಾರಬಲ್ಲ ವೈಜ್ಞಾನಿಕ ರಂಗಕ್ಕೆ ಹೆಣ್ಣು ಮಕ್ಕಳನ್ನು ವಿಶೇಷವಾಗಿ ಆಹ್ವಾನಿಸಲು ಇಚ್ಛಿಸುತ್ತೇನೆ. ಮಹಿಳಾ ಇಂಜಿನಿಯರುಗಳಾದ ನಮಗೆ ಇಲ್ಲಿ ನೀರೆರೆದು ಪೋಷಿಸಿ, ಅದ್ಭುತ ಸವಾಲಿನ ಕೆಲಸಗಳನ್ನು ನೀಡಿ, ದೇಶದ ಪ್ರತಿಷ್ಠಿತ ದೇಶೀಯ ವಿನ್ಯಾಸದ ಯೋಜನೆಗಳಲ್ಲಿ ದುಡಿಯುವ ಅವಕಾಶವನ್ನು ಕೊಟ್ಟ ವಿಮಾನ ಕಾರ್ಖಾನೆಯನ್ನು, ಸ್ವಾತಂತ್ರ್ಯ ಪೂರ್ವದ ವರ್ಷಗಳಲ್ಲೇ ಇಂತಹ ಕಾರ್ಖಾನೆಯ ಕನಸು ಕಂಡ ಸೇಠ್ ವಾಲ್‌ಚಂದ್, ಹೀರಾಚಂದ್ ಅವರನ್ನೂ ಇಂದು ಕೃತಜ್ಞತೆಯಿಂದ ನೆನೆಯುತ್ತೇನೆ.



**ನೇಮಿಚಂದ್ರ (೧೬.೭.೧೯೫೯) :** ಕನ್ನಡದ ಪ್ರಸಿದ್ಧ ಬರಹಗಾರ್ತಿಯಾದ ನೇಮಿಚಂದ್ರ ಸಣ್ಣಕತೆ, ಕಾದಂಬರಿ ಮತ್ತು ವೈಚಾರಿಕ ಲೇಖನಗಳ ಮೂಲಕ ಹೆಸರುವಾಸಿಯಾಗಿದ್ದಾರೆ. ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನಿಂದ ಬಿ.ಇ. ಮತ್ತು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಎಂ.ಎಸ್. ಪದವಿಯನ್ನು ಪಡೆದ ಇವರು ಬೆಂಗಳೂರಿನ ಎಚ್.ಎ.ಎಲ್. ಸಂಸ್ಥೆಯಲ್ಲಿ ಉನ್ನತ ತಂತ್ರಜ್ಞಾನ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದರೊಂದಿಗೆ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿಯೂ ದುಡಿದಿದ್ದಾರೆ. ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಒಂದು ಶ್ಯಾಮಲ ಸಂಜೆ, ನೇಮಿಚಂದ್ರರ ಕಥೆಗಳು (ಕಥಾ ಸಂಕಲನಗಳು), ಸಾವೇ ಬರುವುದಿದ್ದರೆ ನಾಳೆ ಬಾ, ನನ್ನ ಕಥೆ ನಮ್ಮ ಕಥೆ, ಯಾದ್ ವಶೇಮ್ (ಕಾದಂಬರಿಗಳು), ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆಯಲ್ಲಿ (ಪ್ರವಾಸ ಕಥನ), ನೋವಿಗದ್ದಿದ ಕುಂಚ, ಬೆಳಕಿನೊಂದು ಕಿರಣ, ಥಾಮಸ್ ಆಲ್ವಾ ಎಡಿಸನ್ (ಜೀವನ ಚರಿತ್ರೆ), ಸಾಹಿತ್ಯ ಮತ್ತು ವಿಜ್ಞಾನ, ಬದುಕು ಬದಲಿಸಬಹುದು, ಮಹಿಳಾ ಅಧ್ಯಯನ, ದುಡಿವ ಹಾದಿಯಲಿ ಜೊತೆಯಾಗಿ, ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು (ವೈಚಾರಿಕ ಲೇಖನಗಳು) ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರತ್ನಮ್ಮ ಹೆಗಡೆ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಹಾ. ಮಾ. ನಾಯಕ ಪ್ರಶಸ್ತಿ, ಅಕ್ಕ ಪ್ರಶಸ್ತಿ, ದೇವಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಲಭಿಸಿವೆ.

## ನವೀನ ಪದಗಳ ಅರ್ಥ

ಮೈಲುಗಲ್ಲು - ಸಾಧನೆಯ ಗುರುತು. ತಟರಕ್ಷಕ – ನೌಕಾದಳ, ಕರಾವಳಿ ರಕ್ಷಣಾ ಪಡೆ. ಮಲ್ಟಿರೋಲ್ - ಬಹುಮುಖ ಪಾತ್ರ. ಮಲ್ಟಿಮಿಶನ್ - ಬಹು ಉದ್ದೇಶ. ಮುಂಚೂಣಿ - ಮುನ್ನೆಲೆ.

## ವಿಶದೀಕರಣ

**ಅಸ್ತ್ರ ಶಸ್ತ್ರ -** ಯುದ್ಧೋಪಕರಣಗಳನ್ನು ಒಮ್ಮೆ ಬಳಸಿ ಅದರ ನಿಯಂತ್ರಣ ಹಾಗೂ ಮರುಬಳಕೆಯ ಸಾಮರ್ಥ್ಯವಿರುವವುಗಳನ್ನು ಅಸ್ತ್ರಗಳೆಂದೂ ಒಮ್ಮೆ ಮಾತ್ರ ಬಳಸಲು ಸಾಧ್ಯವಿರುವವುಗಳನ್ನು ಶಸ್ತ್ರಗಳೆಂದೂ ಕರೆಯುವರು.

**ಸಿವಿಲ್ ಸರ್ಟಿಫಿಕೇಟ್** : ನಮ್ಮ ವಾಯುಯಾನ ಕ್ಷೇತ್ರದಲ್ಲಿ ಮಿಲಿಟರಿ ಅಥವಾ ನಾಗರಿಕ ಬಳಕೆಗಾಗಿ ಹೊಸ ಹೆಲಿಕಾಪ್ಟರ್, ವಿಮಾನ ಅಥವಾ ಡ್ರೋನ್‌ಗಳ ಸಂಶೋಧನೆಗಳಾದಾಗ ಅವುಗಳನ್ನು ಹಾರಿಸಲು ಡೈರೆಕ್ಟರ್ ಜನರಲ್ ಆಫ್ ಸಿವಿಲ್ ಏವಿಯೇಶನ್ (ಡಿ. ಜಿ. ಸಿ. ಎ.)ಇಲಾಖೆಯ ಲೈಸನ್ಸ್ (ಪರವಾನಗಿ) ಪಡೆಯಬೇಕಾಗುವುದು. ಇದುವೇ ಸಿವಿಲ್ ಸರ್ಟಿಫಿಕೇಟ್.

**ಎಲೆಕ್ಟ್ರಾನಿಕ್ ವಾರ್ ಫೇರ್:** ವಿದ್ಯುತ್ಕಾಂತೀಯ ಯುದ್ಧ ಅಥವಾ ಎಲೆಕ್ಟ್ರಾನಿಕ್ ಯುದ್ಧ ಎಂಬುದು ವಿದ್ಯುತ್ಕಾಂತೀಯ ವರ್ಣಪಟಲ (EM ವರ್ಣಪಟಲ) ಅಥವಾ ವರ್ಣಪಟಲವನ್ನು ನಿಯಂತ್ರಿಸಲು, ಶತ್ರುವಿನ ಮೇಲೆ ದಾಳಿ ಮಾಡಲು ಅಥವಾ ಶತ್ರು ಕಾರ್ಯಾಚರಣೆಗಳನ್ನು ತಡೆಯಲು ನಿರ್ದೇಶಿತ ಶಕ್ತಿಯನ್ನು ಬಳಸುವ ಯುದ್ಧವಾಗಿದೆ . ವಿದ್ಯುತ್ಕಾಂತೀಯ ಯುದ್ಧದ ಉದ್ದೇಶವು ಎದುರಾಳಿಗೆ EM ವರ್ಣಪಟಲದ ಪ್ರಯೋಜನವನ್ನು ನಿರಾಕರಿಸುವುದು ಮತ್ತು ಸ್ನೇಹಪರ ಅಡೆತಡೆಯಿಲ್ಲದ ಪ್ರವೇಶವನ್ನು ಖಚಿತಪಡಿಸುವುದು. ವಿದ್ಯುತ್ಕಾಂತೀಯ ಯುದ್ಧವನ್ನು ಗಾಳಿ , ಸಮುದ್ರ , ಭೂಮಿ ಅಥವಾ ಬಾಹ್ಯಾಕಾಶದಿಂದ ಸಿಬ್ಬಂದಿ ಸಹಿತ ಮತ್ತು ಸಿಬ್ಬಂದಿ ರಹಿತ ಇಲ್ಲದ ವ್ಯವಸ್ಥೆಗಳಿಂದ ಅನ್ವಯಿಸಬಹುದು ಮತ್ತು ಸಂವಹನ, ರಾಡಾರ್ ಅಥವಾ ಇತರ ಮಿಲಿಟರಿ ಮತ್ತು ನಾಗರಿಕ ಸ್ವತ್ತುಗಳನ್ನು ಗುರಿಯಾಗಿಸಬಹುದು.

**ಅಡ್ವಾನ್ಸ್ಡ್ ಲೈಟ್ ಹೆಲಿಕಾಪ್ಟರ್(ALH) :** ಇದು 'ಧ್ರುವ' ಎಂಬ ಹೆಸರಿನ, ಭಾರತೀಯ ವಿನ್ಯಾಸದ, 5.5 ಟನ್ ತೂಕದ, ಬಹು ಪಾತ್ರದ ಹೆಲಿಕಾಪ್ಟರ್ ಆಗಿದೆ. ಇದನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಅಭಿವೃದ್ಧಿಪಡಿಸಿದೆ. ಇದನ್ನು ಮಿಲಿಟರಿ ಹಾಗೂ ನಾಗರಿಕ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಇದು ವಿಶೇಷವಾಗಿ ಭೂಸೇನೆ, ವಾಯುಪಡೆ ಮತ್ತು ನೌಕಾಪಡೆಗಳ ಕಾರ್ಯಾಚರಣೆಗಳಿಗೆ ಬೆಂಬಲವನ್ನು ನೀಡುತ್ತದೆ.

**ಲೈಟ್ ಕಾಂಬಾಟ್ ಹೆಲಿಕಾಪ್ಟರ್ (LCH) :** ಸ್ವದೇಶಿ ನಿರ್ಮಿತವಾದ, 'ಪ್ರಚಂಡ್' ಎಂಬ ಹೆಸರಿನ ಹೆಲಿಕಾಪ್ಟರ್ ಆಗಿದೆ. ಇದು ಗರಿಷ್ಠ ಯುದ್ಧ ಸಾಮರ್ಥ್ಯವನ್ನು ಹೊಂದಿದೆ. ಇದು ಎತ್ತರದ ಪ್ರದೇಶಗಳಲ್ಲಿ ನಿಯೋಜನೆಗೆ ಸೂಕ್ತವಾಗಿದ್ದು, ನೌಕಾಪಡೆಗೆ ನಿಕಟ ಬೆಂಬಲ ಮತ್ತು ವಿಶೇಷ ಯುದ್ಧ ಕಾರ್ಯಾಚರಣೆಗಳಿಗೆ ಬಳಸಲಾಗುತ್ತದೆ.

**ಟಾರ್ಪಿಡೋ:** ನೌಕಾಯುದ್ಧದಲ್ಲಿ ಬಳಸುವ ಒಂದು ಶಕ್ತಿಶಾಲಿ ಆಯುಧವಾಗಿದ್ದು, ನೀರಿನೊಳಗಿನಿಂದ ಶತ್ರು ನೌಕೆಗೆ ಗುರಿಯಿಟ್ಟು ಹಾರಿಸಲಾಗುತ್ತದೆ. ಇದು ಚುಟ್ಟದ ಆಕಾರದಲ್ಲಿದ್ದು, ತಗುಲಿದೊಡನೆ ಸಿಡಿಯುವ ಸ್ವಯಂಚಾಲಿತ ಅಸ್ತ್ರವಾಗಿದೆ. ಶತ್ರು ನೌಕೆಗಳನ್ನು ನಾಶಪಡಿಸಲು ಬಳಸುವ ಈ ನೌಕಾ ಆಯುಧವು ಸ್ವಯಂಚಾಲಿತ, ಸಿಲಿಂಡರ್ ಆಕಾರದ ಅಸ್ತ್ರವಾಗಿದ್ದು, ಸಿಡಿತಲೆಯನ್ನು ಹೊಂದಿದೆ. ಇದನ್ನು ನೀರಿನೊಳಗಿನಿಂದ ನೌಕೆಗಳು ಅಥವಾ ಜಲಾಂತರ್ಗಾಮಿಗಳಿಂದ ಹಾರಿಸಲಾಗುತ್ತದೆ.

**ಸೇಫ್ಟಿ ಸರ್ಕ್ಯೂಟ್:** ಒಂದು ಎಲೆಕ್ಟ್ರಾನಿಕ್ ಸರ್ಕ್ಯೂಟ್ ಆಗಿದ್ದು, ಯಂತ್ರಗಳನ್ನು ಅಥವಾ ಉಪಕರಣಗಳನ್ನು ಹಾನಿ ಮತ್ತು ಅಪಾಯಗಳಿಂದ ರಕ್ಷಿಸಲು ವಿನ್ಯಾಸಗೊಳಿಸಲಾಗಿದೆ. ಯಂತ್ರೋಪಕರಣಗಳು ಸುರಕ್ಷಿತವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಖಚಿತಪಡಿಸಿಕೊಳ್ಳಲು ತುರ್ತು ನಿಲುಗಡೆ ಬಟನ್‌ಗಳು, ಗಾರ್ಡ್‌ಗಳು ಮತ್ತು ಸೆನ್ಸರ್‌ಗಳಂತಹ ಸುರಕ್ಷತಾ ಸಾಧನಗಳ ಮೇಲ್ವಿಚಾರಣೆಯನ್ನು ಮಾಡುತ್ತದೆ. ಗೃಹೋಪಯೋಗಿ ಉಪಕರಣಗಳಲ್ಲಿ, ಇದನ್ನು ಸಾಮಾನ್ಯವಾಗಿ ಫಾಲ್ಟ್ ಸಂಭವಿಸಿದಾಗ ವಿದ್ಯುತ್ ಪೂರೈಕೆಯನ್ನು ಕಡಿತಗೊಳಿಸುವ "ಗ್ರೌಂಡ್ ಫಾಲ್ಟ್ ಇಂಟರಪ್ಟರ್" (GFI) ಆಗಿ ಬಳಸಲಾಗುತ್ತದೆ.

**ಪ್ರೊಟೊಟೈಪ್ ಹೆಲಿಕಾಪ್ಟರ್:** ಇದು ಒಂದು ಮಾದರಿ ಹೆಲಿಕಾಪ್ಟರ್ ಆಗಿದ್ದು, ನಿಜವಾದ ಹೆಲಿಕಾಪ್ಟರನ್ನು ಅಭಿವೃದ್ಧಿಪಡಿಸುವ ಮೊದಲು ವಿನ್ಯಾಸ, ಕಾರ್ಯಕ್ಷಮತೆ ಮತ್ತು ವೈಶಿಷ್ಟ್ಯಗಳನ್ನು ಪರೀಕ್ಷಿಸಲು ರಚಿಸಲಾಗುತ್ತದೆ. ಹೊಸ ತಂತ್ರಜ್ಞಾನ, ವಿನ್ಯಾಸದ ಪರಿಕಲ್ಪನೆಗಳು ಮತ್ತು ಎಂಜಿನ್‌ಗಳನ್ನು ಪರೀಕ್ಷಿಸಲು ಇವುಗಳನ್ನು ಬಳಸಲಾಗುತ್ತದೆ. ಅವುಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಿದ ನಂತರ ಅವುಗಳನ್ನು ಹೆಚ್ಚು ಸುಧಾರಿತ ಅಥವಾ ಅಂತಿಮ ಮಾದರಿಯಾಗಿ ಪರಿವರ್ತಿಸಲಾಗುತ್ತದೆ.

**ಕೌಂಟರ್ ಮೆಶರ್:** ಯುದ್ಧದಲ್ಲಿ ಎದುರಾಳಿಯ ಸಂಕೇತಗಳನ್ನು ಅಡ್ಡಿಪಡಿಸಲು ಅಥವಾ ನಿರ್ಬಂಧಿಸಲು ಬಳಸಲಾಗುವ ಒಂದು ತಂತ್ರವಾಗಿದೆ. ಇದು ಎಲೆಕ್ಟ್ರಾನಿಕ್ ಜಾಗದಲ್ಲಿ ಎದುರಾಳಿಯ ಸಂಕೇತಗಳ ನಾಶ ಪಡಿಸಲು ಸಹಾಯ ಮಾಡುತ್ತದೆ. ಈ ಮೂಲಕ ದೇಶಕ್ಕೆ ಸಂಬಂಧಿಸಿದಂತೆ ರಕ್ಷಣಾತ್ಮಕ ಹೆಜ್ಜೆಗಳನ್ನು ತೆಗೆದುಕೊಳ್ಳಲು ಸಾಧ್ಯವಿದೆ.

**ಇನೀಶಿಯಲ್ ಆಪರೇಶನಲ್ ಕ್ಲಿಯರೆನ್ಸ್ - IOC (ಆರಂಭಿಕ ಕಾರ್ಯಾಚರಣೆ ಅನುಮತಿ):** ಹೆಲಿಕಾಪ್ಟರ್ ಅಥವಾ ಯುದ್ಧ ವಿಮಾನದಂಥ ವ್ಯವಸ್ಥೆಯು, ಸೇನೆಯ ಕಾರ್ಯಾಚರಣೆಗೆ ಅಗತ್ಯವಿರುವ ಸುರಕ್ಷತೆ ಮತ್ತು ಕಾರ್ಯಕ್ಷಮತೆಯ ಮಾನದಂಡಗಳನ್ನು ಪೂರೈಸುತ್ತದೆ ಎಂಬುದಕ್ಕೆ ನೀಡುವ ಔಪಚಾರಿಕ ಅನುಮೋದನೆಯಾಗಿದೆ.

## ಉತ್ತರಿಸಿರಿ

1. 'ಧ್ರುವ' ಹೆಲಿಕಾಪ್ಟರ್ 'ರುದ್ರ' ಎಂಬ ಹೆಸರಿನಲ್ಲಿ ಮರುನಾಮಕರಣಗೊಂಡದ್ದು ಹೇಗೆ?
2. 'ಧ್ರುವ' ಹೆಲಿಕಾಪ್ಟರಿನ ವಿಶೇಷತೆಯೇನು?
3. ಎಲ್ಲಾ ವಿಧದ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವಿದೆಯೆಂದು 'ಧ್ರುವ' ಹೆಲಿಕಾಪ್ಟರ್ ತೋರಿಸಿಕೊಟ್ಟದ್ದು ಹೇಗೆ?

4. ಹೆಲಿಕಾಪ್ಟರ್ ನಿರ್ಮಾಣದಲ್ಲಿ ಮಹಿಳೆಯರು ಸಂಶೋಧನೆಯ ತಾಂತ್ರಿಕ ತಂಡಗಳನ್ನು ಮುನ್ನಡೆಸುವ ಅವಕಾಶ ಪಡೆಯಲು ಕಾರಣವೇನು?
5. 'ಧ್ರುವ' ಹೆಲಿಕಾಪ್ಟರಿನ ಪರೀಕ್ಷಣಾ ಹಾರಾಟದ ಸಂದರ್ಭದಲ್ಲಿ ಲೇಖಕಿಗೆ ಆದ ಅನುಭವಗಳೇನು?
6. 'ರುದ್ರ' ಹೆಲಿಕಾಪ್ಟರ್ ಯೋಜನೆಯ ಹಿಂದಿರುವ ಮಹಿಳೆಯರ ಪಾತ್ರವನ್ನು ವಿವರಿಸಿರಿ.

## ಪರಿಚಯ ಲೇಖನ

ವೈಜ್ಞಾನಿಕ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆಯೊಬ್ಬರ ಕುರಿತು ಪರಿಚಯ ಲೇಖನವನ್ನು ಸಿದ್ಧಪಡಿಸಿರಿ.

## ಕಾರ್ಯಕ್ರಮ ಪಟ್ಟಿ

ನಿಮ್ಮ ಶಾಲೆಯಲ್ಲಿ ಜರಗುವ ಸಾಹಿತ್ಯ ಸಮಾರಂಭಕ್ಕೆ ಊರಿನ ಮಹಿಳಾ ಸಾಧಕರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಕಲ್ಪಿಸಿಕೊಂಡು, ಸಮಾರಂಭದ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿರಿ.

## ಲೇಖನ ಬರೆಹ

ರಕ್ಷಣಾ ಕ್ಷೇತ್ರದಲ್ಲಿ ಭಾರತದ ಅದ್ವಿತೀಯ ಸಾಧನೆಯ ಕುರಿತು ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಲೇಖನವನ್ನು ತಯಾರಿಸಿರಿ.

## ಟಿಪ್ಪಣಿ ಬರಹ

ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳಾ ಸಾಧಕಿಯರ ಕುರಿತು ಟಿಪ್ಪಣಿಯನ್ನು ಬರೆಯಿರಿ.

## ವಿಭಕ್ತಿ ಪ್ರತ್ಯಯ

ವಾಕ್ಯಗಳಲ್ಲಿ ಬಳಕೆಯಾಗುವ ನಾಮ ಪದಗಳಿಗೆ ಪ್ರತ್ಯಯಗಳನ್ನು ಹಚ್ಚಿದರೆ ಸರಿಯಾದ ಅರ್ಥ ಹೊರಹೊಮ್ಮುತ್ತದೆ. ಅಂಥ ಪ್ರತ್ಯಯಗಳನ್ನು ವಿಭಕ್ತಿ ಪ್ರತ್ಯಯಗಳು ಎನ್ನುತ್ತಾರೆ. ಇದರಲ್ಲಿ ಏಳು ವಿಧ.

| ವಿಭಕ್ತಿ | ಪ್ರತ್ಯಯ | ಉದಾಹರಣೆ |
|---|---|---|
| ಪ್ರಥಮಾ ವಿಭಕ್ತಿ | ಉ | ನದಿಯು |
| ದ್ವಿತೀಯಾ ವಿಭಕ್ತಿ | ಅನ್ನು | ನದಿಯನ್ನು |
| ತೃತೀಯಾ ವಿಭಕ್ತಿ | ಇಂದ | ನದಿಯಿಂದ |
| ಚತುರ್ಥೀ ವಿಭಕ್ತಿ | ಗೆ/ಕ್ಕೆ/ಇಗೆ | ನದಿಗೆ/ಮರಕ್ಕೆ/ ಮಗುವಿಗೆ |
| ಪಂಚಮೀ ವಿಭಕ್ತಿ | ದೆಸೆಯಿಂದ | ನದಿಯ ದೆಸೆಯಿಂದ |
| ಷಷ್ಠೀ ವಿಭಕ್ತಿ | ಅ | ನದಿಯ |
| ಸಪ್ತಮೀ ವಿಭಕ್ತಿ | ಅಲ್ಲಿ | ನದಿಯಲ್ಲಿ |

### ಈ ಕೆಳಗಿನ ವಾಕ್ಯಗಳಲ್ಲಿ ಬಂದಿರುವ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ ಬರೆಯಿರಿ.

ಈ ವಿಮಾನ ಕಾರ್ಖಾನೆಯ ಹೆಲಿಕಾಪ್ಟರ್ ವಿಭಾಗದಲ್ಲಿ ಇಷ್ಟೊಂದು ಮಹಿಳೆಯರು ಸಂಶೋಧನೆಯ ತಾಂತ್ರಿಕ ತಂಡಗಳನ್ನು ಮುನ್ನಡೆಸುವ ಅವಕಾಶವನ್ನು ಪಡೆಯಲು ಅನೇಕ ಕಾರಣಗಳಿವೆ.

# ಬದುಕಿನ ತಿರುವು

**ಅರುಣ್ ಜೋಳದ ಕೂಡ್ಲಿಗಿ**



ಮನೆಗೆ ಹೋದಾಗ ರಾತ್ರಿಯಾಗಿತ್ತು. ಅಯ್ಯ ಅಮ್ಮ ಏನಂತಾರೋ... ಮನೆಯಲ್ಲಿ ಸೇರಿಸ್ತಾರೋ ಇಲ್ವೋ ಅಂತ ಅಳುಕಿನಿಂದಲೇ ಮನೆ ಒಳ ಹೋದೆ. ಮನಿಯಾಗ ಅಯ್ಯ, ಅಮ್ಮ, ತಂಗಿ, ತಮ್ಮ ಯಾರೂ ನನ್ನ ಮಾತಾಡಿಸ್ಲಿಲ್ಲ. ನಾನು ಬಂದಿದಿನಿ ಅನ್ನೋದನ್ನು ಕಡೆಗಣಿಸಿ ನನ್ನನ್ನು ಮುಖ ಕೊಟ್ಟು ನೋಡ್ಲಿಲ್ಲ. ಎಲ್ಲರೂ ಮೊದಲೆ ಮಾತನಾಡಿ ಕೊಂಡಂಗಿತ್ತು. ಅಥವಾ ಅಯ್ಯನೆ ಎಲ್ಲರಿಗೂ ಮಂಜ ಬಂದ್ರ ಮಾತಾಡಿಸಬೇಡ್ರಿ ಅಂತ ಹೇಳಿದ್ರು ಅನ್ಸುತ್ತೆ. ಹಿಂಗಾಗಿ ಏನೋ ಕಳಕಂಡಂಗ ಮನಿ ಬಿಕೋ ಅಂತಿತ್ತು. ಇದೇನು ನಮ್ಮ ಮನಿಗೆ ಬಂದೀನೋ... ಬ್ಯಾರೆ ಮನಿಗೆ ಬಂದೀನೋ ಅನ್ನೋತರ ಆಗಿತ್ತು. ಅಡುಗೆ ಮನೆಯಲ್ಲಿ ಊಟ ಇದೆಯೇನೋ ಅಂತ ನೋಡಿದೆ. ಸಾರು ಮಾತ್ರ ಇತ್ತು. ನನ್ನಲ್ಲಿದ್ದ ಒಣ ಬ್ರೆಡ್ಡನ್ನು ಸಾರಲ್ಲಿ ಕಲಸಿಕೊಂಡು ಉಂಡು ಮಲಗಿದೆ. ಅಯ್ಯಂಗೆ ನಾವೇ ದೇವರ ಕಟ್ಟಿಸ್ಕಂಡು ಬಂದ್ರೂ ಇವನು ವಿಷ ಕುಡುದ್ನಲ್ಲ ಅನ್ನೋ ಸಿಟ್ಟಿದ್ದಂಗಿತ್ತು. ನಾನು ತಪ್ಪು ಮಾಡಿದಿನಿ ಬಿಡು ಅನ್ಕಂಡು, ಮನೆಯ ವಾತಾವರಣ ನೋಡಿ ಯಾರನ್ನೂ ಮಾತಾಡಿಸೋ ಧೈರ್ಯ ಮಾಡಲಿಲ್ಲ. ನನ್ನ ಪಾಡಿಗೆ ನಾನು ಒಂದು ಮೂಲೆಯಲ್ಲಿ ಕೂತ್ಕಂಡೆ. ಮೊದಲ ಸಲ ತಂದೆ ತಾಯಿ ಇರೋ ಮನಿಯಾಗ ಯಾರೂ ಇಲ್ಲದ ಅನಾಥೆ ಅಂತ ಅನ್ನಿಸಿತು. ಹೀಗೆ ಯೋಚನೆ ಮಾಡ್ತಾ ನಿದ್ದೆ ಹೋದದ್ದು ಗೊತ್ತಾಗಲಿಲ್ಲ.

ಬೆಳಗ್ಗೆ ಯಥಾಪ್ರಕಾರ ಎದ್ದು ಕಸ ಬಳಿಯಾಕೆ ಕಸಬರಿಗೆ ತಗೊಂಡೆ. ದೊಡ್ಡ ತಂಗಿ ಬಂದು ಕಸಬರಿಗೆ ಕಸಕೊಂಡ್ಲು. ಹೊಸಿಲು ತೊಳಿಯೋಣ ಅಂತ ಹೋದ್ರೆ ಸಣ್ಣತಂಗಿ ಕೆಮ್ಮಣ್ಣಿನ ಬಟ್ಟಲ ಕಸಕೊಂಡ್ಲು. ನನ್ನ ಪಾಡಿಗೆ ನಾನು ಸ್ನಾನ ಮಾಡಿ ಪೂಜೆ ಮಾಡಿದೆ. ನನ್ನನ್ನ ಯಾರೂ ಮಾತಾಡಿಸದೆ ಇದ್ದದ್ದು ನೋಡಿ ಕ್ಯಾಂಪಿನ ಬೇರೆಯವರ ಮನೆಯಲ್ಲಿ ಊಟ ಮಾಡಿ ಸಂಜೆತನಕ ಓಡಾಡಿಕೊಂಡು ಕಳೆದೆ. ಇಳಿ ಸಂಜಿ ಕತ್ಲು ಆಗಾಕ ಬಂತು. ನನ್ನನ್ನ ಯಾವ ಊರು ಅಂತ ಯಾರೂ ಮಾತಾಡಿಸ್ಲಿಲ್ಲ. ನಾನೂ ಮುಂದೆ ಬಿದ್ದು ಯಾರನ್ನೂ ಮಾತಾಡ್ಸಾಕ ಹೋಗಲಿಲ್ಲ. ಮನಿ ಒಂಥರಾ ಗಂವ್ ಅಂತಿತ್ತು. ಎಲ್ರೂ ಗೂಗಿ ಕುಂತಂಗ ಕುಂತಿದ್ರು. ನನ್ನ ಪಾಡಿಗೆ ನಾನು

ಮುಖ ತೊಳಕಂಡು ದೀಪ ಮುಡಿಸಿ, ಊದಿನಕಡ್ಡಿ ಹಚ್ಚಿ ಪೂಜೆ ಮಾಡಿದೆ. ಆಮ್ಯಾಲೆ ಪಕ್ಕದ ಮನೆಗೋಗಿ ಅದು ಇದು ಮಾತಾಡ್ತಾ ಕೂತ್ಕಂಡೆ. ಅವರೆಲ್ಲಾ ಬೈದರು. 'ಜೋಗಮ್ಮರು ಎಷ್ಟು ಜನ ಜೀವನ ಮಾಡಲ್ಲ, ಈಗಿನ ಕಾಲದಾಗ ಯಾರ ಮನಿಯಾಗ ಅಪ್ಪ ಅವ್ವನೆ ಮುಂದೆ ನಿಂತು ಮುತ್ತು ಕಟ್ಟಿಸ್ತಾರೆ ಹೇಳು, ಅಂತಾದ್ರಾಗ ನಿಮ್ಮ ಮನಿಯವ್ರೆ ಮುಂದೆ ನಿಂತು ಮುತ್ತು ಕಟ್ಟಿಸಿದ್ರು. ಇಷ್ಟಿದ್ದೂ ನೀನು ವಿಷ ಕುಡಿಬಾರ್ದಿತ್ತು' ಅಂತ ಬುದ್ಧಿವಾದ ಹೇಳಿದ್ರು. ಇದನ್ನೆಲ್ಲಾ ಕೇಳಿ ನಾನೇ ತಪ್ ಮಾಡಿದ್ನೇನೋ ಅಂತ ನನ್ನೊಳಗೆ ನಾನು ಅಂದುಕೊಂಡು ಏನೂ ಮಾತಾಡಾದೆ ಸುಮ್ನೆ ಕೇಳಿಸಿಕೊಂಡೆ. ಕಣ್ಣೀರು ಬಂದ್ವು, ಒರೆಸಿಕೊಂಡು ಸುಮ್ಮನೆ ಕೂತಿದ್ದೆ. ಅವರ ಮನೇಲೆ ರಾತ್ರಿ ಊಟ ಮಾಡಿದೆ.

ಆಗ ನಮ್ಮ ಮನೆ ಮುಂದೆ ಹಾಲಸ್ವಾಮಿ ಮಠ ಇತ್ತು. ಕ್ಯಾಂಪಿನವ್ರೆಲ್ಲಾ ಅಲ್ಲಿಗೆ ಭಜನೆ ಮಾಡಾಕ ಬರ್ತಿದ್ರು. ಹಂಗಾಗಿ ಮಕ್ಕುಮರಿ ಎಲ್ರೂ ಸೇರಿ ಗದ್ದಲ ಶುರುವಾಗಿತ್ತು. ಹಿರೇರು ಹಾಲಸ್ವಾಮಿ ತತ್ವಪದಗಳನ್ನ ಹಾಡ್ತಿದ್ರು. ಸಣ್ಣೋರು ತಾಳ ಹಾಕ್ತಾ ಹಿಂದೆ ಹೇಳ್ತಾ ಇದ್ರು. ನಾನು ಈ ಭಜನೆಯಲ್ಲಿ ಮನಸ್ಸಿಲ್ಲದ ಮನಸ್ಸಲ್ಲಿ ತಾಳ ಹಾಕ್ತಾ ಕೂತಕಂಡಿದ್ದೆ. ಆಗ 'ಯಾರಿಗೆ ಯಾರಿಲ್ಲ ಎರವಿನ ಸಂಸಾರ ನೀರ ಮೇಗಳ ಗುಳ್ಳೆ ನಿಜವಲ್ಲ ಹರಿಯೆ' ಎನ್ನುವ ಪದ ಹಾಡ್ತಿದ್ರು. ಈ ಭಜನಿ ಪದ ಕೇಳಿ ಇವ್ರು ನನ್ನನ್ನ ನೋಡೆ ಈ ಪದ ಹಾಡ್ತಾರೇನೋ ಅನ್ನಿಸ್ತು. ಈ ಪದದಲ್ಲಿರೋ ತತ್ವ ನನ್ನ ಜೀವನಕ್ಕೂ ಅನ್ವಯಿಸ್ತಿತ್ತು. ಆ ಪದ ಕೇಳ್ತಾ ಕೇಳ್ತಾ ನನ್ನ ಬದುಕೂ ಹಿಂಗಾ ಆತು ಅಂತ ನನ್ನೊಳಗ ನಾನೇ ಅನಕೊಂಡೆ. ನೊಂದುಕೊಂಡೆ. ಮನಸ್ಸಿನ್ಯಾಗ ಏನೇನೋ ಲೆಕ್ಕ ಹಾಕ್ತಾ ಇದ್ದೆ.

ಭಜನಿ ನಡೆಸಿಕೊಡ್ತಿದ್ದ ನರಸಿಂಹಮೂರ್ತಿ ಅಂತಿದ್ರು ಅವರ ಹತ್ರ ಹಿಂದಿನ ದಿನ ನಮ್ಮಯ್ಯ ಮಾತಾಡ್ತಾ...'ನೋಡಪ್ಪಾ ನನ ಮಗ ಜೋಗಮ್ಮ ಆಗ್ಯಾನ, ಹೆಣ್ಣು ಆಗಿದ್ರೆ ಗಂಡು ನೋಡಿ ಮದ್ವಿ ಮಾಡ್ಸಿ ಗಂಡನ ಮನೆಗೆ ಕಳಿಸ್ತಿದ್ವಿ, ಗಂಡು ಆಗಿದ್ರೆ ಹೆಣ್ಣು ತಂದು ಮದ್ವಿ ಮಾಡ್ತಿದ್ವಿ. ಇವ್ನು ಈಗ ಎರಡೂ ಅಲ್ಲ. ಇನ್ನು ಕುರುಡ ಕುಂಟ ಆಗಿದ್ರೆ ಕುಂದ್ರಿಸಿ ಕೂಳು ಹಾಕ್ತಿದ್ವಿ. ಇವನು ಎಲ್ಲದಕ್ಕೂ ತಪ್ಪಿ ಜೋಗಮ್ಮ ಆಗ್ಯಾನ, ಜೋಗಮ್ಮರು ಹೆಂಗ ಜೀವ್ನ ಮಾಡ್ತಾರೋ ಅಂಗ ಮಾಡ್ಲಿ. ನಮ್ಮ ಕಣ್ ಎದುರಿಗೆ ಮನೇಲಿ ಇರೋದು ಬ್ಯಾಡ. ಊರಾಡಿದ ಅಕ್ಕಿ ಜ್ವಾಳ ಎಲ್ಲಾ ಹಂಗೆ ಇಟ್ಟೇವಿ, ಅವನ್ನೆಲ್ಲಾ ಕೊಡ್ತಿವಿ, ನಾಳೆ ಶುಕ್ರವಾರ ಸೀರಿ ಕುಬುಸ ಎಲ್ಲಾನು ತರ್ತೀವಿ, ಪಡ್ಲಿಗಿ ತುಂಬಿಸ್ತಿವಿ ಎಲ್ಲಿಗಾರ ಹೋಗಿಬಿಡ್ಲಿ' ಅಂದ್ರಂತೆ. ಅದಕ್ಕ ನರಸಿಂಹಮೂರ್ತಿ 'ಶೆಟ್ರ ನೀವು ಹೇಳಾದು ಸರಿ ಐತಿ, ಆದ್ರ ಮಂಜ ಹೊರಗ ಹೋಗಿ ಏನ್ ಮಾಡ್ತಾನ? ಹೆಂಗ ಇರ್ತಾನ ನೆನಿಸಿಕಂಡ್ರ ಕಷ್ಟ ಆಕ್ಕಾತಿ. ಹೋಗ್ಲಿ ಬಿಡ್ರಿ. ದೇವಿ ಒಲದಾಳ ಆಕೀನ ಕಾಪಾಡ್ತಾಳ ಬಿಡು. ನೀವು ಅಷ್ಟು ಮಾಡ್ರಿ' ಅಂದ್ರಂತೆ.

ಆಗ ನರಸಿಂಹಮೂರ್ತಿ ಮತ್ತು ಕ್ಯಾಂಪಿನವ್ರು ಭಜನೆ ಮಧ್ಯದಲ್ಲೆ ನನ್ನ ಬಳಿ ನಮ್ಮ ಅಯ್ಯ ಹೇಳಿದ್ದನ್ನೆಲ್ಲಾ ಹೇಳಿ 'ಏನಪ್ಪಾ ಮಂಜು ನಿಮ್ಮಯ್ಯ ಹಿಂಗಂತಾರಲ್ಲ ಏನು ಮಾಡ್ತಿ?' ಅಂದ್ರು. ಆಗ ನನಗೆ ಅಳೂನೆ ಬಂತು. ಕಣ್ಣು ನೀರು ತುಂಬಿತು. ಹೊಟ್ಟೆಯೊಳಗ ಕಲಸಿದಂಗ ಆತು. ಬಾಯಿ ಕಟ್ಟಿತು. ಆದ್ರೂ ಗಟ್ಟಿ ಮನಸ್ಸು ಮಾಡಿ 'ನನ್ನ ಹುಟ್ಟಿಸಿದ ತಂದೆ ತಾಯಿನೆ ಮನೇಲೆ ಇಟ್ಕಳ್ಳಲ್ಲ ಅಂದ್ರ, ಇನ್ನೇನು ಮಾಡಾಕು ನೀವು ಏನು ತೀರ್ಮಾನ ಮಾಡ್ತೀರೋ ಅಂಗ ಮಾಡ್ತೀನಿ' ಅಂದೆ. ಮನೇಲಿ ಇಷ್ಟು ಬೇಸರ ಆದಮೇಲೆ ಇಲ್ಲಿರೋದೆ ಬೇಡ ಅನ್ನಂಗಾಗಿತ್ತು. ಮನೆಯವರ ರೀತಿ ನೀತಿ ನೋಡಿ ನನ್ನಿಂದ ಮನೆಯವರಿಗೂ, ಮನೆಯವರಿಂದ ನನಗೂ ಆಗೋ ಕಷ್ಟಕ್ಕಿಂತ ಬೇರೆ ಆಗೋದೆ ಒಳ್ಳೇದನ್ನಿಸ್ತು. ಇದರಿಂದಾಗಿ ನಾನೂ ಆಗ್ಲೆ ನನ್ನ ಪಾಡಿಗೆ ನನ್ನ ಬಿಟ್ರ ಸಾಕು ಅನ್ನೋ ಸ್ಥಿತಿಗೆ ಬಂದಿದ್ದೆ. ಆದ್ರೂನೂ ತಡಕಳ್ಳಾಕ ಆಗವಲ್ದು. ಮನಿ ಮಂದಿ

ನನ್ನ ಕತ್ತು ಹಿಡದು ಹೊರಗ ದಬ್ಬೋ ತರ ಅನ್ನಿಸ್ತು. ಎದಿ ಭಾರ ಆಗಿ ದುಃಖದ ಕಟ್ಟೆ ಒಡೆಯೋ ಅಂಗ ಆಗಿತ್ತು. ಕಣ್ಣಾಗ ನೀರು ಬರ್ತಾನೆ ಇದ್ವು. ಆದ್ರೂ ಏನೂ ಮಾಡಂಗ ಇರ್ಲಿಲ್ಲ. ಎಲ್ಲವನ್ನೂ ತಡಕಂಡು ಮುಂದೆಂಗೋ.. ನೋಡಾನು ದೇವಿ ಅದಾಳ ಅನ್ನೋ ಭಂಡ ಧೈರ್ಯ ಬಂತು.

ಅವತ್ತು ಶುಕ್ರವಾರ. ನಾನು ಉಂಡುಟ್ಟು ಆಡಿ ಬೆಳೆದ ಮನಿ, ತಂದಿ ತಾಯಿ ತಮ್ಮ ತಂಗಿ ಎಲ್ಲರನ್ನೂ ಬಿಟ್ಟು ಹೋಗೋಕೆ ರಡಿ ಆಗೋ ದಿನ. ಇಂಥ ದಿನ ಬರುತ್ತೆ ಅಂತ ಕನಸಲ್ಲೂ ಅನಕಂಡಿರಲಿಲ್ಲ. ಒಂದು ಕಾಟನ್ ಸೀರೆ ತಗಂಡು ಬಂದು, ಪಡ್ಲಿಗಿ ತುಂಬ್ಸಿ ಪೂಜೆಗೀಜೆ ಮಾಡಿ ಮರುದಿನ ಶನಿವಾರ ಕಳಿಸೋಕೆ ಎಲ್ಲಾ ತಯಾರಿ ಮಾಡಿದ್ರು. ನಮ್ಮಮ್ಮನಿಗೆ ನನ್ನ ಕಳಿಸಾಕ ಇಷ್ಟ ಇಲ್ಲ, ಆದ್ರ ಅಯ್ಯನ ಮಾತು ಮೀರಂಗಿಲ್ಲ. ಅಮ್ಮನ ಕಣ್ಣಾಗೂ ನೀರು ಬರ್ತಿರೋದನ್ನ ನಾನು ನೋಡಿದೆ. ಎದಿಯಾಗ ದುಃಖ ತುಂಬಿಕಂಡು ಅಮ್ಮ ಎಲ್ಲಾನು ತಯಾರಿ ಮಾಡ್ತಾ ಇದ್ರು. ನಮ್ಮಯ್ಯ ಡಿಸೈಡ್ ಮಾಡಿಬಿಟ್ಟಾತಿ. ನಾನು ಇರಂಗಿಲ್ಲ ಅಂತ. ಅವರು ಏನೇನೋ ಗೊಣಗಿಕೊಳ್ತಾ ಅತ್ತಿಂದಿತ್ತ ಓಡಾಡ್ತಾ ಇದ್ರು. ಅವರಿಗೂ ಒಳಗೇ ದುಃಖ ಇದ್ದಂಗಿತ್ತು. ಆದ್ರ ಅದನ್ನ ಹೊರಾಗ ತೋರ್ಸೋ ಹಂಗಿರಲಿಲ್ಲ. ಆಗ ಅಯ್ಯ ಅನಕಂಡಂಗೆ ಎಲ್ಲಾನು ನಡೀತು. ಸೀರಿ ಉಡಿಸಿ, ಗದ್ದಿಗಿ ಹಾಸಿ ಪೂಜೆ ಮಾಡಿದ್ರು. ಎಡಿ ಇಟ್ರು. ಸಿಹಿಅಡಿಗೆ ಮಾಡಿದ್ರು. ಉಂಡೆ. ಅವತ್ತೇಕೋ ಸಿಹಿ ಅಡುಗೆ ವಿಷದ ಹಂಗೆ ಅನ್ನಿಸಿ ಅರ್ಧಕ್ಕೆ ಕೈ ತೊಳಕೊಂಡೆ. ಯಾರೂ ಹೊಟ್ಟೆ ತುಂಬಾ ಉಣ್ಣು ಅಂತ ಬಲವಂತ ಮಾಡಲಿಲ್ಲ. ಪ್ರತಿ ಬಾರಿ ‘ಹೊಟ್ಟೆತುಂಬಾ ಉಣ್ಣು, ಬೆಳಿಯೋ ಮಕ್ಳು ಜಾಸ್ತಿ ಉಣ್ಣಬೇಕು’ ಅಂತ ಪೀಡಿಸ್ತಿದ್ದ ಅಮ್ಮ ಇವತ್ತು ಏನನ್ನೂ ಹೇಳಲಾಗದೆ ಸುಮ್ಮನೆ ಇದ್ರು. ಮನೆಯಲ್ಲಿ ಒಂಥರಾ ಸಾವಿನ ಸಂಕಟ ತುಂಬಿದಂಗಿತ್ತು. ಪಡ್ಲಿಗಿನೆಲ್ಲಾ ತಗಂಡೆ, ಉಟ್ಟ ಸೀರಿ ಜತಿಗೆ ಒಂದು ಸೀರೆ ತಗಂಡು ಬಸ್ ಸ್ಟಾಂಡಿಗೆ ಬಂದೀನಿ, ಎಲ್ಲಿಗೆ ಹೋಗಾಕು ಅನ್ನಾದೊ ದಿಕ್ಕು ತೋಚದಂಗ ಆಗ್ಯಾತಿ. ಕಣ್ಣಲ್ಲಿ ನೀರು ಬಳಬಳ ಅಂತ ಇಳಿತಾವ, ದುಃಖ ತಡಿಯಾಕ ಆಗವಲ್ದು. ಯಾರು ಇಲ್ಲದ ಅನಾಥೆ ಅಂತ ಅನ್ನಿಸಿತು. ನಮ್ಮ ಅಯ್ಯ ಬಸ್‌ಸ್ಟಾಂಡ್ ತನಕ ಬಂದಾತಿ, ಎಲ್ಲಿಗೋಗ್ತಿ ಮಂಜು ಅಂತಾನೂ ಕೇಳಲಿಲ್ಲ. ಅಯ್ಯಂಗೂ ಒಳಗೆ ದುಃಖ. ಮಾತಾಡಿದ್ರೆ ಗಂಟಲು ಕಟ್ಟಿ ದುಃಖ ಬರೋಹಂಗಿತ್ತು. ಹಂಗಾಗಿ ಒಂದೂ ಮಾತೂ ಆಡಲಿಲ್ಲ. ಹಾಗೆ ವಾಪಸ್ ಮನೆಗೋದ್ರು.

ದಾವಣಗೆರೆ ಆಸ್ಪತ್ರೆಲಿ ಪರಿಚಯ ಆಗಿದ್ದ ರಾಧಮ್ಮ ಅವರ ಮನೆಗೆ ಹೋದೆ. ನಡೆದದ್ದನ್ನೆಲ್ಲಾ ಹೇಳಿದೆ. ಆಯ್ತು ಇಲ್ಲಿರು ನೋಡ್ಡೋಣ ಅಂತಂದ್ರು. ಅಷ್ಟು ಮಾತು ನನಗೆ ಆಸರೆಯಾಯ್ತು. ಒಂದೆರಡು ದಿನ ಏನೇನೋ ಯೋಚನೆ ಮಾಡ್ತಾ ಸುಮ್ನೆ ಕಾಲ ಕಳದೆ. ಮಂಗಳವಾರ ಬಂತು ರಾಧಮ್ಮರ ಮನೆ ಹತ್ರ ಉಚ್ಚೆಂಗೆಲ್ಲಮ್ಮನ ದೇವಸ್ಥಾನವಿತ್ತು. ಈ ದೇವಸ್ಥಾನದಲ್ಲಿ ಒಬ್ಬ ಅಜ್ಜಿ ಪೂಜೆ ಮಾಡಿಕಂಡಿತ್ತು. ರಾಧಮ್ಮ ಆ ಅಜ್ಜಿಗೆ ಪರಿಚಯ ಮಾಡಿಸಿದ್ರು. ನಾನು ಆ ಅಜ್ಜಿ ಜೊತೆ ಮಾತಾಡ್ತಾ ಕೂತೆ. ಅಜ್ಜಿ 'ಮಂಜು ಗುಡಿನೆಲ್ಲಾ ನೆಲ ತೊಳಕೊಂಡು ಬಾ' ಅಂತ ಹೇಳಿದ್ಲು. ನಾ ಎಲ್ಲಾ ನೆಲ ವರೆಸಿ ಸ್ವಚ್ಛ ಮಾಡಿದೆ. ದೇವರ ಸಾಮಗ್ರಿನೆಲ್ಲ ತಿಕ್ಕು ಅಂತ ಹೇಳಿದಳು. ಹಾಗೆ ಝಳ ಝಳಾ ಅನ್ನಂಗ ದೇವರ ಸಾಮಗ್ರಿನೆಲ್ಲ ತಿಕ್ಕಿ ತೊಳದು ಇಟ್ಟೆ. ಮನೆಯವರು ಅಜ್ಜಿಯನ್ನು ಸರಿಯಾಗಿ ನೋಡಿಕೊಳ್ತಿರಲಿಲ್ಲ. ಅಂತದ್ರಲ್ಲಿ ಆ ಅಜ್ಜಿ ನೆಚ್ಚಿಕೊಂಡು ನಾನು ಬಂದದ್ದು ಮನೆಯವರಿಗೆ ಹಿಡಿಸಿರಲಿಲ್ಲ. ಆ ಅಜ್ಜಿಗೆ ಮನೆಯವ್ರು ಕೊಟ್ಟ ಊಟದಲ್ಲೆ ಒಂದಷ್ಟು ನನಗೂ ಕೊಡ್ತಿದ್ಲು. ಅಜ್ಜಿ ನನ್ನನ್ನ ಕಣ್ಣಿಟ್ಟು ಕಾಯ್ತಿದ್ಲು. ಮನಿ ಬಿಟ್ಟು ಹೊರಗಡೆ ಎಲ್ಲೂ ಹೋಗಂಗಿರ್ಲಿಲ್ಲ. ಯಾರ ಹತ್ರನೂ ಮಾತಾಡಂಗಿರ್ಲಿಲ್ಲ. ಹಂಗ ಮಾಡಿದ್ರೆ ಬೈತಿದ್ಲು. ಮನೆಮಠ ಬಿಟ್ಟು ಎಲ್ಲಿಂದಲೋ ಬಂದುಬಿಡ್ತಾವ, ಒಂದ್ ಕಡೆಯಾದ್ರೂ ನೆಟ್ಟಗೆ ಇರಲ್ಲ ಅಂತೆಲ್ಲಾ ಬೈತಿತ್ತು. ನನಗೆ ಬೇರೆ ದಿಕ್ಕಿಲ್ಲದ ಕಾರಣ ಏನೇ ಬೈದರೂ ಎಲ್ಲಕ್ಕೂ ಸುಮ್ನಿರ್ತಿದ್ದೆ.

ರಾಧಮ್ಮ ಅವರ ಗಂಡ ಕೆ.ಇ.ಬಿನಲ್ಲಿ ಕೆಲಸ ಮಾಡ್ತಿದ್ರು. ಆವಾಗಾವಾಗ ಅವರ ಮನೇಲೆ ಉಣ್ಣಾದು ತಿನ್ನಾದು, ಟೀ ಕುಡಿಯಾದು ಮಾಡ್ತಿದ್ದೆ. ಅವರ ಮನೇಲಿ ಟಿ.ವಿ ಇತ್ತು. ಹಂಗಾಗಿ ಯಾವಾಗ್ಲೂ ಅಲ್ಲಿ ಟಿ.ವಿ ನೋಡ್ತಾ ರಾಧಮ್ಮನ ಜತೆ ಮಾತಾಡ್ತಾ ಕಾಲ ಕಳೀತಿದ್ದೆ. ನಾನು ಅಜ್ಜಿ ಮನೇಲಿದ್ರೂ ರಾಧಕ್ಕರ ಮನಿಯಾಗೆ ಹೆಚ್ಚು ಇರ್ತಿದ್ದೆ. ಆ ಅಜ್ಜಿ ಕೊಡುವ ಕಷ್ಟನೆಲ್ಲಾ ಅವರತ್ರ ಹೇಳಿಕೊಳ್ತಿದ್ದೆ. ಅವರ ಮನೇಲಿ ಒಂದು ವಾಚು ಇತ್ತು, ನನಿಗೆ ಆ ವಾಚಿನ ಮೇಲೆ ಆಸೆಯಾಯ್ತು. ಹಿಂಗಾಗಿ ಆ ವಾಚನ್ನ ಒಂದಿನ ಕದ್ದು ಬಚ್ಚಿಟ್ಕೊಂಡಿದ್ದೆ. ಮರುದಿವ್ಸ ಅವರು ವಾಚು ಎಲ್ಲೋ ಕಳೆದೋಗಿದೆ, ಇಲ್ಲ ಅಂತ ಹುಡುಕಾಡ್ತಿದ್ರು. ನಾನು ಹೇಳಲಿಲ್ಲ. ಮೂರ್ನಾಲ್ಕು ದಿನ ಪೇಚಾಡಿದ್ರು. ಅವರವರೆ ಮಾತಾಡ್ತಾ ವಾಚ್ ಯಾರು ಕದ್ದಾರೆ ಪತ್ತೆ ಹಚ್ಚೋಕೆ ಕಂಪ್ಲೇಂಟ್ ಕೊಡ್ತೀವಿ, ದೇವ್ರತ್ರ ಕೇಳಿಸ್ಕಂಡು ಬರ್ತೀವಿ ಅಂತ ಮಾತಾಡ್ತಿದ್ರು. ಇದನ್ನ ಕೇಳಿ ನನಿಗೆ ಭಯ ಆಯ್ತು. ಒಳಗೊಳಗೆ ಬೆವರಿದೆ. ತಪ್ ಮಾಡಿದೆ ಅನ್ನಿಸ್ತು. ಕೊಟ್ ಬಿಡಾಣ...ಆದ್ರೆ ನಾನೆ ಕದ್ದಿದ್ದು ಅಂತ ಗೊತ್ತಾಗಬಾರದು ಅಂತ ಪ್ಲಾನ್ ಮಾಡಿ ಮಧ್ಯರಾತ್ರಿಲಿ ಯಾರಿಗೂ ಕಾಣದಂಗೆ ಅವರ ಮನೆ ಬಾಗಲಲ್ಲಿ ಇಟ್ಟುಬಂದೆ. ಹಂಗಾಗಿ ನಾನು ಕದ್ದಿರೋದು ಅವರಿಗೆ ಗೊತ್ತಾಗ್ಲಿಲ್ಲ.

ರಾಧಮ್ಮರು ನನ್ನ ಪಜೀತಿ ಕಷ್ಟ ನೋಡಿ, ನೀನೆ ಸ್ವಂತ ಬಾಡಿಗಿ ಮನಿ ಮಾಡಿಕಂಡು ಯಾಕ ಇರಬಾರದು? ಹೆಂಗೋ ಊರಾಡಿಕೊಂಡು ಬಂದ್ರ ಕಳುಕಡಿ, ಸಂತೆಗೆ ಹೋದ್ರ ತರಕಾರಿ, ಅಂಗಡೀಗೋದ್ರೆ ಖರ್ಚಿಗೆ ದುಡ್ಡು ಸಿಗುತ್ತೆ. ಹೆಂಗೋ ಯಾರ ಹಂಗಿಲ್ದೇ ಜೀವ್ನ ಮಾಡಬಹುದು ಅಂತ ಹೇಳಿದ್ರು. ಅವರ ಮಾತು ನನಗೆ ಹಿಡಿಸಿತು. ಯಾರ ಹಂಗಿಲ್ದೇ ಒಬ್ಬೇ ಇದ್ರೆ ನನ್ನ ಇಷ್ಟದಂಗೆ ಇರಬಹುದು ಅನ್ನಿಸ್ತು. ಜಾಲಿ ನಗರದಲ್ಲಿ ಮನೆ ಸೋವಿ ಸಿಕ್ತಾವ ಅಂತ ಅವರ ತಂಗೀನ ವಿಚಾರಿಸಿ ನನಗೊಂದು ಬಾಡಿಗೆ ಮನೆ ಕೊಡಿಸಿದ್ರು. ತಿಂಗಳಿಗೆ ಐವತ್ತು ರೂಪಾಯಿಯಂಗೆ ಒಂದು ಮನೆ ಸಿಕ್ತು. ರಾಧಮ್ಮನೆ ಹಳೆ ಸ್ಟೌವು, ತಟ್ಟೆ, ತಂಬಿಗಿ, ಲೋಟ, ಒಂದು ಹಾಸಿಗಿ, ಒಂದು ದಿಂಬು, ಒದಕೊಳ್ಳೋಕೊಂದು ದುಪ್ಪಡಿ ಎಲ್ಲಾನು ಕೊಟ್ರು. ಹೆಂಗೋ ಪಡ್ಲಿಗಿ ಐತಿ ಟೈಮು ಬರೋತನಕ ಜೀವನ ಮಾಡು ಅಂತೇಳಿ ಅವರ ತಂಗಿ ಜತೆ ಕಳಿಸಿಕೊಟ್ರು. ಆಗ ನನ್ನದೆ ಮನೆಯಲ್ಲಿ ನನ್ನದೆ ಹೊಸ ಜೀವನ ಆರಂಭ ಆಯ್ತು.

### ಮಂಜಮ್ಮ ಜೋಗತಿ



ಮಂಜಮ್ಮ ಜೋಗತಿ ಅವರು ಕರ್ನಾಟಕದ ಜಾನಪದ ಕಲಾವಿದೆ ಹಾಗೂ ಮಂಗಳಮುಖಿ ಸಮುದಾಯದ ಪ್ರಬಲ ಧ್ವನಿ. ಇವರ ಜೀವನದ ಪಯಣ ಮತ್ತು ಸಾಧನೆ ನಿಜಕ್ಕೂ ಸ್ಫೂರ್ತಿದಾಯಕ. ಜಾನಪದ ಕಲೆಯಾದ 'ಜೋಗತಿ ನೃತ್ಯ'ವನ್ನು ಜೀವಂತವಾಗಿರಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ. 'ಜೋಗತಿ ನೃತ್ಯ'ವನ್ನು ರಾಷ್ಟ್ರಮಟ್ಟದಲ್ಲಿ ಇವರು ಗುರುತಿಸುವಂತೆ ಮಾಡಿದರು. ತಲೆ ಮೇಲೆ ಮಡಕೆ ಇಟ್ಟುಕೊಂಡು ಪ್ರದರ್ಶಿಸುವ ಇವರ ನೃತ್ಯ ಅಪೂರ್ವವಾದುದು. ಭಾರತ ಸರಕಾರವು ಇವರ ಕಲಾ ಸೇವೆಯನ್ನು ಗುರುತಿಸಿ ದೇಶದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಪದ್ಮಶ್ರೀ' ನೀಡಿ ಗೌರವಿಸಿತು. ಕರ್ನಾಟಕ ಸರಕಾರದ ಜಾನಪದ ಅಕಾಡೆಮಿಯ ಮೊದಲ ಮಂಗಳಮುಖಿ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದು. ಕರ್ನಾಟಕ ಸರಕಾರವು ಇವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



**ಅರುಣ್ ಜೋಳದ ಕೂಡ್ಲಿಗಿ:** ಅರುಣ್ ಬಳ್ಳಾರಿ ಜಿಲ್ಲೆ ಕೊಟ್ಟೂರು ತಾಲೂಕಿನ ಜೋಳದಕೂಡ್ಲಿಗಿ ಗ್ರಾಮದವರು. ಕನ್ನಡ ವಿಶ್ವವಿದ್ಯಾಲಯದಲ್ಲಿ ಜಾನಪದ ಮತ್ತು ಕನ್ನಡ ಸಾಹಿತ್ಯ ಎರಡೂ ವಿಷಯಗಳ ಸ್ನಾತಕೋತ್ತರ ಪದವಿಯನ್ನೂ ಪಿಎಚ್.ಡಿ. ಮತ್ತು ಪೋಸ್ಟ್ ಡಾಕ್ಟರಲ್ ಉನ್ನತ ಸಂಶೋಧನೆಯನ್ನೂ ಪೂರೈಸಿದ್ದಾರೆ. ಈವರೆಗೆ ಹನ್ನೊಂದು ಕೃತಿಗಳನ್ನು ಪ್ರಕಟಿಸಿದ್ದಾರೆ. ಸಮಕಾಲೀನ ವಿದ್ಯಮಾನಗಳ ಬಗ್ಗೆ, ಜಾನಪದ ಕ್ಷೇತ್ರದ ಹೊಸ ಚಲನೆಗಳ ಬಗ್ಗೆ ನಿರಂತರವಾಗಿ ಬರೆಯುತ್ತಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಇವರು ಕಲಾವಿದರ ಪರವಾಗಿ, ಜನರ ಪರವಾಗಿ, ಮಾನವೀಯತೆಯ ಪರವಾಗಿ ಧ್ವನಿಗೂಡಿಸಿದವರು. ಸಂಡೂರು ಭೂ ಹೋರಾಟ, ಜಾನಪದ ಮುಖಾಮುಖಿ, ಜಾನಪದ ವರ್ತಮಾನ, ಗಂಟಿಚೋರ ಸಮುದಾಯ ಮೊದಲಾದ ಸಂಶೋಧನಾತ್ಮಕ ಕೃತಿಗಳನ್ನು ಇವರು ಬರೆದಿರುವರು. 'ಅವ್ವನ ಅಂಗನವಾಡಿ' ಇವರ ಕವನ ಸಂಕಲನ. 'ನಡುವೆ ಸುಳಿವ ಹೆಣ್ಣು' ಎಂಬ ಕೃತಿಯು ಜಾನಪದ ಕಲಾವಿದೆ ಮಂಜಮ್ಮ ಜೋಗತಿಯವರ ಆತ್ಮಕಥನದ ನಿರೂಪಣೆಯಾಗಿದೆ.

## ನವೀನ ಪದಗಳ ಅರ್ಥ

ಗೂಗಿ - ಗೂಬೆ. ಪಡ್ಲಿಗೆ - ಪೆಟ್ಟಿಗೆ. ಗದ್ದಿಗಿ - ಪೀಠ. ಕಳುಕಡಿ - ಸಿಪ್ಪೆ ಸಹಿತವಿರುವ ಧಾನ್ಯ. ತತ್ವಪದ - ತಾತ್ವಿಕ ಚಿಂತನೆಗಳಿಂದ ಕೂಡಿದ ಹಾಡು. ಸೋವಿ - ಕಡಿಮೆ ಬೆಲೆಯ. ದುಪ್ಪಡಿ - ಹೊದಿಕೆ.

## ವಿಶದೀಕರಣ

**ಊರಾಡಿದ ಅಕ್ಕಿ** - ಭತ್ತವನ್ನು ಸಾಂಪ್ರದಾಯಿಕ ರೀತಿಯಲ್ಲಿ ಒನಕೆಯಿಂದ ಕುಟ್ಟಿ ಅದರ ಸಿಪ್ಪೆ ಮತ್ತು ಹೊಟ್ಟನ್ನು ಬೇರ್ಪಡಿಸಿ ತೆಗೆದ ಅಕ್ಕಿ.

**ಮುತ್ತು ಕಟ್ಟಿಸು** - ಇದು ಜೋಗತಿಯರ ಆಚರಣೆಯಲ್ಲಿರುವ ಒಂದು ಪದ್ಧತಿ. ಮಂಗಳವಾರ ಅಥವಾ ಶುಕ್ರವಾರದ ದಿನದಂದು ಜೋಗತಿಯರು ತಾವು ಗುರುತಿಸಿದ ಜೋಗತಿಗೆ ಶಂಖಗಳನ್ನು ಪೋಣಿಸಿದ ಹಾರವನ್ನು ಹಾಕುತ್ತಾರೆ. ಇದಕ್ಕೆ ಮುತ್ತು ಕಟ್ಟುವುದು ಎನ್ನಲಾಗುತ್ತದೆ.

**ಜೋಗಮ್ಮ** - ಉತ್ತರ ಕರ್ನಾಟಕದಲ್ಲಿ ಎಲ್ಲಮ್ಮ ದೇವಿಗೆ ತಮ್ಮನ್ನು ಅರ್ಪಿಸಿಕೊಂಡ ಭಕ್ತರು.

## ಉತ್ತರಿಸಿರಿ

1. ಮಂಜುವಿಗೆ ತನ್ನ ಮನೆಯಲ್ಲಿ ಅನಾಥ ಪ್ರಜ್ಞೆ ಕಾಡಲು ಕಾರಣವೇನು ?
2. ಅಯ್ಯನು ಯಾವ ಕಾರಣದಿಂದ ಮಂಜುವಿನ ಮೇಲೆ ಮುನಿಸುಗೊಂಡಿದ್ದನು ?
3. ಮಂಜಮ್ಮನು ಮನೆ ಬಿಟ್ಟು ಹೋದುದೇಕೆ ?
4. ಮಂಜಮ್ಮನ ಬದುಕಿಗೆ ರಾಧಮ್ಮ ಹೇಗೆ ಆಸರೆಯಾದಳು ?

5. ತನ್ನಲ್ಲಿಗೆ ಬಂದ ಮಂಜಮ್ಮನನ್ನು ಅಜ್ಜಿ ಹೇಗೆ ನಡೆಸಿಕೊಂಡಳು ?

6. ತಾನು ತಪ್ಪು ಮಾಡಿದೆ ಎಂಬ ಅಪರಾಧಿಪ್ರಜ್ಞೆ ಮಂಜಮ್ಮನಿಗೆ ಮೂಡಿಬರಲು ಕಾರಣವೇನು?

## ಟಿಪ್ಪಣಿ ಬರೆಯಿರಿ

ಮಂಜಮ್ಮ ಜೋಗಮ್ಮಳಾಗಿ ಅನುಭವಿಸಿದ ಬವಣೆಗಳ ಕುರಿತು ಪಾಠದ ಹಿನ್ನೆಲೆಯಲ್ಲಿ ಟಿಪ್ಪಣಿ ಬರೆಯಿರಿ.

## ಪಟ್ಟಿ ತಯಾರಿ

ಮಂಗಳಮುಖಿಯರ ಬದುಕನ್ನು ಹಸನುಗೊಳಿಸಿ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಸರಕಾರವು ಜಾರಿಗೆ ತಂದ ಸೌಲಭ್ಯಗಳ ಕುರಿತು ಮಾಹಿತಿ ಸಂಗ್ರಹಿಸಿ ಪಟ್ಟಿ ತಯಾರಿಸಿರಿ.

## ವರದಿ ತಯಾರಿ

ಲಿಂಗ ಸಮಾನತೆ ಇರುವ ಸ್ವಸ್ಥ ಸಮಾಜದಲ್ಲಿ ತೃತೀಯ ಲಿಂಗಿಗಳ ಪರಿಗಣನೆ ಎಂಬ ವಿಷಯದ ಬಗ್ಗೆ ತರಗತಿಯಲ್ಲಿ ಚರ್ಚಾಗೋಷ್ಠಿ ನಡೆಸಿ ವರದಿಯನ್ನು ತಯಾರಿಸಿರಿ.

## ರೂಪ ಪರಿವರ್ತನೆ

**ಕೆಳಗೆ ನೀಡಲಾದ ಮಂಜಮ್ಮನ ಆತ್ಮಕಥೆಯನ್ನು ಜೀವನ ಚರಿತ್ರೆಯಾಗಿ ಪರಿವರ್ತಿಸಿರಿ.**

ನಾನು ಬೆಳಗ್ಗೆ ಯಥಾಪ್ರಕಾರ ಎದ್ದು ಕಸ ಬಳಿಯಾಕೆ ಕಸಬರಿಗೆ ತಗೊಂಡೆ. ದೊಡ್ಡ ತಂಗಿ ಬಂದು ಕಸಬರಿಗೆ ಕಸಕೊಂಡ್ಲು. ಹೊಸಿಲು ತೊಳಿಯೋಣ ಅಂತ ಹೋದ್ರೆ ಸಣ್ಣತಂಗಿ ಕೆಮ್ಮಣ್ಣಿನ ಬಟ್ಟಲ ಕಸಕೊಂಡ್ಲು. ನನ್ನ ಪಾಡಿಗೆ ನಾನು ಸ್ನಾನ ಮಾಡಿ ಪೂಜೆ ಮಾಡಿದೆ. ನನ್ನನ್ನ ಯಾರೂ ಮಾತಾಡಿಸದೆ ಇದ್ದದ್ದು ನೋಡಿ ಕ್ಯಾಂಪಿನ ಬೇರೆಯವರ ಮನೆಯಲ್ಲಿ ಊಟ ಮಾಡಿ ಸಂಜೆತನಕ ಓಡಾಡಿಕೊಂಡು ಕಳೆದೆ. ಇಳಿ ಸಂಜೆ ಕತ್ಲು ಆಗಾಕ ಬಂತು. ನನ್ನನ್ನ ಯಾವ ಊರು ಅಂತ ಯಾರೂ ಮಾತಾಡಿಸ್ಲಿಲ್ಲ. ನಾನೂ ಮುಂದೆ ಬಿದ್ದು ಯಾರನ್ನೂ ಮಾತಾಡ್ಸಾಕ ಹೋಗಲಿಲ್ಲ.

**ಕೆಳಗಿನ ಗದ್ಯಭಾಗವನ್ನು ಶಿಷ್ಟ ರೂಪಕ್ಕೆ ಪರಿವರ್ತಿಸಿರಿ**

ನಾನು ಬಂದಿದಿನಿ ಅನ್ನೋದನ್ನು ಕಡೆಗಣಿಸಿ ನನ್ನನ್ನು ಮುಖ ಕೊಟ್ಟು ನೋಡ್ಲಿಲ್ಲ. ಎಲ್ಲರೂ ಮೊದಲೆ ಮಾತನಾಡಿ ಕೊಂಡಂಗಿತ್ತು. ಅಥವಾ ಅಯ್ಯನೆ ಎಲ್ಲರಿಗೂ ಮಂಜ ಬಂದ್ರ ಮಾತಾಡಿಸಬೇಡಿ ಅಂತ ಹೇಳಿದ್ರು ಅನ್ಸುತ್ತೆ. ಹಿಂಗಾಗಿ ಏನೋ ಕಳಕಂಡಂಗ ಮನಿ ಬಿಕೋ ಅಂತಿತ್ತು. ಇದೇನು ನಮ್ಮ ಮನಿಗೆ ಬಂದೀನೋ... ಬ್ಯಾರೆ ಮನಿಗೆ ಬಂದೀನೋ ಅನ್ನೋತರ ಆಗಿತ್ತು.

**ಬಾಳ್ವೆ ಸ್ವೀಕಾರಕ್ಕಿದೆ; ನಿರಾಕರಣೆಗಲ್ಲ**

## ಘಟಕ ಮೌಲ್ಯಮಾಪನ

1. ತನ್ನ ಬಳಿಕ ಸೇನೆ ಮುನ್ನಡೆಸುವವರಾರು ಎಂಬ ಕೊರಗು ಇದ್ದದ್ದು ಯಾರಿಗೆ?
2. 'ಮಹರ' ಈ ಪದದ ಅರ್ಥವೇನು?
3. ಭಾರತದ ಮೊಟ್ಟಮೊದಲ ಸ್ವದೇಶಿ ವಿನ್ಯಾಸದ ಹೆಲಿಕಾಪ್ಟರ್ ಯಾವುದು?
4. 'ಧ್ರುವ' ಶತ್ರುಪಡೆಗಳ ನಿಗ್ರಹಕ್ಕೆ ಸಿದ್ಧವಾಗಿ, ಹೊಸ ರೂಪದಲ್ಲಿ ಭೂಸೇನೆಗೆ ಸೇರ್ಪಡೆಯಾದಾಗ ಆ ಹೆಲಿಕಾಪ್ಟರಿಗೆ ಕೊಟ್ಟ ಹೆಸರೇನು?
5. ಆನ್ನಿಯಲ್ಲಿ ನಿರೂಪಕನು ಬಹಳ ದಿನಗಳಿಂದ ಹೇಳಬೇಕೆಂದಿದ್ದ ಮಾತು ಯಾವುದು?
6. ಅನ್ನಿಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ತಾಯಿ ಆಕ್ಷೇಪವನ್ನು ಎತ್ತಿದಾಗ ನಿರೂಪಕನು ಏನೆಂದು ಉತ್ತರಿಸಿದನು?
7. ಅನ್ನಿಯ ಕುರಿತಾದಂತೆ ನಿರೂಪಕನ ತಾಯಿಯ ಅಭಿಪ್ರಾಯ ಬದಲಾಗಲು ಕಾರಣವಾದ ಸನ್ನಿವೇಶವನ್ನು ವಿವರಿಸಿರಿ.
8. 'ಅನ್ನಿ ಅನ್ನಪೂರ್ಣೆಯಾದಳು' ಕತೆಯಲ್ಲಿ ಬರುವ ಅನ್ನಿಯ ಪಾತ್ರಚಿತ್ರಣ ಮಾಡಿರಿ.
9. 'ಧ್ರುವ' ಹೆಲಿಕಾಪ್ಟರಿನ ವಿಶೇಷತೆಗಳು ಯಾವುವು?
10. ಎಚ್. ಎ. ಎಲ್. ಕಂಪೆನಿಯ ವೈಮಾನಿಕಾ ವಿಭಾಗದ ಮಹಿಳಾ ಅಧಿಕಾರಿಗಳ ಕೊಡುಗೆಗಳನ್ನು ವಿವರಿಸಿರಿ.
11. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ಮಾಡಿರಿ.
    ಸಿಡಿಮಿಡಿಗೊಳ್ಳು, ಮನಸೂರೆಗೊಳ್ಳು
12. ಮಂಜಮ್ಮ ಮನೆ ಬಿಟ್ಟು ಹೋಗಲು ಕಾರಣವೇನು ?
13. ಮನೆಯಿಂದ ಹೊರ ಬಂದ ಮಂಜಮ್ಮ ಪಟ್ಟ ಬವಣೆಗಳು ಯಾವುವು ?
14. ಮನೆಯಲ್ಲಿ ಮಂಜಮ್ಮನಿಗೆ ಏಕಾಂಗಿತನ ಕಾಡಲು ಕಾರಣವೇನು?
15. 'ನಡುವೆ ಸುಳಿವ ಹೆಣ್ಣು' ಎಂಬ ನಿರೂಪಿತ ಆತ್ಮಕಥೆಯನ್ನು ಬರೆದವರು ಯಾರು?

## ಘಟಕ – 4

# ಬದುಕು ಭದ್ರತೆ




ಯಾಂತ್ರಿಕ ಯುಗದಲ್ಲಿ ಸುರಕ್ಷತೆಗೆ ಮೊದಲ ಆದ್ಯತೆ. ಒಂದು ಕ್ಷಣದ ಅಜಾಗರೂಕತೆ ಬದುಕಿನ ಅತಂತ್ರತೆಗೆ ಕಾರಣವಾಗಬಹುದು. ಸುರಕ್ಷತೆ ಎಂದರೆ ಕೇವಲ ದೊಡ್ಡ ದುರಂತಗಳಿಂದ, ಗಾಯಗಳಿಂದ ತಪ್ಪಿಸಿಕೊಳ್ಳುವುದು ಮಾತ್ರವಲ್ಲ. ಇದು ಯಾವುದೇ ಅಪಾಯ, ಗಂಡಾಂತರ ಅಥವಾ ತೊಂದರೆಗಳಿಲ್ಲದೆ ಬದುಕುವ ಒಂದು ಸ್ಥಿತಿಯೂ ಹೌದು. ನವೀನ ತಂತ್ರಜ್ಞಾನಗಳು ಜೀವಚರಗಳನ್ನು ಬಲಿಪಶು ಮಾಡಿವೆ. ಇವುಗಳಿಂದ ಸುರಕ್ಷಿತವಾಗಿ ಪಾರಾಗುವುದೇ ಜಾಣತನ. ಜಿ.ಎಸ್. ಶಿವರುದ್ರಪ್ಪನವರ 'ನಿಂತು ಹೊರಡಿ' ಎಂಬ ಕವನವು ಧಾವಂತ ಜೀವನದ ದುರಂತಗಳಿಗೆ ಜೀವಂತ ಸಾಕ್ಷಿಯಾಗಿದೆ. ಬದುಕು ಮತ್ತು ಭದ್ರತೆ ಪರಸ್ಪರ ಹಾಸು ಹೊಕ್ಕಾಗಿರುವ ಎರಡು ಮೂಲಭೂತ ಅಂಶಗಳು. ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಾಮಾಜಿಕ ಸುರಕ್ಷತೆ ಮತ್ತು ಭದ್ರತೆಯು ನಿರಾತಂಕವಾದ ಬದುಕಿಗೆ ಪೂರಕವಾಗಿದೆ. ದೇಶ ರಕ್ಷಣೆ ಮಾಡುವ ಯೋಧರು ಮತ್ತು ಅವರ ಕುಟುಂಬದ ಬದುಕನ್ನು ಕಟ್ಟಿಕೊಂಡ ಚಿತ್ರಣವು 'ಕೂರ್ಗ್ ರೆಜಿಮೆಂಟ್' ಕತೆಯಲ್ಲಿ ಅನಾವರಣಗೊಂಡಿದೆ. ನಾಡು, ನುಡಿ, ಸಂಸ್ಕೃತಿ - ಈ ಮೂರು ಪದಗಳು ಯಾವುದೇ ಜನಾಂಗದ ಅಸ್ಮಿತೆಯ ಆಧಾರ ಸ್ತಂಭಗಳು. ಅವು ಒಂದನ್ನೊಂದು ಬಿಟ್ಟಿರಲಾರದ, ಪರಸ್ಪರ ಹೆಣೆದುಕೊಂಡ ಶಕ್ತಿಗಳಾಗಿವೆ. ನಾಡು ದೇಹವಾದರೆ, ನುಡಿ ಉಸಿರು ಮತ್ತು ಸಂಸ್ಕೃತಿ ಅದರ ಆತ್ಮವಾಗಿದೆ. ಈ ಮೂರರ ಅದ್ಭುತ ಸಂಗಮವನ್ನು ಕೆ. ಎಸ್. ನಿಸಾರ್ ಅಹಮದ್ ಅವರ 'ನಿತ್ಯೋತ್ಸವ' ಕವನದಲ್ಲಿ ಕಾಣಬಹುದು. ನಾಡು - ನುಡಿಯ ಗತವೈಭವವನ್ನು ಸ್ಮರಿಸುವುದರೊಂದಿಗೆ, ಅವುಗಳ ಸಂರಕ್ಷಣೆ ಮಾಡಿ ಸುಭದ್ರವಾಗಿ ಮುಂದಿನ ತಲೆಮಾರಿಗೆ ಹಸ್ತಾಂತರಿಸುವ ಜವಾಬ್ದಾರಿ ನಮ್ಮ ಮೇಲಿದೆ.

# ನಿಂತು ಹೊರಡಿ

ಜಿ. ಎಸ್. ಶಿವರುದ್ರಪ್ಪ







'Halt and proceed'
ನಿಂತು ಹೊರಡು, ನಿಂತು ಹೊರಡೋ ಅಣ್ಣ
ನಿಂತು ಹೊರಡು.
ವಿಸ್ತಾರವಾಗಿದೆ ರಸ್ತೆ, ಆದರಿದು ನಿನಗೊಬ್ಬನಿಗೆ
ಮೀಸಲಾಗಿಲ್ಲ. ನಿನ್ನಂತೆ ಸಾವಿರ ಮಂದಿ
ನಡೆಸುತ್ತಿದ್ದಾರೆ ವಾಹನಗಳನು.
ಹೊಸಕುದುರೆ, ಬಿಗಿಹಿಡಿಯುವುದು ಬಲುಕಷ್ಟ;
ಅಶ್ವಮೇಧಕ್ಕೆ ಹೊರಟವನಲ್ಲ ನೀನು; ಇದು
ನಗರದೊಳಗಿನ ರಸ್ತೆ, ಸರಿಯಾಗಿರಬೇಕು
ಒಳಗಿನ ವ್ಯವಸ್ಥೆ.

'Halt and proceed'-
ನೋಡಿದೆಯ, ಏನು ಬರೆದಿದೆ ಇಲ್ಲಿ,
ಹೆಬ್ಬೆಟ್ಟನೂ ಒತ್ತಲು ಬರದ ಜನವಿರುವ
ಈ ದೇಶದಲ್ಲಿ, ಅದೂ ಪರಭಾಷೆಯಲ್ಲಿ!
ಆದರೂ ಅಭ್ಯಾಸಬಲದಿಂದ ಅರ್ಥಗೊತ್ತಿದೆ ನಿನಗೆ:
'ನಿಂತು ಹೊರಡೋ ಅಣ್ಣ, ನಿಂತು ಹೊರಡೋ'.

ನಿನಗೆ ಗೊತ್ತೇನು ಇಂಥ ಹಲಗೆಯ ಕೆಳಗೆ
ಸ್ಥಳಪುರಾಣ?

ನಿಂತು ನಡೆಯದೆಯೆ ಹೇಗೋ ನುಗ್ಗಿ
ಯಾರ್ಯಾರೊ ಬಡಪಾಯಿಗಳು ಇಲ್ಲಿ ಬಿಟ್ಟಿರೊ ಪ್ರಾಣ.
ಅವರ ಪಾಡೆಲ್ಲವೂ ದಾಖಲಾಗಿರಬಹುದು
ಪೋಲೀಸುಖಾತೆಯಲಿ, ಮತ್ತೆ ಆಸ್ಪತ್ರೆಯಲಿ.

ಅಪಘಾತದಿಂದಾದ ರಕ್ತದ ಕಲೆಯ ಮಳೆ ತೊಳೆದು
ಬಿಸಿಲು ಒಣಗಿಸಿದನಂತರ ಬಂತು ಈ ಸ್ಥಳದಲ್ಲಿ
ಹಲಗೆ : Halt and proceed.
ನಿನಗೆ ಮಾತ್ರವೆ ಅಲ್ಲ, ಅವರಿವರ ಸಲುವಾಗಿಯಾದರೂ
ನೆನಪಿರಲಿ ಎಲ್ಲ ಕಡೆಯೂ ನಿನಗೆ ಈ
ನಗರ ಸೂಕ್ತ : Halt and proceed.



**ಜಿ. ಎಸ್. ಶಿವರುದ್ರಪ್ಪ :** ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ (೧೯೨೬ - ೨೦೧೩) ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ಜನಿಸಿದರು. ಮೈಸೂರಿನ ಮಹಾರಾಜ ಕಾಲೇಜು, ಹೈದ್ರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಅನಂತರ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ನಿವೃತ್ತರಾದರು. 'ಸೌಂದರ್ಯ ಸಮೀಕ್ಷೆ' ಎಂಬ ಅವರ ಸಂಶೋಧನ ಪ್ರಬಂಧಕ್ಕೆ ಪಿಎಚ್.ಡಿ. ಪದವಿ ಲಭಿಸಿತು. ಇವರು ನವೋದಯ ಮತ್ತು ನವ್ಯ ಪಂಥದ ಧೋರಣೆಗಳನ್ನು ಸಮನ್ವಯಗೊಳಿಸಿದ ಪ್ರಮುಖ ಕವಿ ಹಾಗೂ ವಿದ್ವಾಂಸರು. ಸಾಮಗಾನ, ಚೆಲುವು – ಒಲವು, ದೇವಶಿಲ್ಪ, ದೀಪದ ಹೆಜ್ಜೆ, ಕಾರ್ತೀಕ, ತೆರೆದ ದಾರಿ, ಪ್ರೀತಿಯಿಲ್ಲದ ಮೇಲೆ, ವ್ಯಕ್ತ – ಮಧ್ಯ ಮತ್ತು ಅಗ್ನಿ ಪರ್ವ (ಕವಿತಾ ಸಂಕಲನಗಳು); ಪರಿಶೀಲನ, ಗತಿಬಿಂಬ, ವಿಮರ್ಶೆಯ ಪೂರ್ವಪಶ್ಚಿಮ, ಕಾವ್ಯಾರ್ಥ ಚಿಂತನ (ವಿಮರ್ಶಾ ಕೃತಿಗಳು); ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ (ಪ್ರವಾಸಕಥನ) ಇವರ ಕೃತಿಗಳಾಗಿವೆ. ೧೯೯೨ ರಲ್ಲಿ ದಾವಣಗೆರೆಯಲ್ಲಿ ನಡೆದ ೬೧ ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರ 'ಕಾವ್ಯಾರ್ಥ -ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. ನಾಡೋಜ ಪ್ರಶಸ್ತಿ, ಪಂಪಪ್ರಶಸ್ತಿ, ನೃಪತುಂಗ ಪ್ರಶಸ್ತಿಗೆ ಭಾಜನರಾಗಿರುವ ಶಿವರುದ್ರಪ್ಪನವರನ್ನು ಕರ್ನಾಟಕ ಸರ್ಕಾರವು ೨೦೦೬ರಲ್ಲಿ 'ರಾಷ್ಟ್ರಕವಿ' ಎನ್ನುವ ಬಿರುದನ್ನು ನೀಡಿ ಗೌರವಿಸಿದೆ. 'ನಿಂತು ಹೊರಡಿ' ಎಂಬ ಈ ಕವನವನ್ನು ಜಿ. ಎಸ್. ಶಿವರುದ್ರಪ್ಪನವರ 'ನನ್ನ ನಿನ್ನ ನಡುವೆ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಪ್ರಸ್ತುತ ಕವಿತೆಯು ರಸ್ತೆ ಸುರಕ್ಷಾ ನಿಯಮಗಳ ಪಾಲನೆಯ ಅಗತ್ಯವನ್ನು ಸರಳವಾಗಿ ಮನವರಿಕೆ ಮಾಡಿಕೊಡುತ್ತದೆ.

## ನವೀನ ಪದಗಳ ಅರ್ಥ

ಖಾತೆ - ವಿಭಾಗ. ಬಡಪಾಯಿ - ಬಡವ. ಮೀಸಲು - ಕಾದಿರಿಸು. ಹಲಗೆ - ಫಲಕ.

## ವಿಶದೀಕರಣ

ಅಶ್ವಮೇಧ - ಅಶ್ವಮೇಧ ಯಾಗವು ಭಾರತೀಯ ಪರಂಪರೆಯಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಈ ಯಾಗದ ಮೂಲಕ ರಾಜನು ತನ್ನ ರಾಜ್ಯದ ಮೇಲೆ ತನ್ನ ಸಾರ್ವಭೌಮ ಅಧಿಕಾರವನ್ನು ಎಲ್ಲರಿಗೂ ತೋರಿಸಿಕೊಡುತ್ತಿದ್ದನು.

ಇದು ಸಾಮ್ರಾಜ್ಯಶಾಹಿ ಶಕ್ತಿಯ ಸಂಕೇತವಾಗಿತ್ತು. ಇಲ್ಲಿ ಕುದುರೆಯನ್ನು ಒಂದು ವರ್ಷದ ಕಾಲ ಅಲೆದಾಡಲು ಬಿಡಲಾಗುತ್ತದೆ. ಈ ಕುದುರೆಯು ಹಾದುಹೋಗುವ ಎಲ್ಲಾ ಪ್ರದೇಶಗಳು ರಾಜನ ನಿಯಂತ್ರಣಕ್ಕೆ ಬರುತ್ತವೆ. ಕುದುರೆಯ ಜೊತೆಯಲ್ಲಿರುವ ಯೋಧರನ್ನು ಯಾವುದೇ ಪ್ರತಿಸ್ಪರ್ಧಿಗಳು ಸವಾಲು ಮಾಡಬಹುದಾಗಿತ್ತು. ಯಾರೂ ಸವಾಲು ಮಾಡದಿದ್ದರೆ, ರಾಜನ ಅಧಿಕಾರವನ್ನು ಒಪ್ಪಿಕೊಂಡಂತೆ. ಒಂದು ವರ್ಷದ ನಂತರ ಕುದುರೆ ಸುರಕ್ಷಿತವಾಗಿ ರಾಜಧಾನಿಗೆ ಹಿಂತಿರುಗಿದ ನಂತರ, ಅದನ್ನು ಯಾಗದಲ್ಲಿ ಬಲಿಕೊಡಲಾಗುತ್ತಿತ್ತು ಮತ್ತು ರಾಜನನ್ನು ವಿಜಯಿ ದೊರೆ ಎಂದು ಘೋಷಿಸಲಾಗುತ್ತಿತ್ತು. ಕುದುರೆಯು ಶಕ್ತಿ ಮತ್ತು ಸಮೃದ್ಧಿಯ ಸಂಕೇತವಾಗಿದೆ. ಅಶ್ವಮೇಧ ಯಾಗವು ರಾಜ್ಯ ಮತ್ತು ಅದರ ಜನರ ಸಮೃದ್ಧಿಯ ಸಂಕೇತವೂ ಹೌದು.

## ಉತ್ತರಿಸಿರಿ

1. ಹೊಸ ಕುದುರೆ ಬಿಗಿಹಿಡಿಯುವುದು ಕಷ್ಟ – ಈ ಸಾಲು ಧ್ವನಿಸುವ ಅರ್ಥವೇನು?
2. 'Halt and proceed'- ಎಂಬ ಹಲಗೆಗಳನ್ನು ಸ್ಥಾಪಿಸಲು ಕಾರಣಗಳೇನು?
3. ಕವಿತೆಯಲ್ಲಿ ಪ್ರಯೋಗವಾದ 'ಅಶ್ವಮೇಧ' ಎಂಬ ಪದ ಏನನ್ನು ಸೂಚಿಸುತ್ತದೆ?
4. 'ನಿಂತು ಹೊರಡು, ನಿಂತು ಹೊರಡೋ ಅಣ್ಣ' ಎಂದು ವಾಹನ ಸವಾರರಿಗೆ ಕವಿ ಎಚ್ಚರಿಸಲು ಕಾರಣವೇನು?

## ಆಶಯ ಬರಹ

'ನಿಂತು ಹೊರಡಿ' ಕವನದ ಆಶಯವನ್ನು ಬರೆಯಿರಿ.

## ಟಿಪ್ಪಣಿ ಬರಹ

'ರಸ್ತೆ ಸಂಚಾರ ನಿಯಮಗಳನ್ನು ಅರಿತು ಪಾಲಿಸಬೇಕಾದುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ' – ಕವನದ ಆಧಾರದಲ್ಲಿ ಈ ಹೇಳಿಕೆಯನ್ನು ಸಮರ್ಥಿಸಿ ಟಿಪ್ಪಣಿ ಬರೆಯಿರಿ.

## ಮನವಿ ಪತ್ರ

'ನಮ್ಮೂರಿನ ರಸ್ತೆಗಳು ಅಪಘಾತಕ್ಕೆ ಆಹ್ವಾನ ನೀಡುವಂತಿವೆ' - ಇದರ ಸೂಕ್ತ ಪರಿಹಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳ ಗಮನಸೆಳೆಯಲು ಅಗತ್ಯವಾದ ಮನವಿ ಪತ್ರವನ್ನು ಸಿದ್ಧಪಡಿಸಿರಿ.

## ವರದಿ

ರಸ್ತೆ ಸುರಕ್ಷತೆಯ ಕುರಿತು ನಾವು ಎಚ್ಚರ ವಹಿಸಬೇಕಾದ ವಿಚಾರಗಳನ್ನು ತರಗತಿಯ ವಿಚಾರಗೋಷ್ಠಿಯಲ್ಲಿ ಚರ್ಚಿಸಿ ವರದಿ ತಯಾರಿಸಿರಿ.

## ಘೋಷಣಾ ವಾಕ್ಯ

ಇತ್ತೀಚೆಗೆ ರಸ್ತೆ ಅಪಘಾತಗಳು ಹೆಚ್ಚಾಗುತ್ತಿವೆ. ನಾಗರಿಕರಲ್ಲಿ ಈ ಕುರಿತು ಜಾಗೃತಿಯನ್ನು ಮೂಡಿಸುವ ಉದ್ದೇಶದಿಂದ ಮೆರವಣಿಗೆಯಲ್ಲಿ ಪ್ರದರ್ಶಿಸಲು ಅಗತ್ಯವಾದ ಘೋಷಣಾ ವಾಕ್ಯಗಳನ್ನು ಸಿದ್ಧಪಡಿಸಿರಿ.

## ಸಂಕೇತಗಳ ಅರ್ಥ

ರಸ್ತೆ ಸುರಕ್ಷತೆಯ ಕುರಿತು ಫಲಕದಲ್ಲಿ ಬಳಸುವ ಕೆಲವು ಚಿಹ್ನೆಗಳನ್ನು ಕೆಳಗೆ ನೀಡಲಾಗಿದೆ. ಅವುಗಳ ಅರ್ಥವನ್ನು ತಿಳಿಸಿರಿ.








## ಭಾಷಾಂತರ

**ಕೆಳಗೆ ನೀಡಲಾದ ವಾಕ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಿರಿ.**

- School Zone Drive Slow
- Restricted Area
- Horn Prohibited
- Keep distance

## ಸಂಸ್ಕೃತ – ತದ್ಭವ

**ಕೆಳಗಿನ ಪಟ್ಟಿಯನ್ನು ಪೂರ್ತಿಗೊಳಿಸಿರಿ.**

| ಸಂಸ್ಕೃತ | ತದ್ಭವ |
|---|---|
| ವಿಸ್ತಾರ | ಬಿತ್ತರ |
| ಪ್ರಾಣ | |
| ಫಲಕ | |
| ರಕ್ತ | |
| ಸಾವಿರ | |
| ಭಾಷಾ | |

# ಕೂರ್ಗ್ ರೆಜಿಮೆಂಟ್

ಮೇಜರ್ ಡಾ. ಕುಶ್ವಂತ್ ಕೋಳಿಬೈಲು



ಅವನ ಹೆಣದ ಮುಂದೆ ಕಾವೇರಿ ಮೌನವಾಗಿ ಕುಳಿತಿದ್ದಳು. ಅವನು ಬದುಕಿದ್ದಾಗ ಹೆಚ್ಚೇನು ಪ್ರಶ್ನೆಗಳನ್ನು ಕೇಳಿರಲಿಲ್ಲ. ಹೇಳಲು ಕೇಳಲು ಅವಳು ಇಡೀ ಜೀವನವೇ ಇದೆಯೆಂದುಕೊಂಡಿದ್ದಳು. ಬದುಕಿನ ಪ್ರಶ್ನೆಪತ್ರಿಕೆಗಳಿಗೆ ಅವಳು ಉತ್ತರ ಬರೆಯುವ ಮೊದಲೇ ಫಲಿತಾಂಶ ಘೋಷಿಸಿದ್ದ ವಿಧಿ ಅವಳನ್ನು ನೋಡಿ ತಣ್ಣಗೆ ನಕ್ಕಿತು. ಅವಳ ಬಳಿ ಅವನದೂ ಎಂದು ಅವನ ಹೆಣ ಸುಡುವಾಗ ಇದ್ದದು ಹೇಳದೇ ಉಳಿದ ಕನಸುಗಳು ಮಾತ್ರ. ಹುಟ್ಟುಹಬ್ಬಕ್ಕೆ ಬರಲಿಲ್ಲವೆಂದು ಅಂದು ಅತ್ತು ರಂಪಾಟ ಮಾಡಿದವಳು, ಇಂದು ಅವನೆಂದೆಂದೂ ಬರಲಾರನೆಂದು ಗೊತ್ತಿದ್ದರೂ ತುಟಿ ಎರಡು ಮಾಡಲಿಲ್ಲ. ಅವಳ ದುಃಖ ಗುಪ್ತಗಾಮಿನಿಯಾಗಿ ಹರಿಯುತ್ತಿತ್ತೆ ಹೊರತು ಕಣ್ಣೀರಾಗಿ ಧರೆಗಿಳಿಯಲಿಲ್ಲ.

ಆ ವರ್ಷ ಭಾಗಮಂಡಲದಲ್ಲಿ ಮಳೆ ಜೋರಾಗಿತ್ತು. ತ್ರಿವೇಣಿ ಸಂಗಮದ ಸೇತುವೆ ಎರಡು ವಾರ ನೀರಿನೊಳಗೆ ಮುಳುಗಿದ್ದು ಮತ್ತೆ ಮೇಲೆದ್ದು ಸುಧಾರಿಸಿಕೊಂಡಿತು. ಕಾವೇರಿಗೆ ಮಾತ್ರ ತಾನು ದುಃಖದ ಮಡುವಿನಿಂದ ಮೇಲೆ ಏಳಲು ಎಷ್ಟು ಸಮಯ ಬೇಕಾಗಬಹುದೆಂಬ ಅಂದಾಜು ಇರಲಿಲ್ಲ. ಊರ ಹಬ್ಬದ ನಂತರ ಗಂಡ ಮತ್ತೆ ಕಾಶ್ಮೀರಕ್ಕೆ ಹೊರಟು ನಿಂತಿದ್ದ. ಮೀಸೆ ಮೇಲಕ್ಕೆ ತಿರುವಿ ದೇವರ ಪಟಕ್ಕೆ ಅಕ್ಕಿ ಹಾಕಿ ಗದ್ದೆ ಬೈಲಿನ ನಡುವೆ ಸರಸರನೆ ಇಳಿದು ಹೋದ. ಅವನ ಹೆಗಲ ಮೇಲಿದ್ದ ಕಪ್ಪು ಟ್ರಂಕ್ ಮೇಲೆ ಬಿಳಿ ಪೈಂಟಿನಲ್ಲಿ ಬರೆದಿದ್ದ ಕೂರ್ಗ್ ರೆಜಿಮೆಂಟ್ ಕಾಣಿಸುವಷ್ಟು ಸಮಯ ಅವಳು ಅವನು ಹೋದ ದಾರಿಯನ್ನೇ ನೋಡುತ್ತಿದ್ದಳು. ಆರು ತಿಂಗಳ ನಂತರ ಹುತ್ತರಿ ಹಬ್ಬಕ್ಕೆ ಬರುತ್ತೇನೆಂದು ಹೋದವನು ಕೈಲು ಮುಹೂರ್ತಕ್ಕು ಮೊದಲು ಕಾಶ್ಮೀರದಿಂದ ಹೆಣವಾಗಿ ಬಂದಿದ್ದ. ಅತ್ತು ಮರೆಯಬಹುದಾದ ದುಃಖವಾಗಿದ್ದರೆ ಕಾವೇರಿ ಕಣ್ಣೀರು ಹಾಕಿ ಸಮಾಧಾನಿಸಿಕೊಳ್ಳುತ್ತಿದ್ದಳೇನೋ? ಆದರೆ, ಈ ತರಹದ ಆಘಾತಗಳಿಗೆ ಕಣ್ಣೀರಿನ ನಸೀಬಿರುವುದಿಲ್ಲ.

ಬಹುಶಃ ಊರಿನವರಿಗೆ ಒಬ್ಬ ಹೀರೋ ಬೇಕಾಗಿತ್ತು? ಭಾಷಣದಲ್ಲಿ ಪ್ರಸ್ತಾಪಿಸಲು, ರಸ್ತೆಗೆ ಹೆಸರಿಡಲು. ಮುಡಿಗೇರಿಸಿದ್ದ ಹೂವಿನಲ್ಲಿ ಸಂತೃಪ್ತಿ ಪಟ್ಟುಕೊಳ್ಳುವ ಹೆಣ್ಣಿಗೆ ಆ ರೀತಿಯ

ಆಸೆಗಳಿರಲಿಲ್ಲ. ಕೊನೆಗೊಂದು ದಿನ ಅವನ ಆ ಕಪ್ಪು ಟ್ರಂಕನ್ನು ಕೂರ್ಗ್ ರೆಜಿಮೆಂಟಿನವರು ಮನೆಗೆ ತಂದಿಟ್ಟರು. ಅವನು ಬದುಕಿದ್ದಾಗಲಂತೂ ಆದರೊಳಗೆ ಇಣುಕಿರದವಳಿಗೆ ಇಂದು ಅದನ್ನು ತೆರೆದು ನೋಡಬೇಕೆನಿಸಿತು. ಆದರೊಳಗೆ ಅಚ್ಚುಕಟ್ಟಾಗಿ ಜೋಡಿಸಿಟ್ಟ ಅವನ ಯೂನಿಫಾರ್ಮಿನಲ್ಲಿ ಇನ್ನೂ ಅವನ ಸುವಾಸನೆ ಇದ್ದಂತ್ತಿತ್ತು. ಅದರ ಪಕ್ಕದಲ್ಲಿ ಸಾಲಾಗಿಟ್ಟ ಮೆಡಲುಗಳು ಬಹುಶಃ ಹಿಮಗಡ್ಡೆಗಳ ಮೇಲೆ ತನ್ನ ಎಲುಬುಗಳನ್ನು ಸವೆಸಿದ್ದಕ್ಕೊ, ಯಾವದೋ ಕಾರ್ಯಾಚರಣೆಯ ಶೌರ್ಯಕ್ಕೊ ಸಿಕ್ಕಿರಬೇಕು. ಅವನಿಗಿಂತಲೂ ಹೆಚ್ಚು ಧೈರ್ಯ ಇಂದು ಕಾವೇರಿಗೆ ಬೇಕಾಗಿತ್ತು. ಜೀವನದ ಹೋರಾಟಗಳು ಯುದ್ಧಕ್ಕಿಂತ ಭೀಕರ. ಜನರೆಲ್ಲರೂ ಸಾವನ್ನು ಆಧಾರವಿಲ್ಲದೆ ದೂಷಿಸುತ್ತಾರೆ ಆದರೆ ಜೀವನ ಕೊಡುವಷ್ಟು ಹಿಂಸೆ ಬಹುಶಃ ಸಾವು ಕೊಡುವುದಿಲ್ಲ.

ಅವನ ಕಪ್ಪು ಟ್ರಂಕಿನ ಒಳಗಡೆ, ಮೂಲೆಯೊಂದರಲ್ಲಿ ಅವಳು ಮುಗುಳು ನಗುತ್ತಿದ್ದ ಭಾವಚಿತ್ರ ಅಂಟಿಸಿತ್ತು. ಹಳೆಯದ್ದು, ಸಂಬಂಧದ ಮಾತುಕತೆಯ ಸಮಯದಲ್ಲಿ ಅವನಿಗೆ ಕಳುಹಿಸಿದ್ದು. ಎಲ್ಲೋ ಮಡುಗಟ್ಟಿದ್ದ ದುಃಖದ ಕಟ್ಟೆ ಒಡೆಯುವ ಶಕ್ತಿ ನೋವಿಗಿಂತ ಜಾಸ್ತಿ ಅವನ ಸವಿ ನೆನಪುಗಳಿಗೆ ಇತ್ತೇನೋ?. ಕಾವೇರಿ ಕಣ್ಣೀರಾದಳು. ಟ್ರಂಕಿನೊಳಗೆ ಪಟ ಪಟ ಶಬ್ದ, ಅವಳ ಕಣ್ಣೀರ ಹನಿಗಳು ಬಹಳ ಅವಸರದಲ್ಲಿದ್ದಂತ್ತಿತ್ತು. ಅವಳನ್ನು ಅವಳೇ ಶಿಕ್ಷಿಸಿ ಕಂಗಾಲಾಗಿ ಬಿಡುತ್ತಿದ್ದಳೇನೊ ಆದರೆ ಅವಳನ್ನು ಪ್ರಪಾತಕ್ಕೆ ತಳ್ಳಿದ ದೇವರು ಜೊತೆಗೊಂದು ಹಗ್ಗವನ್ನೂ ಎಸೆದಿದ್ದ. ಅವಳ ಮಡಿಲಿನಲ್ಲಿ ಅವನ ಕುಡಿ ಉಸಿರಾಡುತ್ತಿದ್ದದ್ದು ಗೊತ್ತಾದಾಗ ಕಾವೇರಿಯ ಜೀವನದಲ್ಲಿ ಕಾವೇರಿ ನದಿಗಿರುವಂತೆಯೆ ಮತ್ತೊಂದು ನವಿರಾದ ತಿರುವು. ಮಗು ಕೈಗೆ ಬಂದ ನಂತರ ಅವನು ಇಲ್ಲದ ನೆನಪು ಕಮ್ಮಿಯಾಗುವುದೆಂದು ನೆಂಟರಿಷ್ಟರು ಅಭಿಪ್ರಾಯಪಟ್ಟರು, ಆದರೆ ಅವರಿಗೇನು ಗೊತ್ತು ಮಗು ಅಪ್ಪನ ಪಡಿಯಚ್ಚು. ಅವನೇ ಮತ್ತೆ ಹುಟ್ಟಿಬಂದಿರಬಹುದೆಂದು ಅನುಮಾನ ಬರುವಷ್ಟು ಸಾಮ್ಯತೆ.

ಅವನು ಇಲ್ಲದ ಜೀವನಕ್ಕೆ ತಾನು ಏನೆಂದು ಹೆಸರಿಡಲೆಂದು ಕಾವೇರಿ ಹಲವಾರು ಬಾರಿ ಯೋಚಿಸಿದ್ದಾಳೆ. ಅವನು ಇರಬೇಕಿತ್ತು ಕಡೇ ಪಕ್ಷ ಆರೋಗ್ಯ ಕೆಟ್ಟು ಹಾಸಿಗೆ ಹಿಡಿದಿದ್ದರೂ, ಅವನ ಕೆಮ್ಮಿನ ಶಬ್ದ ಆಡುಗೆ ಮನೆಗೆ ಕೇಳುತ್ತಿದ್ದರೆ ಕಾವೇರಿ ಅಲ್ಲಿ ನೆಮ್ಮದಿಯಾಗಿ ಮಸಾಲೆ ಜೋಡಿಸುತ್ತಿದ್ದಳೇನೊ. . . ಬಾಡೆಯಲ್ಲಿ ಮಗುವನ್ನು ಎತ್ತಿಕೊಂಡು ಊಟ ಮಾಡಿಸುವಾಗ ಮೂರು ತಲೆಮಾರಿನ ಹಿರಿಯರ ಭಾವಚಿತ್ರಗಳಲ್ಲಿಯೂ ಕೂರ್ಗ್ ರೆಜಿಮೆಂಟಿನ ಕುರುಹುಗಳಿವೆ. ಒಂದನೇ ಮಹಾಯುದ್ದದಿಂದ ಇಂದಿನವರೆಗೆ ಈ ಮನೆಯಲ್ಲಿ ಹುಟ್ಟಿದ ಗಂಡು ಮಕ್ಕಳನ್ನೆಲ್ಲ ತಾಯಂದಿರು ಕೂರ್ಗ್ ರೆಜಿಮೆಂಟಗೆ ಬರೆದುಕೊಟ್ಟಂತಿತ್ತು. ಆ ಮನೆಯ ಹೆಣ್ಣುಮಕ್ಕಳು ಗಂಡನಿಲ್ಲದೆ ಬದುಕಲು ಮಾಡಬೇಕಾಗಿದ್ದ ಸಂಘರ್ಷಕ್ಕಾಗಿ ಮೆಡಲುಗಳನ್ನು ಕೊಡುವುದಿದ್ದರೆ ರವಿಕೆಯ ಮೇಲೆ ಆಂಟಿಸಲು ಜಾಗವೇ ಸಾಲುತ್ತಿರಲಿಲ್ಲವೇನೋ?

ಮಗನನ್ನು ಶಾಲೆಗೆ ಕಳಿಸಿದ ನಂತರ ದುಃಖ ಮರೆಯಲು, ಇದ್ದ ಮೂರು ಎಕರೆ ತೋಟಕ್ಕೆ ಕಾವೇರಿ ಮೂವತ್ತು ಸುತ್ತು ಬಂದ ದಿನಗಳೂ ಇತ್ತು. ವರ್ಷ ಕಳೆದಂತೆ ಕಾಫಿ ಗಿಡದ ಜೊತೆಗೆ ಮಗನೂ ಎದೆ ಎತ್ತರಕ್ಕೆ ಬೆಳೆದದ್ದನ್ನು ನೋಡಿ ಸಂತೋಷ ಪಡಲೆಂದೆ ಕಾವೇರಿಯ ತಲೆಯಿಂದ ಒಂದೆರಡು ಬಿಳಿ ಕೂದಲು ಇಣುಕುವಂತಿತ್ತು. ಮಗನ ಮೇಲೆ ಕೂರ್ಗ್ ರೆಜಿಮೆಂಟಿಗಿಂತ ತನಗೇ ಜಾಸ್ತಿ ಹಕ್ಕಿದೆಯೆಂದು ಕಾವೇರಿ ನಂಬಿದ್ದರೂ ತನ್ನ ಮನೆಯಿರುವ ಸರ್ವೆ ನಂಬರ್ ಮುವ್ವತ್ತಮೂರರಲ್ಲಿದ್ದ ಮೂರು ಎಕರೆ ಜಾಗ ತನ್ನದೆಂದು ಸಾಧಿಸಲು ಕಾವೇರಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ನಾಡಕಚೇರಿ, ತಹಶೀಲ್ದಾರರ ಆಫೀಸಿನಲ್ಲಿ ನಾಲ್ಕು ತಲೆಮಾರಿನ ದಾಖಲೆ ಕೇಳುತ್ತಾರೆ.

ಪಹಣಿ, ನಕ್ಷೆ, ಪಟ್ಟೆದಾರರ ಮರಣ ಪತ್ರ ಹೀಗೆ ಒಂದು ತಂದಾಗ ಅವರಿಗೆ ಮತ್ತೊಂದು ನೆನಪಾಗುತ್ತದೆ. ಶ್ರೀಮಂತರ ಅಸೆಯನ್ನು ತಣಿಸಲು ಮತ್ತು ಬಡವರನ್ನು ದಣಿಸಲೆಂದೇ ಕಾನೂನುಗಳಿದ್ದಂತ್ತಿತ್ತು. ನಕ್ಷೆಯಲ್ಲಿ ಅವಳ ಜಾಗ ಕೂರುತ್ತಿಲ್ಲದ ಕಾರಣ ಬೇರೇನಾದರೂ ಪಕ್ಕಾ ದಾಖಲೆಗಳಿದೆಯಾ ಎಂದು ಕನ್ನಡ ಬಾರದ ಡಿಸಿ ಇವಳನ್ನು ಹರಕು-ಮುರುಕು ಭಾಷೆಯಲ್ಲಿ ಪ್ರಶ್ನಿಸಿದಳು. ಅದೇ ತೋಟದಲ್ಲಿ ಅವನ ದೇಹ ಯಾವ ಸಾಕ್ಷಿಯನ್ನು ಉಳಿಸದೆ ಮಣ್ಣಿನಲ್ಲಿ ಮಣ್ಣಾಗಿತ್ತು. ಅವನ ಉಸಿರು ಅದೇ ತೋಟದ ಗಾಳಿಯಲ್ಲಿ ಬೆರೆತ್ತಿದ್ದನ್ನು ಆರ್ ಟಿಸಿಯ ಯಾವ ಕಲಮ್ಮಿನಲ್ಲಿ ತುಂಬಿಸಬಹುದೆಂದು ಕಾವೇರಿ ಯೋಚಿಸಿದಳು.

ಅಪ್ಪದೇವರ ಬಳಿ ಹೋಗಿಲ್ಲವೆಂದು ಮಗ ದೇವರ ಫೋಟೋಗೆ ಕೈಮುಗಿಯುವುದನ್ನು ನಿಲ್ಲಿಸಿದಾಗ ಅವನಿಗೆ ಕೇವಲ ಏಳು ವರ್ಷ ವಯಸ್ಸು. ದೇವರ ಮೇಲೆ ನಂಬಿಕೆ ಹೋಗಲು ಅದು ಬಹಳ ಚಿಕ್ಕವಯಸ್ಸೆಂದು ಭಯ ಬಿದ್ದಳು ಕಾವೇರಿ. ಸಮಾಜವನ್ನು ಹತ್ತಿರದಿಂದ ನೋಡಿದರೆ ಜನರ ಮೇಲೆ ವಿಶ್ವಾಸ ಹೋಗುವುದೆಂಬ ಅವಳು ಮಗನಿಗೆ ಒಳ್ಳೆಯದನ್ನು ಮಾತ್ರ ತೋರಿಸುತ್ತಿದ್ದಳು. ಅವನ ತಲೆಹರಟೆ ಪ್ರಶ್ನೆಗಳಿಗೆ ಉತ್ತರವಿಲ್ಲದೆ ತಡಕಾಡುತ್ತಿದ್ದ ಕಾವೇರಿ ಬೆಚ್ಚಿ ಬಿದ್ದದ್ದು ಅವನು ತಾನು ದೇವರಾಗುವುದು ಹೇಗೆಂದು ಕೇಳಿದಾಗ. ಪರರಿಗಾಗಿ ಬದುಕಿದಾಗ ಮಾತ್ರ ದೇವರಾಗಬಹುದೆಂದು ಹೇಳಿ ಅವಳು ಲೋಕಕಲ್ಯಾಣಕ್ಕಾಗಿ ನದಿಯಾದ ಕಾವೇರಮ್ಮನನ್ನು ತೋರಿಸಿದಳು. ತದನಂತರ ಅವನು ಅಪ್ಪನ ಫೋಟಕ್ಕೆ ಮತ್ತು ತ್ರಿವೇಣಿ ಸಂಗಮದ ಸೇತುವೆ ದಾಟುವಾಗ ಕಾವೇರಮ್ಮನಿಗೆ ಬಿಟ್ಟರೆ ಬೇರೆಲ್ಲೂ ಕೈ ಮುಗಿಯಲಿಲ್ಲ.

ಮಗನ ಫೀಸು, ಹದಿಹರೆಯದ ಬೇಡಿಕೆಗಳನ್ನು ಈಡೇರಿಸಲು ಕಾವೇರಿಯ ಬೆವರು ಈಗ ಕಣ್ಣೀರಿಗಿಂತ ಜಾಸ್ತಿ ಹರಿಯುತ್ತಿತ್ತು. ಮಡಿಕೇರಿಯ ಮಿಲಿಟರಿ ಕ್ಯಾಂಟೀನಿನ ಕ್ಯೂನಲ್ಲಿ ನಿಂತಾಗಲೂ ಕಾವೇರಿಗೆ ಮಗನ ಭವಿಷ್ಯದ್ದೆ ಚಿಂತೆ. ಮಗ ಪಿಯುಸಿ ಪಾಸಾಗಲು ಸೈಕಲ್ ಹೊಡೆದಾಗ ಕಾವೇರಿಗೆ ಚಿಂತೆಯಾಯಿತು. ತನ್ನ ಮನೆಯ ಇತಿಹಾಸದ ಪುಟಗಳಲ್ಲಿ ಪಿಯುಸಿ ನಂತರ ಓದು ಬಿಟ್ಟು ಕೂರ್ಗ್ ರೆಜಿಮೆಂಟಿಗೆ ಹೋದವರು ಒಬ್ಬಿಬ್ಬರಲ್ಲ. ಕೂರ್ಗ್ ರೆಜಿಮೆಂಟಿನ ಮೇಲೇನೂ ಸಿಟ್ಟಿರಲಿಲ್ಲ ಕಾವೇರಿಗೆ. ಅಲ್ಲಿಂದ ಬರುವ ಪಿಂಚಣಿಯಲ್ಲಿ ಮೂರು ಹೊತ್ತಿನ ಊಟ ನಡೆಯುತ್ತಿತ್ತು. ಇನ್ನು ಅಲ್ಲಿಂದ ಪ್ರತಿವರ್ಷ ಬರುತ್ತಿದ್ದ ಇಂಗ್ಲಿಷಿನ ಪತ್ರಗಳಲ್ಲಿ ತನ್ನ ಗಂಡನ ಹೆಸರು ಬಿಟ್ಟರೆ ಅವಳಿಗೆ ಬೇರೇನೂ ಓದಲು ಬರುತ್ತಿರಲಿಲ್ಲ. ಮಿಲಿಟರಿ ಬಗ್ಗೆ ಅವನು ಬದುಕಿದ್ದಾಗಲೂ ಜಾಸ್ತಿ ತಿಳಿದಿರಲಿಲ್ಲ.ಅವಳಿಗೆ ಗೊತ್ತಿದ್ದದ್ದು ಇಷ್ಟೆ, ಕಾಶ್ಮೀರದ ಚಳಿ ಕೊಡಗಿಗಿಂತ ಬಲು ಭೀಕರವೆಂದಷ್ಟೆ!!. ಗಂಡನಿಲ್ಲದ ಹೆಣ್ಣಿನ ಬದುಕಿನ ಭೀಕರತೆಯ ಬಗ್ಗೆಯೂ ಕೂರ್ಗ್ ರೆಜಿಮೆಂಟಿನ ಮೀಸೆ ತಿರುವುವವರಿಗೆ ಹೇಳಬೇಕೆನಿಸಿತು.

ಮಗ ಕದ್ದು ಸಿಗರೇಟು ಸೇದಿ ಸಿಕ್ಕಿಬಿದ್ದಾಗ ಬಂದ ಸಿಟ್ಟಿಗಿಂತ ಜಾಸ್ತಿ ಸಿಟ್ಟು ಕಾವೇರಿಗೆ ಬಂದದ್ದು ಅವನು ಮಿಲಿಟರಿ ರಾಲಿಯಲ್ಲಿ ಓಡಿದ್ದಾಗ. ಕಡೇ ಪಕ್ಷ ಗ್ರಾಮ ಲೆಕ್ಕಿಗನಾಗಿದ್ದರೆ ನಿಂತಿರುವ ನೆಲದ ದಾಖಲೆ ಸರಿ ಮಾಡಬಹುದೆಂಬ ಸಣ್ಣ ಸ್ವಾರ್ಥ ಅವಳಲ್ಲಿತ್ತು. ಇದೊಂದು ಕುಟುಂಬದ ಕುಡಿ ಮನೆಗಾಗಿ ಬದುಕಲೆಂದು ಮನದಲ್ಲೆ ಕೂರ್ಗ್ ರೆಜಿಮೆಂಟಿಗೆ ಕ್ಷಮಾಪಣೆ ಕೇಳಿದಳು. ಒಂದು ಸೋಮವಾರ ಸಂತೆ ಮುಗಿಸಿ ಮಗ ಮನೆಗೆ ಬಂದಾಗ ಅವನ ಕಣ್ಣಲ್ಲಿ ಅದೆಂತಹದ್ದೋ ಹೊಳಪಿತ್ತು. ಕರುವನ್ನು ಹಗ್ಗ ಬಿಚ್ಚಿ ಬಿಟ್ಟಾಗ ಪುಟಿದೇಳುವಂತಹ ಉತ್ಸಾಹ ಅವನ ನಡೆಯಲ್ಲಿ. ಅವನು ಅಪ್ಪನಂತೆ ಮೀಸೆ ತಿರುವುದನ್ನು ನೋಡಿ ಇವನೇನು ಒಂದೇ ದಿನದಲ್ಲಿ ದೊಡ್ಡವನಾಗಿಬಿಟ್ಟನೆ? ಹೆಣ್ಣು ಮಕ್ಕಳು ಮೈನೆರೆಯುವಂತೆ ಎಂದು ಕಾವೇರಿ ಯೋಚಿಸಿದಳು.

ಮಗನ ರಕ್ತದಲ್ಲಿ ಹರಿಯುತ್ತಿರುವ ಆ ವಿಚಿತ್ರ ಸೆಳೆತ ಯಾವುದದು ತಾಯಿಯ ಕಣ್ಣಿಗೂ ಕಾಣಿಸದ್ದು?.. ಕೂರ್ಗ್ ರೆಜಿಮೆಂಟಿನವರ ಬಳಿಯಿರುವ ಮಾಯಾಜಾಲ ಯಾವುದದು ತಾಯಿಯ ಬಳಿಯಿಲ್ಲದ್ದು ಎಂದು ಯೋಚಿಸುತ್ತಾ ಕಾವೇರಿ ಹೂವಿನ ಗಿಡಕ್ಕೆ ನೀರು ಹಾಕುತ್ತಿದ್ದಳು. ಮಗ ಬಂದು ಅವಳ ಕಾಲಿಗೆ ಬಿದ್ದಾಗ ಅವನ ಜೇಬಿನಿಂದ ಹೊರಬಿದ್ದ ಕೂರ್ಗ್ ರೆಜಿಮೆಂಟಿನ ಪತ್ರ ಎಲ್ಲವನ್ನೂ ಹೇಳಿತು. ಅಪ್ಪನ ಟ್ರಂಕ್ ಮತ್ತೆ ನವವಧುವಿನಂತೆ ಸಿಂಗಾರಗೊಂಡಿತು. ಅಪ್ಪನ ಭಾವಚಿತ್ರಕ್ಕೆ ಅಕ್ಕಿ ಹಾಕಿ, ಹುತ್ತರಿಗೆ ಬರುತ್ತೇನೆಂದು ಗೂಡು ಬಿಟ್ಟ ಹಕ್ಕಿಯ ಹಾಗೆ ಗದ್ದೆ ಬೈಲಿನ ನಡುವೆ ಸರಸರನೆ ಇಳಿದು ಮಗ ಹೋಗುತ್ತಿದ್ದ. ಅವನ ಹೆಗಲ ಮೇಲಿದ್ದ ಕಪ್ಪು ಟ್ರಂಕ್ ಮೇಲೆ ಬಿಳಿ ಪೈಂಟಿನಲ್ಲಿ ಬರೆದಿದ್ದ ಕೂರ್ಗ್ ರೆಜಿಮೆಂಟ್ ಕಾಣಿಸುವಷ್ಟು ಸಮಯ ಅವಳು ಮಗ ಹೋದ ದಾರಿಯನ್ನೇ ನೋಡುತ್ತಿದ್ದಳು. ಮಗನ ಮತ್ತು ಮಣ್ಣಿನ ವಿಷಯದಲ್ಲಿ ಯಾವುದರ ಮೇಲೆ ತನಗೆ ಜಾಸ್ತಿ ಹಕ್ಕು ಇತ್ತೆಂದು ಯೋಚಿಸುತ್ತಾ ಕಾವೇರಿ ಜಗಲಿಗೊರಗಿದಳು.



**ಡಾಕ್ಟರ್ ಕುಶ್ವಂತ್ ಕೋಳಿಬೈಲು :** ಡಾಕ್ಟರ್ ಕುಶ್ವಂತ್ ಕೋಳಿಬೈಲು ಕೊಡಗಿನ ಭಾಗಮಂಡಲದಲ್ಲಿ ಜನಿಸಿದರು. ಮಂಗಳೂರಿನ ಫಾದರ್ ಮುಲ್ಲರ್ಸ್ ಕಾಲೇಜಿನಲ್ಲಿ ವೈದ್ಯಕೀಯ ಪದವಿಯನ್ನು ಗಳಿಸಿ, ನಂತರ ಸೈನ್ಯವನ್ನು ಸೇರಿ, ಆರ್ಮಿ ಮೆಡಿಕಲ್ ಕೋರ್ ವಿಭಾಗದಲ್ಲಿ ಭಡ್ತಿಯನ್ನು ಪಡೆದು ದೇಶ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಸೇನೆಯಲ್ಲಿ ನಿವೃತ್ತಿ ಪಡೆದ ನಂತರ ಪುಣೆಯಲ್ಲಿ ಪೀಡಿಯಾಟ್ರಿಶಿಯನ್ ಆಗಿ ಕೆಲಸ ನಿರ್ವಹಿಸಿದರು. ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಒಲವನ್ನು ತೋರಿದ ಇವರು ಮುತ್ತಿನ ಹಾರ (ಕವನ ಸಂಕಲನ), ಕೂರ್ಗ್ ರೆಜಿಮೆಂಟ್, ಕಾವೇರಿ ತೀರದ ಕಥೆಗಳು (ಕಥಾ ಸಂಕಲನ) ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಶ್ರೀಯುತರು ಒಬ್ಬರು ಹವ್ಯಾಸಿ ಅಂಕಣ ಬರಹಗಾರರಾಗಿಯೂ ಪ್ರಸಿದ್ಧರಾಗಿದ್ದಾರೆ. ಪ್ರಸ್ತುತ ಪಾಠಭಾಗವನ್ನು ಅವರ 'ಕೂರ್ಗ್ ರೆಜಿಮೆಂಟ್' ಎಂಬ ಕಥಾ ಸಂಕಲನದಿಂದ ಆರಿಸಲಾಗಿದೆ. ಶೌರ್ಯ ಮತ್ತು ಪ್ರಾಮಾಣಿಕತೆಗಳಿಗೆ ಹೆಸರು ಪಡೆದ ಕೂರ್ಗ್ ರೆಜಿಮೆಂಟಿನ ಕೊಡುಗೆ ಒಂದೆಡೆಯಾದರೆ, ಆ ಯೋಧರ ಕುಟುಂಬ ಅನುಭವಿಸುವ ಜೀವನ ಹೋರಾಟದ ಚಿತ್ರಣ ಈ ಕತೆಯಲ್ಲಿ ಮೂಡಿಬಂದಿದೆ.

## ನವೀನ ಪದಗಳ ಅರ್ಥ

ಗುಪ್ತಗಾಮಿನಿ - ಕಣ್ಣಿಗೆ ಕಾಣದಂತೆ ಹರಿಯುವ. ರಂಪಾಟ – ಹಟ. ನಸೀಬು - ಅದೃಷ್ಟ. ಮಡು - ಆಳವಾದ ನೀರು ನಿಂತ ಜಾಗ.

## ವಿರೋಧಾರ್ಥಕ ಪದಗಳು

ಸುವಾಸನೆ x ದುರ್ವಾಸನೆ

ಧೀರ x ಅಧೀರ

## ವಿಶದೀಕರಣ

### ಕೂರ್ಗ್ ರೆಜಿಮೆಂಟಿನ ಮಹತ್ವ

ಭಾರತೀಯ ಸೇನೆಯಲ್ಲಿ ಕೂರ್ಗ್ ರೆಜಿಮೆಂಟಿಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಯುದ್ಧಗಳಲ್ಲಿ ತಮ್ಮ ಅಸಾಧಾರಣ ಶೌರ್ಯ ಮತ್ತು ಸಮರ್ಪಣಾ ಮನೋಭಾವಕ್ಕೆ ಈ ರೆಜಿಮೆಂಟ್ ಹೆಸರುವಾಸಿಯಾಗಿದೆ.

ಚಾರಿತ್ರಿಕವಾಗಿ ನಡೆದ ಅನೇಕ ಯುದ್ಧಗಳಲ್ಲಿ ಪ್ರಮುಖ ಪಾತ್ರ ವಹಿಸಿ, ದೇಶದ ಗೌರವವನ್ನು ಎತ್ತಿ ಹಿಡಿದ ತಂಡವಿದು. ಕೂರ್ಗ್ ಸಮುದಾಯವು ಬಹಳ ಹಿಂದಿನಿಂದಲೂ ಒಂದು ಯೋಧ ಪರಂಪರೆಯನ್ನು ಸೃಷ್ಟಿಸುತ್ತಾ ಬಂದಿದೆ. ಮೊದಲ ಮತ್ತು ಎರಡನೆಯ ಮಹಾಯುದ್ಧಗಳು ಸೇರಿದಂತೆ ಭಾರತದ ರಕ್ಷಣಾ ಕಾರ್ಯಾಚರಣೆಗಳು ಮತ್ತು ಇತರ ಸೈನಿಕ ಕಾರ್ಯಾಚರಣೆಗಳಲ್ಲಿ ಈ ರೆಜಿಮೆಂಟಿನ ಕೊಡುಗೆ, ತ್ಯಾಗ ಹಾಗೂ ಬಲಿದಾನಗಳು ಚರಿತ್ರೆಯ ಪುಟಗಳಲ್ಲಿ ದಾಖಲಾಗಿವೆ. ಭಾರತೀಯ ಸೈನ್ಯದಲ್ಲಿ ಶೌರ್ಯ ಮತ್ತು ಪ್ರಾಮಾಣಿಕತೆಗೆ ಹೆಸರು ಪಡೆದ ತಂಡವಿದು.

## ಕೈಲ್ ಮಹೂರ್ತ

ಇದು ಕೊಡವರ ಸಾಂಪ್ರದಾಯಿಕ ಹಬ್ಬವಾಗಿದೆ. 'ಕೈಲ್' ಎಂದರೆ ಆಯುಧ. ಕೊಡಗಿನವರ ಸಂಪ್ರದಾಯದ ಪ್ರಕಾರ ಚಿನ್ನಾರ್ ತಿಂಗಳ 18ನೇ ತಾರೀಕಿನಂದು (ಸೆಪ್ಟೆಂಬರ್ ತಿಂಗಳು) ಈ ಹಬ್ಬ ನಡೆಯುತ್ತದೆ. ಬೇಸಾಯ ಮುಗಿದ ಬಳಿಕ ಬಿಡುವಿನ ವೇಳೆಯಲ್ಲಿ ಈ ಹಬ್ಬವನ್ನು ಕೊಡಗರು ಸಂಭ್ರಮದಿಂದ, ಸಂತೋಷದಿಂದ ಆಚರಿಸುತ್ತಾರೆ.

## ಹುತ್ತರಿ ಹಬ್ಬ

ಹುತ್ತರಿ ಹಬ್ಬವು ಕೊಡಗು ಜಿಲ್ಲೆಯ ಕೊಡವರು ಆಚರಿಸುವ ಪ್ರಮುಖ ಬೆಳೆಕೊಯ್ಲು ಹಬ್ಬವಾಗಿದೆ. ಇದು ಭತ್ತದ ಕೊಯ್ಲು ಮುಗಿದ ನಂತರ, ಧಾನ್ಯಲಕ್ಷ್ಮಿಯನ್ನು ಗದ್ದೆಯಿಂದ ಮನೆಗಳಿಗೆ ತಂದು ಪೂಜಿಸುವ ಹಬ್ಬವಾಗಿದೆ. ಇದು 'ಸುಗ್ಗಿ ಹಬ್ಬ' ಎಂದೂ ಜನಪ್ರಿಯವಾಗಿದೆ. ಹುತ್ತರಿ ಹಬ್ಬವು ಕೊಡವರ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಅನಾವರಣಗೊಳಿಸುವ ಒಂದು ವೇದಿಕೆಯಾಗಿದೆ. ಈ ಸಮಯದಲ್ಲಿ, ಕೊಡವರು ತಮ್ಮ ಜಾನಪದ ಕಲೆಗಳನ್ನು ಮತ್ತು ಸಂಪ್ರದಾಯಗಳನ್ನು ಪ್ರದರ್ಶಿಸುತ್ತಾರೆ.

## ಉತ್ತರಿಸಿರಿ

1. ಕಾವೇರಿಯ ಬದುಕಿನ ನೋವು 'ಕೂರ್ಗ್ ರೆಜಿಮೆಂಟ್' ಕಥೆಯಲ್ಲಿ ಹೇಗೆ ಅನಾವರಣಗೊಂಡಿದೆ?
2. ದೇಶ ಕಾಯುವ ವೀರಯೋಧರ ಸಾಂಸಾರಿಕ ಬದುಕನ್ನು ಕಥೆಯು ಹೇಗೆ ಪ್ರಸ್ತುತಪಡಿಸಿದೆ?
3. ಕಾವೇರಿಯು ತನ್ನ ನ್ಯಾಯೋಚಿತ ಭೂಮಿಗಾಗಿ ನಡೆಸಿದ ಹೋರಾಟದ ಚಿತ್ರಣವನ್ನು ನೀಡಿರಿ.
4. ಕಾವೇರಿಯು ತನ್ನ ಮಗನ ನಡತೆಯನ್ನು ನೋಡಿ ಬೆಚ್ಚಿ ಬೀಳಲು ಕಾರಣವೇನು?
5. ಕಾವೇರಿಯ ಮಗನು ಅಪ್ಪನ ಭಾವಚಿತ್ರ ಮತ್ತು ನದಿ ಕಾವೇರಮ್ಮನಿಗೆ ಮಾತ್ರ ಕೈಮುಗಿಯಲು ಕಾರಣವೇನು?
6. ಕಾವೇರಿಯು ತನ್ನ ಮಗನ ಭವಿಷ್ಯದ ಬಗ್ಗೆ ಕಂಡ ಕನಸುಗಳಾವುವು?

## ಟಿಪ್ಪಣಿ ಬರಹ

'ಜೀವನ ಕೊಡುವಷ್ಟು ಹಿಂಸೆ ಬಹುಶ: ಸಾವು ಕೊಡುವುದಿಲ್ಲ' - ಈ ಮಾತನ್ನು 'ಕೂರ್ಗ್ ರೆಜಿಮೆಂಟ್' ಕಥೆಯ ಹಿನ್ನೆಲೆಯಲ್ಲಿ ಸಮರ್ಥಿಸಿ ಟಿಪ್ಪಣಿ ಬರೆಯಿರಿ.

## ಕಥೆಯ ಮುಂದುವರಿಕೆ

'ಮಗನ ಮತ್ತು ಮಣ್ಣಿನ ವಿಷಯದಲ್ಲಿ ಯಾವುದರ ಮೇಲೆ ತನಗೆ ಜಾಸ್ತಿ ಹಕ್ಕು ಇತ್ತೆಂದು ಯೋಚಿಸುತ್ತಾ ಕಾವೇರಿ ಜಗಲಿಗೊರಗಿದಳು' - ಕಥೆಯನ್ನು ನಿಮ್ಮ ಕಲ್ಪನೆಯಂತೆ ಮುಂದುವರಿಸಿ ಬರೆಯಿರಿ.

## ಪ್ರಬಂಧ ಬರೆಹ

ಕೂರ್ಗ್ ರೆಜಿಮೆಂಟ್ ಕಥೆಯಲ್ಲಿ ಯೋಧನೊಬ್ಬನು ದೇಶ ಸಂರಕ್ಷಣೆಗಾಗಿ ಪ್ರಾಣತ್ಯಾಗ ಮಾಡಿರುವುದನ್ನು ಓದಿರುವಿರಿ. ಈ ಹಿನ್ನೆಲೆಯಲ್ಲಿ 'ದೇಶ ಸಂರಕ್ಷಣೆಯಲ್ಲಿ ಯುವಜನರ ಪಾತ್ರ' ಎಂಬ ವಿಷಯದ ಕುರಿತು ಪ್ರಬಂಧವೊಂದನ್ನು ಬರೆಯಿರಿ.

## ಅರ್ಜಿ ಬರೆಹ

ಪತ್ರಿಕಾ ಪ್ರಕಟಣೆಯಲ್ಲಿ ಬಂದ ಜಾಹೀರಾತಿನ ಪ್ರಕಾರ ಭಾರತೀಯ ಸೇನೆಯಲ್ಲಿ ಹಲವು ಉದ್ಯೋಗಾವಕಾಶಗಳಿವೆ. ನೀವು ಅರ್ಹ ಅಭ್ಯರ್ಥಿ ಎಂದು ಭಾವಿಸಿ ಸ್ವ – ವಿವರಗಳನ್ನೊಳಗೊಂಡ ಅರ್ಜಿಯನ್ನು ಸಿದ್ಧಪಡಿಸಿರಿ.

## ಪಾರಿಭಾಷಿಕ ಪದಗಳ ಪಟ್ಟಿ ತಯಾರಿ

ಭೂಕಂದಾಯ ಇಲಾಖೆಗೆ ಸಂಬಂಧಪಟ್ಟ ಪಾರಿಭಾಷಿಕ ಪದಗಳನ್ನು ಪಾಠದಿಂದ ಆಯ್ದು ಬರೆಯಿರಿ.

## ಭಾವನಾಮ

ವಿಶೇಷಣ ಪದಗಳಿಂದ ಹುಟ್ಟುವ ನಾಮಪದಗಳನ್ನು ಭಾವನಾಮಗಳು ಎನ್ನುತ್ತಾರೆ. ಇವುಗಳು ವಸ್ತು ಮತ್ತು ಕ್ರಿಯೆಯ ಭಾವವನ್ನು ತಿಳಿಸುತ್ತವೆ.

ಉದಾ :

ಪ್ರವೀಣ - ಪ್ರಾವೀಣ್ಯ

ಕುಶಲ - ಕೌಶಲ್ಯ

**ಕೆಳಗೆ ನೀಡಲಾದ ಪದಗಳ ಭಾವನಾಮವನ್ನು ಬರೆಯಿರಿ.**

ಶೂರ, ಧೀರ, ಸಫಲ, ಸುಂದರ

## ವಾಕ್ಯ ರಚನೆ

ಕೆಳಗೆ ಕೊಟ್ಟಿರುವ ನುಡಿಗಟ್ಟುಗಳನ್ನು ಬಳಸಿ ಅರ್ಥಪೂರ್ಣವಾದ ವಾಕ್ಯವನ್ನು ರಚಿಸಿರಿ.

- ತುಟಿ ಎರಡು ಮಾಡದೆ
- ದುಃಖದ ಕಟ್ಟೆ ಒಡೆಯು
- ಮಣ್ಣಿನಲ್ಲಿ ಮಣ್ಣಾಗು

**ನಮ್ಮ ಧ್ವಜ ಹಾರಾಡುವುದು ಗಾಳಿಯಿಂದಲ್ಲ,**
**ದೇಶವನ್ನು ರಕ್ಷಿಸುವ ಪ್ರತಿಯೊಬ್ಬ ಯೋಧನ ಕೊನೆಯ ಉಸಿರಿನಿಂದ**

# ನಿತ್ಯೋತ್ಸವ

ಕೆ. ಎಸ್. ನಿಸಾರ್ ಅಹಮದ್






ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ,
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ,
ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ ...

ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ,
ಗತ ಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ,
ಓಲೆ ಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲಿ
ನಿತ್ಯೋತ್ಸವ ತಾಯಿ, ನಿತ್ಯೋತ್ಸವ ನಿನಗೆ ...

ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ,
ಸದ್ವಿಕಾಸಶೀಲ ನುಡಿಯ ಲೋಕಾವೃತ ಸೀಮೆಯೆ,
ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ ...



**ಕೆ. ಎಸ್. ನಿಸಾರ್ ಅಹಮದ್ :** ಕೆ. ಎಸ್. ನಿಸಾರ್ ಅಹಮದ್ ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರು. ಇವರು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಫೆಬ್ರವರಿ 15, 1936 ರಲ್ಲಿ ಜನಿಸಿದರು. ಇವರು ವಿವಿಧ ಸರಕಾರಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. 'ಮನಸು ಗಾಂಧಿ ಬಜಾರು', ನೆನೆದವರ ಮನದಲ್ಲಿ', 'ಸಂಜೆ ಐದರ ಮಳೆ', 'ನಾನೆಂಬ ಪರಕೀಯ', 'ನಿತ್ಯೋತ್ಸವ', 'ನವೋಲ್ಲಾಸ', 'ಅಚ್ಚು ಮೆಚ್ಚು', 'ಇದು ಬರಿ ಬೆಡಗಲ್ಲೋ ಅಣ್ಣ' ಮುಂತಾದ ಮಹತ್ವದ ಕೃತಿಗಳನ್ನು ಇವರು ರಚಿಸಿದ್ದಾರೆ. ಮಾಸ್ತಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಇತ್ಯಾದಿ ಪುರಸ್ಕಾರಗಳು ಇವರಿಗೆ ಲಭಿಸಿವೆ. 'ನಿತ್ಯೋತ್ಸವ' ಕವನಸಂಕಲನದಿಂದ ಪ್ರಸ್ತುತ ಕವಿತೆಯನ್ನು ಆಯ್ದುಕೊಳ್ಳಲಾಗಿದೆ. ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಯ ಹಿರಿಮೆ ಇಲ್ಲಿ ಸೊಗಸಾಗಿ ಮೂಡಿಬಂದಿದೆ.

## ನವೀನ ಪದಗಳು

ಸಿರಿ - ಸಂಪತ್ತು. ಉತ್ತುಂಗ – ಎತ್ತರವಾದ, ಅತ್ಯುನ್ನತ. ಹರಿದ್ವರ್ಣ – ಹಸಿರು ಬಣ್ಣ. ತರು - ಮರ. ಅದಿರು - ಖನಿಜ ಮೂಲ. ಭಿತ್ತಿ - ಗೋಡೆ. ಓಲೆ - ತಾಳೆಗರಿ. ಗರಿಮೆ - ಹೆಚ್ಚುಗಾರಿಕೆ. ವತ್ಸರ – ವರ್ಷ. ಉದಾರ – ಧಾರಾಳತನ, ದೊಡ್ಡ ಮನಸ್ಸು. ನಿರ್ಮತ್ಸರ – ಮತ್ಸರವಿಲ್ಲದ.

## ತದ್ಭವ ಬರೆಯಿರಿ

ಕೆಳಗೆ ನೀಡಿದ ಸಂಸ್ಕೃತ ಪದಗಳ ತದ್ಭವ ಪದಗಳನ್ನು ಬರೆಯಿರಿ.

| ಸಂಸ್ಕೃತ | ತದ್ಭವ |
|---|---|
| ವರ್ಣ | |
| ಶ್ರೀ | |
| ಸಿಂಹ | |

## ಉತ್ತರಿಸಿರಿ

1. ಕನ್ನಡ ನಾಡಿನ ಪ್ರಕೃತಿಯ ಸೌಂದರ್ಯವನ್ನು ಕವಿ ನಿಸಾರ್ ಅಹಮದ್ ಹೇಗೆ ವರ್ಣಿಸಿದ್ದಾರೆ?
2. ಕನ್ನಡ ನಾಡಿನ ಐತಿಹಾಸಿಕ ಶ್ರೀಮಂತಿಕೆಯನ್ನು ಕವಿ ಹೇಗೆ ಬಣ್ಣಿಸಿರುವರು?
3. ಕನ್ನಡ ನಾಡಿನ ಔದಾರ್ಯವನ್ನು ಕವಿ ಹೇಗೆ ಕೊಂಡಾಡಿದ್ದಾರೆ?

## ಆಸ್ವಾದನಾ ಟಿಪ್ಪಣಿ

'ನಿತ್ಯೋತ್ಸವ' ಕವನದ ಆಸ್ವಾದನಾ ಟಿಪ್ಪಣಿ ಬರೆಯಿರಿ.

## ಕವನ ಸಂಕಲನ

ನಾಡುನುಡಿಯ ಕುರಿತಾದ ಕವನವನ್ನು ತರಗತಿಯಲ್ಲಿ ರಚಿಸಿ, ಕವನಸಂಕಲನವನ್ನು ಸಿದ್ಧಪಡಿಸಿರಿ.

## ಲೇಖನ ಬರೆಹ

ನಿಮ್ಮ ಊರಿನ ವಿಶೇಷತೆಯನ್ನು ಒಳಗೊಂಡಿರುವ ವರ್ಣನಾತ್ಮಕ ಲೇಖನವೊಂದನ್ನು ಸಿದ್ಧಪಡಿಸಿರಿ.

## ಸಚಿತ್ರ ಲೇಖನ

'ನಿತ್ಯೋತ್ಸವ' ಕವಿತೆಯಲ್ಲಿ ಕನ್ನಡ ನಾಡಿನ ಭಾಷೆ, ಕಲೆ ಮತ್ತು ಸಂಸ್ಕೃತಿಯ ಬಗ್ಗೆ ತಿಳಿದಿರುವಿರಿ. ಈ ಹಿನ್ನೆಲೆಯಲ್ಲಿ ಕಾಸರಗೋಡಿನ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ವೈಶಿಷ್ಟ್ಯವನ್ನು ಕುರಿತು ಸಚಿತ್ರ ಲೇಖನವನ್ನು ಬರೆಯಿರಿ.

## ಕವನಗಳ ಸಂಗ್ರಹ

ಕನ್ನಡ ನಾಡು, ನುಡಿಯ ಮಹತ್ವವನ್ನು ಸಾರುವ ಕವನಗಳನ್ನು ಸಂಗ್ರಹಿಸಿರಿ.

## ಗುಣ ಸಂಧಿ

ಕೆಳಗಿನ ಪದಗಳನ್ನು ಗಮನಿಸಿರಿ.

ಮಹಾ+ ಈಶ = ಮಹೇಶ

ನವ + ಉಲ್ಲಾಸ = ನವೋಲ್ಲಾಸ

ಮಹಾ + ಋಷಿ = ಮಹರ್ಷಿ

ಅ, ಆ ಕಾರದ ಮುಂದೆ ಇ, ಈ ಕಾರಗಳು ಬಂದಾಗ 'ಏ' ಕಾರವೂ ಉ, ಊ ಕಾರಗಳು ಬಂದಾಗ 'ಓ'ಕಾರವೂ, ಋ ಕಾರವು ಬಂದಾಗ 'ಅರ್' ಕಾರವೂ ಆದೇಶವಾಗಿ ಬರುವುದನ್ನು ಗುಣಸಂಧಿ ಎನ್ನುವರು. ಗುಣಸಂಧಿಯು ಸಂಸ್ಕೃತ ಸಂಧಿಯಾಗಿದೆ.

## ಸವರ್ಣದೀರ್ಘ ಸಂಧಿ

ಕೆಳಗಿನ ಪದಗಳನ್ನು ಗಮನಿಸಿರಿ.

ಲೋಕ + ಆವೃತ = ಲೋಕಾವೃತ

ಸಿಂಹ + ಆಸನ = ಸಿಂಹಾಸನ

ಅರುಣ + ಅಚಲ = ಅರುಣಾಚಲ

ಗುರು + ಉಪದೇಶ = ಗುರೂಪದೇಶ

ಹರಿ + ಈಶ = ಹರೀಶ

ಮೇಲಿನ ಉದಾಹರಣೆಗಳಲ್ಲಿ ಪೂರ್ವಪದದ ಕೊನೆಯ ಸ್ವರಾಕ್ಷರವು ಎರಡನೇ ಪದದ ಆರಂಭದಲ್ಲಿರುವ ಸ್ವರಾಕ್ಷರದೊಂದಿಗೆ ಸೇರಿ ಸಂಧಿಯಾಗಿದೆ. ಆಗ ಎರಡೂ ಸ್ವರಗಳ ಜಾಗದಲ್ಲಿ ಆಯಾ ದೀರ್ಘಾಕ್ಷರ ಆದೇಶವಾಗಿ ಬಂದಿದೆ. 'ಸವರ್ಣ' ಎಂದರೆ ಒಂದೇ ಗುಂಪಿನ ಎರಡು ವರ್ಣಗಳು.

ಉದಾ -

ಅ ಆ; ಅ ಅ; ಆ ಅ; ಆ ಆ

ಇ ಈ; ಇ ಇ; ಈ ಇ; ಈ ಈ

ಉ ಊ; ಉ ಉ; ಊ ಉ; ಊ ಊ – ಈ ಕ್ರಮದಲ್ಲಿ ಬಂದರೂ 'ಸವರ್ಣ' ಎಂದೆನಿಸುವುದು. ಹೀಗೆ ಸವರ್ಣಗಳು ಸೇರಿ ಆಗುವ ಸಂಧಿಯನ್ನು 'ಸವರ್ಣದೀರ್ಘ ಸಂಧಿ' ಎನ್ನುವರು.

**ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.**

ಆದರಾತಿಥ್ಯ, ರಾಜಾಶ್ರಯ, ದೇವಾಲಯ, ಸುರೇಶ, ಚಂದ್ರೋದಯ, ಗಜೇಂದ್ರ, ನಿತ್ಯೋತ್ಸವ.

## ಪ್ರಾಸ

ಪದ್ಯದ ಪ್ರತಿ ಸಾಲಿನಲ್ಲಿ ನಿರ್ದಿಷ್ಟ ಸ್ಥಾನದಲ್ಲಿ ಬರುವ ಒಂದೇ ರೀತಿಯ ಅಕ್ಷರಗಳು ಪುನರಾವರ್ತನೆಯಾಗುವುದನ್ನು ಪ್ರಾಸ ಎನ್ನುತ್ತಾರೆ. ಇದು ಪದ್ಯಕ್ಕೆ ಒಂದು ನಿರ್ದಿಷ್ಟ ಲಯ ಮತ್ತು ಶ್ರವಣ ಸೌಂದರ್ಯವನ್ನು ನೀಡುತ್ತದೆ. ಪ್ರಾಸದಲ್ಲಿ ಮುಖ್ಯವಾಗಿ ಆದಿಪ್ರಾಸ ಮತ್ತು ಅಂತ್ಯಪ್ರಾಸ ಎಂದು ಎರಡು ವಿಧಗಳಿವೆ.

**ಆದಿಪ್ರಾಸ** - ಪದ್ಯದ ಪ್ರತೀ ಪಾದಗಳ ಆರಂಭದ ಎರಡು ಸ್ವರಗಳ ನಡುವೆ ಬರುವ ವ್ಯಂಜನದ ಆವೃತ್ತಿಯನ್ನು ಆದಿಪ್ರಾಸ ಎನ್ನುವರು.

ಪೆಣ್ಣಲ್ಲವೇ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು।
ಪೆಣ್ಣು ಪೆಣ್ಣು ಎಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು॥

**ಅಂತ್ಯಪ್ರಾಸ** - ಒಂದು ಪದ್ಯದ ಪಾದಗಳ ಕೊನೆಯಲ್ಲಿ ಬರುವ ಒಂದೇ ರೀತಿಯ ವ್ಯಂಜನಗಳನ್ನು ಅಂತ್ಯಪ್ರಾಸ ಎನ್ನುವರು.

ಕೆಳಗೆ ನೀಡಲಾದ ಕವನದ ಸಾಲುಗಳಲ್ಲಿ ಬಂದಿರುವ ಅಂತ್ಯಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.

ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ,
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ,
ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ ...

**ಸಿರಿಗನ್ನಡಂ ಗೆಲ್ಗೆ; ಸಿರಿಗನ್ನಡಂ ಬಾಳ್ಗೆ**

## ಘಟಕ ಮೌಲ್ಯಮಾಪನ

1. 'ರಸ್ತೆ ವಿಸ್ತಾರವಾಗಿದೆ, ಆದರಿದು ನಿನಗೊಬ್ಬನಿಗೆ ಮೀಸಲಾಗಿಲ್ಲ' ಕವಿಯು ಈ ಎಚ್ಚರಿಕೆಯ ಮಾತುಗಳನ್ನು ಆಡಲು ಕಾರಣವೇನು?
2. "ಅಶ್ವಮೇಧಕ್ಕೆ ಹೊರಟವನಲ್ಲ ನೀನು…" ಎಂದು ಕವಿಯು ಹೇಳಿದುದರ ಔಚಿತ್ಯವೇನು?
3. 'ರಸ್ತೆ ಅಪಘಾತಗಳಿಗೆ ಅತ್ಯವಸರದ ಚಾಲನೆಯೇ ಕಾರಣ' - ಕವನದ ಆಧಾರದಲ್ಲಿ ಈ ಹೇಳಿಕೆಯನ್ನು ಸಮರ್ಥಿಸಿರಿ.
4. ರಸ್ತೆಗಳಲ್ಲಿ ಸೂಚನಾ ಫಲಕಗಳು ಬರಲು ಕಾರಣವೇನು?
5. ರಸ್ತೆ ಸುರಕ್ಷತೆಯ ಅರಿವನ್ನು ಮೂಡಿಸುವ ಎರಡು ಘೋಷಣ ವಾಕ್ಯಗಳನ್ನು ಬರೆಯಿರಿ?
6. ಸಂಚಾರಿಗಳಿಗೆ ನಗರ ಸೂಕ್ತವಾಗುವುದು ಯಾವಾಗ?
7. 'ಕಾವೇರಿಯ ದುಃಖವು ಕಣ್ಣೀರು ಹಾಕಿ ಸಮಾಧಾನಿಸುವಂತಹುದಲ್ಲ' – ಎಂದು ಕಥೆಗಾರರು ಹೇಳಿಕೊಳ್ಳಲು ಕಾರಣವೇನು?
8. ತನ್ನ ಮಗನ ಯಾವ ನಡತೆಯಿಂದ ಕಾವೇರಿಯು ಅತಿಯಾಗಿ ಸಿಟ್ಟುಗೊಂಡಳು?
9. ಕಾವೇರಿಯು ತನ್ನ ಮಗನ ಭವಿಷ್ಯದ ಬಗ್ಗೆ ಏನೇನು ಕನಸು ಕಂಡಿದ್ದಳು?
10. 'ಕೂರ್ಗ್ ರೆಜಿಮೆಂಟಿಗಿಂತ ತನಗೆ ಮಗನ ಮೇಲೆ ಜಾಸ್ತಿ ಹಕ್ಕಿದೆ' ಎಂದು ಕಾವೇರಿಯು ಹೇಳಿಕೊಳ್ಳಲು ಕಾರಣವೇನು?
11. 'ಕೂರ್ಗ್ ರೆಜಿಮೆಂಟ್' ಪಾಠವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ?
12. ಸೈನಿಕರು ತಮ್ಮ ಟ್ರಂಕ್‌ನಲ್ಲಿ ಅಗತ್ಯ ವಸ್ತುಗಳನ್ನು ತುಂಬಿಕೊಂಡು ಯುದ್ಧ ಭೂಮಿಗೆ ತೆರಳಿದರು. - ಈ ವಾಕ್ಯದಲ್ಲಿ ಬಂದಿರುವ ಅಡಿಗೆರೆ ಎಳೆದ ಪದಕ್ಕೆ ಸಂವಾದಿಯಾದ ಕನ್ನಡ ಪದವನ್ನು ಕಂಡುಕೊಂಡು ಬೇರೊಂದು ವಾಕ್ಯವನ್ನು ರಚಿಸಿರಿ.
13. 'ನಿತ್ಯೋತ್ಸವ' ಕವನದ ಕರ್ತೃವಿನ ಕಿರು ಪರಿಚಯವನ್ನು ನೀಡಿರಿ.
14. ತಾಯಿ, ವನ - ಈ ಪದಗಳ ಪರ್ಯಾಯ ಪದಗಳನ್ನು ಬರೆಯಿರಿ.
15. ಕನ್ನಡ ನಾಡಿನ ವಿಶೇಷತೆಗಳನ್ನು 'ನಿತ್ಯೋತ್ಸವ' ಕವನದ ಆಧಾರದಲ್ಲಿ ಬರೆಯಿರಿ.

## ಘಟಕ – 5

# ಕಾಯಕ ಜೀವನ



ಕಾಯಕ ನಿಷ್ಠೆ ಎಂದರೆ ನಾವು ಮಾಡುವ ಕೆಲಸದಲ್ಲಿ ಪೂರ್ಣ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಸಮರ್ಪಣಾ ಭಾವವನ್ನು ಇಟ್ಟುಕೊಳ್ಳುವುದು. ಕಾಯಕವು ಕೇವಲ ಜೀವನೋಪಾಯಕ್ಕೆ ಮಾತ್ರವಲ್ಲದೆ, ವ್ಯಕ್ತಿತ್ವ ವಿಕಾಸ ಮತ್ತು ಸಾಮಾಜಿಕ ಕೊಡುಗೆಯ ಸಾಧನವೂ ಆಗಿದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕಾಯಕ ನಿಷ್ಠೆಯು ಹೆಚ್ಚು ಪ್ರಸ್ತುತವಾಗಿದೆ. ಕೇವಲ ಹಣಕ್ಕಾಗಿ ಕೆಲಸ ಮಾಡುವುದಕ್ಕಿಂತ, ನಮ್ಮ ಕೆಲಸದ ಬಗ್ಗೆ ಪ್ರೀತಿ ಮತ್ತು ಗೌರವ ಇಟ್ಟುಕೊಳ್ಳುವುದು ಯಶಸ್ಸಿಗೆ ಮುಖ್ಯ. ಕಾಯಕ ನಿಷ್ಠೆಯು ವ್ಯಕ್ತಿಯ ನೈತಿಕ ಶಕ್ತಿಯನ್ನು ಹೆಚ್ಚಿಸಿ, ಜೀವನದಲ್ಲಿ ಒಂದು ನೆಮ್ಮದಿಯ ಭಾವವನ್ನು ನೀಡುತ್ತದೆ. ಇದು ನಮ್ಮ ಪರಂಪರೆಯ ಶ್ರೇಷ್ಠ ಮೌಲ್ಯವಾಗಿದ್ದು, ಪ್ರತಿಯೊಬ್ಬರೂ ತಮ್ಮ ತಮ್ಮ ಪಾತ್ರದಲ್ಲಿ ನಿಷ್ಠೆಯಿಂದ ನಡೆದಲ್ಲಿ, ಸುಂದರ ಮತ್ತು ಸಮೃದ್ಧ ಸಮಾಜದ ನಿರ್ಮಾಣ ಖಂಡಿತ ಸಾಧ್ಯವಾಗುತ್ತದೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಇತರ ಶಿವಶರಣರು ಕಾಯಕಕ್ಕೆ ಅಗ್ರಸ್ಥಾನ ನೀಡಿದರು. 'ಕಾಯಕವೇ ಕೈಲಾಸ' ಎಂಬುದು ಅವರ ಮೂಲ ಮಂತ್ರವಾಗಿತ್ತು. ಶರಣರು ಯಾವುದೇ ಕಾಯಕವನ್ನು ಕೀಳಾಗಿ ಕಾಣದೆ, ಅದನ್ನು ದೇವರ ಪೂಜೆಯಂತೆ ಶ್ರದ್ಧೆಯಿಂದ ಮಾಡುತ್ತಿದ್ದರು. "ಕಾಯಕದಲ್ಲಿ ನಿರತನಾದರೆ ಗುರುದರ್ಶನವಾದರೂ ಮರೆಯಬೇಕು, ಲಿಂಗಪೂಜೆಯಾದರೂ ಮರೆಯಬೇಕು" ಎಂಬ ಮಾತು, ಕಾಯಕ ನಿಷ್ಠೆಗೆ ಅವರು ನೀಡಿದ ಅತ್ಯುನ್ನತ ಸ್ಥಾನವನ್ನು ಸಾರಿ ಹೇಳುತ್ತದೆ. ಇಂತಹ ಕಾಯಕನಿಷ್ಠೆಯನ್ನು ನಾವು ನಮ್ಮಲ್ಲೂ ಬೆಳೆಸಿಕೊಳ್ಳುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕಾಯಕನಿಷ್ಠೆಯನ್ನು ಸಾರುವ 'ಹಾಗವನು ಕೊಟ್ಟಲ್ಲದೇನೆಂದಡಂ ಬಿಡೆನೆಂದನು' ಎನ್ನುವ ಷಟ್ಪದಿ ಕಾವ್ಯಭಾಗವನ್ನು, ಕಾಯಕ ತತ್ವದ ವಚನಗಳನ್ನು, ದೇಸಿಯತೆಯನ್ನು ಬಳಸಿಕೊಂಡು ಕೃಷಿಯ ಕಾಯಕಕ್ಕೆ ಒತ್ತು ನೀಡುವ "ಕೃಷಿ - ದೇಸೀಯತೆ" ಎನ್ನುವ ಲೇಖನವನ್ನು ಈ ಘಟಕದಲ್ಲಿ ಅಳವಡಿಸಿಕೊಳ್ಳಲಾಗಿದೆ.

# ಹಾಗವನು ಕೊಟ್ಟಲ್ಲದೇನೆಂದಡಂ ಬಿಡೆನೆಂದನು

**ರಾಘವಾಂಕ**



**ಸಂದರ್ಭ**

ವಿಶ್ವಾಮಿತ್ರನ ಅಗ್ನಿಪರೀಕ್ಷೆಗೆ ಒಳಗಾದ ರಾಜಾ ಹರಿಶ್ಚಂದ್ರನು ತನ್ನ ಸತಿ ಸುತರನ್ನು ವಿಕ್ರಯಿಸಬೇಕಾದ ದುಸ್ಥಿತಿಗೆ ಒಳಗಾಗುತ್ತಾನೆ. ಮಡದಿಯಾದ ರಾಣಿ ಚಂದ್ರಮತಿಯು ವಿಪ್ರನೊಬ್ಬನ ಮನೆಯಲ್ಲಿ ಕೆಲಸಕ್ಕೆ ಸೇರುತ್ತಾಳೆ. ಈ ಸಂದರ್ಭದಲ್ಲಿ ಹಾವು ಕಡಿದು ಪುತ್ರ ಲೋಹಿತಾಶ್ವನ ದುರ್ಮರಣವಾಗುತ್ತದೆ. ಮಗನ ಅಗಲುವಿಕೆಯ ನೋವನ್ನು ಅರಗಿಸಿಕೊಳ್ಳಲಾಗದೆ ಚಂದ್ರಮತಿಯು ಶೋಕಸಾಗರದಲ್ಲಿ ಮುಳುಗುತ್ತಾಳೆ. ಕೊನೆಗೆ ಮಗನ ಹೆಣವನ್ನು ಸುಡಲು ಸ್ಮಶಾನಕ್ಕೆ ಹೊತ್ತುಕೊಂಡು ಬರುತ್ತಾಳೆ. ಅಲ್ಲಿ ವೀರಬಾಹುಕನ ಷರತ್ತಿನ ಮೇರೆಗೆ ಸ್ಮಶಾನ ಕಾಯುವ ಕೆಲಸದಲ್ಲಿ ಹರಿಶ್ಚಂದ್ರ ನಿರತನಾಗಿರುತ್ತಾನೆ.

ಸುಡುಗಾಡ ಕಾಹವೆಂದೇನದಱ ಪಂಥಮಂ
ನುಡಿದು ಪೇಳೆನೆ ಸುಡುವ ನೆಲದೆಱಿಗೆ ಹಾಗ ಹೆಣ
ದುಡುಗೆಯಂ ತಂದೆನಗೆ ಕೊಡುವುದಾ ತಲೆಯಕ್ಕಿಯಂ ನಿನ್ನ ಸಂಬಳಕ್ಕೆ
ಪಡಿಯಾಗಿ ಕೊಂಡುಂಬುದಳುಪದಿರು ಹುಸಿಯದಿರು
ಬಿಡದಿರೆಂದುಡುಗೊಱೆಯ ವೀಳೆಯದ ಕೂಡೆ ತಾ
ಪಿಡಿದ ಸಂಬಳಿಗೋಲ ಮುದ್ರೆಗೊಟ್ಟಂ ವನಧಿಮುದ್ರಿತಧರಾಧಿಪತಿಗೆ ॥೧॥

ಪಡಿಯಕ್ಕಿಯಂ ತಂದು ತನ್ನ ಮಂತ್ರಿಯ ಕೈಯ
ಕೊಡಲಾತನದನೊಂದು ವೃಷಭಂಗೆ ಮೇಯಲಿ
ತ್ತೊಡನೆ ಬಳಿವಿಡಿದದಱ ಗೋಮಯವನೆತ್ತಿ ತಂದೇಕಾಂತದಲ್ಲಿ ತೊಳೆದು
ಕಡೆಗೆ ಜೀರ್ಣಿಸದಕ್ಕಿಯಂ ತಂದು ಕೊಟ್ಟೊಡಾ
ಪೊಡವಿಪಂ ಲಿಂಗಾರ್ಪಿತಂ ಮಾಡಿ ಸವಿದು ಸವಿ
ದಡಿಗಡಿಗೆ ಗಂಗಾಂಬುವನ್ನೀಂಟಿ ಪರಿಣಮಿಸಿ ದಿನವ ಕಳಿಯುತ್ತಿರ್ದನು ॥೨॥

ಗಳಗಳನೆ ಮುನ್ನ ಬೆಂದುಳಿದಿರ್ದ ಕರಿಗೊಳ್ಳಿ
ಗಳನೆಲ್ಲವಂ ಸಿದುಗಿ ತಂದೊಟ್ಟಿ ಮೇಲೆ ಮಂ
ಗಳಮಯ ಕುಮಾರನಂ ಪಟ್ಟಿರಿಸಿ ಕೆಲದೊಳುರಿವಗ್ನಿಯಂ ಪಿಡಿದು ನಿಂದು
ಬೆಳೆದಲ್ಲಿ ಬೆಳೆ ಹುಟ್ಟಿದಲ್ಲಿ ಹುಟ್ಟೆಂದು ನುಡಿ
ದಿಳುಹಲನುಗೆಯ್ದಿಳುಹಲಾಱದಳವಳಿದು ಬಾ
ಯಳಿದು ಮೊಱೆಯಿಟ್ಟೊಡಾ ದನಿಗೇಳ್ದು ನಿದ್ರೆತಿಳಿದೆದ್ದನಾ ಭೂಪಾಲನು ॥೩॥

ನಟ್ಟಿರುಳು ಸುಡುಗಾಡೊಳೊಬ್ಬಳೋರಂತೆ ಬಾ
ಯ್ವಿಟ್ಟು ಹಲುಬುವ ವೀರನಾರಿಯಾವಳೊ ಮೀಱಿ
ಸುಟ್ಟೆಯಾದಡೆ ನಿನಗೆ ವೀರಬಾಹುಕನಾಣೆ ಕದ್ದು ಸುಡಬಂದೆ ನಿನ್ನ
ನಿಟ್ಟೆಲುವ ಮುಱಿವೆನೆಂದುರವಣಿಸಿ ಜಱಿಯುತ್ತ
ದಟ್ಟಿಸುತ ಬಂದು ಹಿಡಿದಿರ್ದ ಕಿಚ್ಚಂ ಕೆದಱಿ
ಮುಟ್ಟಿಗೆಯ ಮೇಲಿರ್ದ ಸುತನ ಹಿಂಗಾಲ್ವಿಡಿದು ಸೆಳೆದು ಬಿಸುಟಂ ಭೂಪನು ॥೪॥

ಬಿಸುಡದಿರು ಬಿಸುಡದಿರು ಬೇಡಬೇಡಕಟಕಟ
ಹಸುಳೆ ನೊಂದಹನೆಂದು ಬೀಳ್ವವನನೆತ್ತಿ ತ
ಕ್ಕಿಸಿಕೊಂಡು ಕುಲವ ನೋಡದೆ ಬೇಡಿಕೊಂಬೆನಿವನೆನ್ನ ಮಗನಲ್ಲ ನಿನ್ನ
ಶಿಶುವಿನೋಪಾದಿ ಸುಡಲನುಮತವನಿತ್ತು ಕರು
ಣಿಸು ಕರುಣಿಯೆಂದೊಡೆಲೆ ಮರುಳೆ ಹೆಣನುಟ್ಟುದಂ
ಮಸಣವಾಡಗೆಯ ಹಾಗವನು ಕೊಟ್ಟಲ್ಲದೇನೆಂದಡಂ ಬಿಡೆನೆಂದನು ॥೫॥

ಕೊಡಲೇನುವಿಲ್ಲವಿಂದೆನಗೆ ಲೋಗರ ಮನೆಯ
ಬಡದಾಸಿ ಕರುಣಿಸೆನೆ ನಿನ್ನ ಕೊರಳಿನೊಳಿರ್ದ
ಕಡುಚೆಲುವ ತಾಳಿಯದನ್ನಡವನಿರಿಸಿ ನೀ ಬಿಡಿಸಿಕೋ ಬಳಿಕವೆನಲು
ಮಡದಿ ಕರನೊಂದಕಟ ಪೊಡವಿಪತಿ ಮಡಿದ ಕೇ
ಡಡಸಿತಲ್ಲದೊಡೆನ್ನ ಗುಪ್ತ ಮಂಗಳಸೂತ್ರ
ದೆಡೆಯ ಹೊಳೆಹೊಳೆವೈದೆದಾಳಿಯನಿದಂ ಶ್ವಪಚನೆಂತು ಕಂಡಪನೆಂದಳು ॥೬॥

ವಿಗತಸಪ್ತದ್ವೀಪಪತಿಯ ಬಸುಱಲಿ ಬಂದು
ಮಗನೆ ನಿನಗೊಮ್ಮೆಟ್ಟು ಸುಡುಗಾಡು ಹಗೆಯಾಯ್ತೆ
ಮಿಗೆ ಸಕಲಲೋಕದೊಳು ತನ್ನಾಣೆ ಸಲುವವನ ಕುಮಾರನೆನಿಸುವ ನಿನ್ನನು
ಬಗೆಯದೀ ಚಾಂಡಾಲನಾಣೆಯಿಡುವಂತಾಯ್ತೆ
ಜಗದ ನವನಿಧಿಗೊಡೆಯನಾತ್ಮಭವನೆನಿಸಿ ಮು
ಟ್ಟಿಗೆಯ ಸುಂಕದ ಹಾಗವಿಲ್ಲಾಯ್ತೆ ಮಗನೆ ಎಂದಳಲಿದಳು ಹಂಬಲಿಸುತ ॥೭॥

ವನಿತೆಯಳಲಂ ಕೇಳ್ದು ನಡುಗಿ ವಿಶ್ವಾಮಿತ್ರ
ಮುನಿಯೆನಗೆ ಮತ್ತೆ ಮಾಡಿದ ತೊಡಕಿದಾಗದಿರ
ದೆನುತ ಮನದೊಳು ಮಱುಗುತಾವ ಲೋಕದೊಳಾಣೆ ಸಲುವುದೆನಿಸುವ ಭೂಪನ
ತನಯನೀ ತರಳನೆಲೆ ತರುಣಿ ನೆಲದೆಱೆಯನಿ
ಕ್ಕೆನಲು ಕೊಡಲದಿಲ್ಲದಧಿಕರ ಪೆಸರ್ಗೊಳಲು ಬಿಡು
ವೆನೆ ಶೋಕಿಸುವ ಹೊತ್ತು ಹುಸಿದು ಶೋಕಿಸುವೊಡೇನಹುದೆಂದನವನೀಶನು ॥೮॥

ಪೊಡವೀಶ್ವರಂ ಹಿಂದೆ ಹರಸಿ ಹಾಳಂಬಟ್ಟು
ಹಡೆದ ಸುತನೀತನಾತನ ವನಿತೆ ನಾನೆನಲು
ಮಡಿದ ಕಾರಣವಾವುದೀ ತನಯನೆಂದಡೆಮ್ಮಿಬ್ಬರಂ ಮಾಱುಗೊಂಡ
ಒಡೆಯನರಮನೆಗೆ ಹುಲುಹುಳ್ಳಿಯಂ ತಪ್ಪೆನೆಂ
ದಡವಿಗೆಯ್ದಿದಡಲ್ಲಿ ಕಾಳೋರಗಂ ಕಚ್ಚಿ
ಮಡಿದನೀ ಕಂದನೀ ವಿಧಿಗೆ ಸೇರಿತು ಹರಿಶ್ಚಂದ್ರನಿರವೇನೆಂದಳು ॥೯॥

ಪುದಿದಿರುಳು ಕಡೆಗಾಣ್ಬ ಕುಱುಹಾಗುತಿದೆ ಸೂರ್ಯ
ನುದಯಿಸಿದನಾದಡೆನ್ನವರೆನ್ನನಱಸಿ ತಳು
ವಿದಳೆಂದು ಕೊಲ್ಲದಿರರೀ ಕುಮಾರನನೀಗ ದಹಿಸಬೇಕರಸ ಎಂದು
ಸುದತಿ ನುಡಿಯಲು ನುಡಿದವನವನೀಶ ತೆಱೆಯನಿ
ಕ್ಕದೆ ಸುಡಲ್ಬಾರದುಳ್ಳಡೆ ಕೊಡಿಲ್ಲದಡೆ ಬೇ
ಗದಿ ಹೋಗಿ ನಿನ್ನೊಡೆಯನಂ ಬೇಡಿ ತಾ ತಾರದಿರೆ ಸುಡಲ್ಬೇಡೆಂದನು ॥೧೦॥

**ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ನೆಲೆ ಇಲ್ಲ**

**ರಾಘವಾಂಕ :** ಕವಿ ರಾಘವಾಂಕನು ಕ್ರಿ.ಶ. ಸುಮಾರು ಹದಿಮೂರನೇ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದನೆಂದು ತಿಳಿಯಲಾಗಿದೆ. ಈತನ ತಂದೆ ಮಹಾದೇವ ಭಟ್ಟ, ತಾಯಿ ರುದ್ರಾಣಿ. 'ರಗಳೆಯ ಕವಿ' ಯೆಂದು ಖ್ಯಾತನಾದ ಹರಿಹರನ ಸೋದರಳಿಯನೂ ಪ್ರಮುಖ ಶಿಷ್ಯನೂ ಆದ ಇವನು ಹಂಪೆಯ ವಿರೂಪಾಕ್ಷನ ಅನನ್ಯ ಭಕ್ತನಾಗಿದ್ದನು. ಇವನು ಷಟ್ಪದಿ ಸಂಪ್ರದಾಯದ ಪ್ರವರ್ತಕನೆಂಬ ಗೌರವಕ್ಕೆ ಪಾತ್ರನಾಗಿದ್ದಾನೆ. ಕವಿ ಶರಭಭೇರುಂಡ, ಉಭಯಕವಿ ಕಮಲರವಿ ಎಂಬಿವುಗಳು ರಾಘವಾಂಕನ ಬಿರುದುಗಳು. ಇವನು ಹರಿಶ್ಚಂದ್ರ ಚಾರಿತ್ರ್ಯ, ಸಿದ್ಧರಾಮ ಚಾರಿತ್ರ್ಯ, ಸೋಮನಾಥ ಚಾರಿತ್ರ್ಯ, ವೀರೇಶ ಚರಿತೆ ಎಂಬ ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ ಶ್ರೇಷ್ಠ ಕೃತಿಯೆಂದು ಪರಿಗಣಿತವಾದ 'ಹರಿಶ್ಚಂದ್ರ ಚಾರಿತ್ರ್ಯ' ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಅದುವರೆಗೆ ಪ್ರಚಲಿತವಿದ್ದ ಚಂಪೂ ಶೈಲಿಯನ್ನು ಬಿಟ್ಟು ದೇಸೀ ಛಂದಸ್ಸಾದ ಷಟ್ಪದಿಯನ್ನು ಬಳಸಿ ಸಮಗ್ರ ಕಾವ್ಯಗಳನ್ನು ರಚಿಸಿದ ಕೀರ್ತಿ ರಾಘವಾಂಕನದ್ದೆಂಬುದು ವಿದ್ವಾಂಸರ ಮತ. ಪ್ರಸ್ತುತ ಕಾವ್ಯಭಾಗವನ್ನು 'ಹರಿಶ್ಚಂದ್ರ ಚಾರಿತ್ರ್ಯ'ದಿಂದ ಆಯ್ದುಕೊಳ್ಳಲಾಗಿದೆ. ಕಾವ್ಯಭಾಗದಲ್ಲಿ ಹರಿಶ್ಚಂದ್ರನ ಕಾಯಕನಿಷ್ಠೆಯನ್ನು ಕಾಣಬಹುದು.

## ನವೀನ ಪದಗಳ ಅರ್ಥ

ಸುಡುಗಾಡು- ಹೆಣಗಳನ್ನು ಸುಡುವ ಸ್ಥಳ, ಸ್ಮಶಾನ. ಕಾಹ- ಕಾವಲು. ಪಂಥ- ನಿಯಮ. ತೆರಿಗೆ- ಸುಂಕ. ಹಾಗ- ಹಣ. ಪಡಿ- ಧಾನ್ಯರೂಪದಲ್ಲಿ ಕೊಡುವ ದಿನಗೂಲಿ. ಹುಸಿ- ಸುಳ್ಳು. ವೀಳೆಯ- ಗೌರವಪೂರ್ವಕವಾಗಿ ಅರ್ಪಿಸುವ ತಾಂಬೂಲ. ಸಂಬಳಿಗೋಲು- ಸ್ಮಶಾನ ಕಾಯುವವನ ಅಧಿಕಾರ ದಂಡ. ವನಧಿ- ಸಮುದ್ರ. ವೃಷಭ- ಎತ್ತು. ಗೋಮಯ- ಸೆಗಣಿ. ಪೊಡವಿ - ಭೂಮಿ. ಪೊಡವಿಪ- ಭೂಮಿಯ ಒಡೆಯ. ಅಂಬು- ನೀರು. ಕೊಳ್ಳಿ- ಉರಿಯುವ ಕಟ್ಟಿಗೆ. ಸಿದುಗು- ಹುಡುಕು. ಅಳವಳಿ- ಶಕ್ತಿಗೆಡು; ಬಲಗುಂದು. ಮೊಱೆ- ಕೂಗು. ಭೂಪಾಲ- ರಾಜ. ನಟ್ಟಿರುಳು- ಮಧ್ಯರಾತ್ರಿ; ನಡುರಾತ್ರಿ. ಓರಂತೆ- ಒಂದೇ ಸಮನಾಗಿ. ಹಲುಬು- ದುಃಖಪಡು. ಎಲು- ಎಲುಬು. ಜರಿ- ನಿಂದಿಸು, ಹೀಯಾಳಿಸು. ಕಿಚ್ಚು- ಬೆಂಕಿ. ಮುಟ್ಟಿಗೆ- ಚಿತೆ. ಹಸುಳೆ- ಶಿಶು, ಚಿಕ್ಕ ಮಗು. ತಕ್ಕಿಸು- ಆಲಿಂಗಿಸು, ಅಪ್ಪಿಕೊಳ್ಳು. ಲೋಗರ- ಲೋಕದ ಜನರ. ಪೊಡವಿಪತಿ- ರಾಜ. ಅಡಸು- ಆವರಿಸು. ಐದೆದಾಳಿ- ಮಂಗಳಸೂತ್ರ. ಶ್ವಪಚ- ಚಂಡಾಲ, ಸ್ಮಶಾನ ಕಾಯುವವನು. ವಿಗತ- ಕಳೆದು ಹೋದ. ಸಪ್ತ- ಏಳು. ಬಸುಱು- ಹೊಟ್ಟೆ. ಒಡೆಯ- ಯಜಮಾನ. ಆತ್ಮಭವ- ಮಗ. ಅಳಲು- ದುಃಖಿಸು. ತೊಡಕು- ಅಡ್ಡಿ, ತನಯ- ಮಗ. ಅಡವಿ- ಕಾಡು. ಪುದಿ- ಆವರಿಸು. ಕುರುಹು- ಚಿಹ್ನೆ; ಗುರುತು. ತಳುವು- ತಡಮಾಡು; ನಿಧಾನಿಸು. ದಹಿಸು- ಸುಡು. ತೆಱೆ- ತೆರಿಗೆ, ಸುದತಿ- ಸುಂದರವಾದ ಹಲ್ಲುಗಳನ್ನು ಹೊಂದಿರುವವಳು, ಸುಂದರಿ, ಸ್ತ್ರೀ.

## ಪದ ವಿಂಗಡಣೆ

| | | |
|---|---|---|
| ಕಾಹವೆಂದೇನದಱ | = | ಕಾಹವೆಂದು+ಏನ್+ಅದಱ |
| ನೆಲದೆಱೆಯನ್ | = | ನೆಲ+ತೆಱೆಯನ್ |
| ಹೆಣದುಡುಗೆಯಂ | = | ಹೆಣದ+ಉಡುಗೆಯಂ |
| ತಲೆಯಕ್ಕಿಯಂ | = | ತಲೆ+ಅಕ್ಕಿಯಂ |
| ಕೊಂಡುಂಬುದಳುಪದಿರು | = | ಕೊಂಡು+ಉಂಬುದು+ಅಳುಪದಿರು |
| ಬಿಡದಿರೆಂದುಡುಗೊಱೆಯ | = | ಬಿಡದಿರ್+ಎಂದು+ಉಡುಗೊಱೆಯ |

| | | |
|---|---|---|
| ಪಡಿಯಕ್ಕಿಯಂ | = | ಪಡಿ+ಅಕ್ಕಿಯಂ |
| ಕೊಡಲಾತನದನೊಂದು | = | ಕೊಡಲಾತನ್+ಅದನ್+ಒಂದು |
| ಗೋಮಯವನೆತ್ತಿ | = | ಗೋಮಯವನ್+ಎತ್ತಿ |
| ತಂದೇಕಾಂತದಲ್ಲಿ | = | ತಂದು+ಏಕಾಂತದಲ್ಲಿ |
| ಜೀರ್ಣಿಸದಕ್ಕಿಯಂ | = | ಜೀರ್ಣಿಸದ+ಅಕ್ಕಿಯಂ |
| ಗಂಗಾಂಬುವನ್ನೀಂಟಿ | = | ಗಂಗಾಂಬುವನ್+ಈಂಟಿ |
| ಬೆಂದುಳಿದಿರ್ದ | = | ಬೆಂದು+ಉಳಿದಿರ್ದ |
| ಕರಿಗೊಳ್ಳಿಗಳನೆಲ್ಲವಂ | = | ಕರಿಕೊಳ್ಳಿಗಳನ್+ಎಲ್ಲವಂ |
| ಕೆಲದೊಳುರಿವಗ್ನಿಯಂ | = | ಕೆಲದೊಳ್+ಉರಿವ+ಅಗ್ನಿಯಂ |
| ಮೊಱೆಯಿಟ್ಟೊಡಾ | = | ಮೊಱೆ+ಇಟ್ಟೊಡೆ+ಆ |
| ಬಾಯ್ವಿಟ್ಟು | = | ಬಾಯ್+ಬಿಟ್ಟು |
| ಮುಱಿವೆನೆಂದುರವಣಿಸಿ | = | ಮುಱಿವೆನ್+ಎಂದು+ಉರವಣಿಸಿ |
| ಹಿಂಗಾಲ್ವಿಡಿದು | = | ಹಿಂಗಾಲ್+ಪಿಡಿದು |
| ಬೀಳ್ವವನನೆತ್ತಿ | = | ಬೀಳ್ವ+ಅವನನ್+ಎತ್ತಿ |
| ಬೇಡಿಕೊಂಬೆನಿವನೆನ್ನ | = | ಬೇಡಿಕೊಂಬೆನ್+ಇವನ್+ಎನ್ನ |
| ಸುಡಲನುಮತವನಿತ್ತು | = | ಸುಡಲ್+ಅನುಮತವನ್+ಇತ್ತು |
| ಹೆಣನುಟ್ಟುದಂ | = | ಹೆಣನ್+ಉಟ್ಟುದಂ |
| ಕೊಟ್ಟಲ್ಲದೇನೆಂದಡಂ | = | ಕೊಟ್ಟಲ್ಲದೆ+ಏನ್+ಎಂದಡಂ |
| ಕೊಡಲೇನುವಿಲ್ಲವಿಂದೆನಗೆ | = | ಕೊಡಲ್+ಏನು+ಇಲ್ಲ+ಇಂದು+ಎನಗೆ |
| ಕೊರಳಿನೊಳಿರ್ದ | = | ಕೊರಳಿನೊಳ್+ಇರ್ದ |
| ತಾಳಿಯದನ್ನಡವನಿರಿಸಿ | = | ತಾಳಿ+ಅದನ್+ಅಡವನ್+ಇರಿಸಿ |
| ಕೇಡಡಸಿತಲ್ಲದೊಡೆನ್ನ | = | ಕೇಡ್+ಅಡಸಿತು+ಅಲ್ಲದೊಡೆ+ಎನ್ನ |
| ತೊಡಕಿದಾಗದಿರದೆನುತ | = | ತೊಡಕು+ಇದು+ಆಗದಿರದು+ಎನುತ |
| ನೆಲದೆಱೆಯನಿಕ್ಕೆನಲು | = | ನೆಲ+ತೆಱೆಯನ್+ಇಕ್ಕು+ಎನಲು |
| ಕೊಡಲದಿಲ್ಲದಧಿಕರ | = | ಕೊಡಲ್+ಅದು+ಇಲ್ಲದೆ+ಅಧಿಕರ |
| ಪೆಸರ್ಗೊಳಲು | = | ಪೆಸರ್+ಕೊಳಲ್ |
| ಸುತನೀತನಾತನ | = | ಸುತನ್+ಈತನ್+ಆತನ |
| ತನಯನೆಂದಡೆಮ್ಮಿಬ್ಬರಂ | = | ತನಯನ್+ಎಂದಡೆ+ಎಮ್ಮ+ಇಬ್ಬರಂ |
| ತಪ್ಪೆನೆಂದಡವಿಗೆಯ್ದಿದಡಲ್ಲಿ | = | ತಪ್ಪೆನೆಂದು+ಅಡವಿಗೆ+ಎಯ್ದಿದಡೆ+ಅಲ್ಲಿ |
| ಸುಡುಗಾಡೊಳೊಬ್ಬಳೋರಂತೆ | = | ಸುಡುಗಾಡೊಳ್+ಒಬ್ಬಳ್+ಓರಂತೆ |

| | | |
|---|---|---|
| ಹೊಳೆಹೊಳೆವೈದೆದಾಳಿಯನಿದಂ | = | ಹೊಳೆಹೊಳೆವ+ಐದೆತಾಳಿಯನ್+ಇದಂ |
| ನವನಿಧಿಗೊಡೆಯನಾತ್ಮಭವನೆನಿಸಿ | = | ನವನಿಧಿಗೆ+ಒಡೆಯನ್+ಆತ್ಮಭವನ್+ಎನಿಸಿ |
| ನುಡಿದಿಳುಹಲನುಗೆಯ್ದಿಳುಹಲಾಱದಳವಳಿದು | = | ನುಡಿದು+ಇಳುಹಲ್+ಅನುಗೆಯ್ದು+ ಇಳುಹಲಾಱದೆ+ಅಳವಳಿದು |
| ಶೋಕಿಸುವೊಡೇನಹುದೆಂದನವನೀಶನು | = | ಶೋಕಿಸುವೊಡೆ+ಏನ್+ಅಹುದು+ಎಂದನ್+ ಅವನೀಶನು |
| ಸೂರ್ಯನುದಯಿಸಿದನಾದಡೆನ್ನವರೆನ್ನನಱಿಸಿ | = | ಸೂರ್ಯನ್+ಉದಯಿಸಿದನ್+ಆದಡೆ+ ಎನ್ನವರ್+ಎನ್ನನ್+ಅಱಿಸಿ |

## ವಿಶದೀಕರಣ

**ತಲೆಯಕ್ಕಿ** - ಶವದ ತಲೆಯ ಭಾಗದಲ್ಲಿ ಕಟ್ಟಿಡುವ ಅಕ್ಕಿ ಇದಾಗಿದೆ. ಶವ ಸಂಸ್ಕಾರದ ಸಂದರ್ಭದಲ್ಲಿ ಇದನ್ನು ಸುಡುಗಾಡು ಕಾಯುವವನಿಗೆ ನೀಡುವ ಪದ್ಧತಿ ಇದೆ.

**ನವನಿಧಿ** - ಪದ್ಮ, ಮಹಾಪದ್ಮ, ಶಂಖ, ಮರಕತ, ಕಚ್ಛಪ, ಮುಕುಂದ, ಕುಂದ, ನೀಲ ಮತ್ತು ಖರ್ವವೆಂಬ ಕುಬೇರನ ಒಂಬತ್ತು ನಿಧಿಗಳು. ಇವುಗಳಿಗೆ ಹರಿಶ್ಚಂದ್ರ ಒಡೆಯನಾಗಿದ್ದ ಎಂಬ ತಾತ್ಪರ್ಯ.

## ಉತ್ತರಿಸಿರಿ

1. ಸುಡುಗಾಡು ಕಾಯುವ ಕೆಲಸವನ್ನು ಹರಿಶ್ಚಂದ್ರನಿಗೆ ಒಪ್ಪಿಸಿದ ವೀರಬಾಹುಕನು ಅವನಿಗೆ ಏನೆಂದು ಆಜ್ಞಾಪಿಸಿದನು?
2. ಸುಡುಗಾಡಿನಲ್ಲಿ ಹರಿಶ್ಚಂದ್ರನ ದೈನಂದಿನ ಬದುಕು ಹೇಗೆ ಸಾಗುತ್ತಿತ್ತು?
3. ಲೋಹಿತಾಶ್ವನನ್ನು ಚಿತೆಗೇರಿಸಲು ಸಿದ್ಧಳಾದ ಚಂದ್ರಮತಿಯ ಮೇಲೆ ಹರಿಶ್ಚಂದ್ರನು ಕೋಪಗೊಂಡುದೇಕೆ?
4. ಮಸಣವಾಡಗೆಯ ಹಾಗವನ್ನು ಕೊಡು ಎಂದು ಹರಿಶ್ಚಂದ್ರನು ಕೇಳಿದಾಗ ಚಂದ್ರಮತಿಯ ಪ್ರತಿಕ್ರಿಯೆ ಏನಾಗಿತ್ತು?
5. 'ಮುನಿಯೆನಗೆ ಮತ್ತೆ ಮಾಡಿದ ತೊಡಕಿದಾಗದಿರದು' - ಎಂದು ಹರಿಶ್ಚಂದ್ರನು ಸಂದೇಹಗೊಳ್ಳಲು ಕಾರಣವೇನು?

## ಆಶಯ ಬರಹ

'ಹಾಗವನು ಕೊಟ್ಟಲ್ಲದೇನೆಂದಡಂ ಬಿಡೆನೆಂದನು' ಕಾವ್ಯಭಾಗದ ಆಶಯವನ್ನು ಬರೆಯಿರಿ.

## ಸಂಭಾಷಣೆ ತಯಾರಿ

ಹರಿಶ್ಚಂದ್ರ ಮತ್ತು ಚಂದ್ರಮತಿಯರ ನಡುವೆ ನಡೆದ ಮಾತುಕತೆಯನ್ನು ಸಂಭಾಷಣೆಯ ರೂಪದಲ್ಲಿ ಬರೆಯಿರಿ.

## ಪಾತ್ರಚಿತ್ರಣ

ಕಾವ್ಯಭಾಗದಲ್ಲಿ ಮೂಡಿಬಂದ ಹರಿಶ್ಚಂದ್ರನ ಪಾತ್ರ ಚಿತ್ರಣ ಮಾಡಿರಿ.

## ಸ್ವಾರಸ್ಯ ಬರಹ

ಕಾವ್ಯಭಾಗದಲ್ಲಿ ಬಂದಿರುವ ಕೆಳಗಿನ ಮಾತುಗಳ ಸಂದರ್ಭವನ್ನು ಬರೆದು ಸ್ವಾರಸ್ಯವನ್ನು ವಿವರಿಸಿರಿ.

1. ಹೊಳೆಹೊಳೆವೈದೆದಾಳಿಯನಿದಂ ಶ್ವಪಚನೆಂತು ಕಂಡಪನ್
2. ಶೋಕಿಸುವ ಹೊತ್ತು ಹುಸಿದು ಶೋಕಿಸುವೊಡೇನಹುದು

## ಭಾಷಣ ತಯಾರಿ

ಹರಿಶ್ಚಂದ್ರನು ತನ್ನ ವೃತ್ತಿಯಲ್ಲಿ ತೋರಿದ ವೃತ್ತಿ ಧರ್ಮವನ್ನು 'ಹಾಗವನು ಕೊಟ್ಟಲ್ಲದೇನೆಂದಡಂ ಬಿಡೆನೆಂದನು' ಎಂಬ ಕಾವ್ಯಭಾಗದಿಂದ ತಿಳಿದಿರುವಿರಿ. ಇದರ ಆಧಾರದಲ್ಲಿ 'ವೃತ್ತಿ ನಿಷ್ಠೆ' ಎಂಬ ವಿಷಯದ ಮೇಲೆ ಒಂದು ಲಿಖಿತ ಭಾಷಣವನ್ನು ಸಿದ್ಧಪಡಿಸಿರಿ.

## ವಾರ್ಧಕ ಷಟ್ಪದಿ

ಇದು ಒಂದು ಮಾತ್ರಾಗಣಬದ್ಧವಾದ ಛಂದಸ್ಸು. ಇಲ್ಲಿನ ಒಂದು, ಎರಡು, ನಾಲ್ಕು, ಐದನೇ ಪಾದಗಳು ಸಮಾನವಾಗಿದ್ದು, ಐದು ಮಾತ್ರೆಯ ನಾಲ್ಕು ಗಣಗಳು ಬರುತ್ತವೆ. ಮೂರು ಮತ್ತು ಆರನೇ ಪಾದಗಳು ಸಮಾನವಾಗಿದ್ದು, ಐದು ಮಾತ್ರೆಯ ಆರು ಗಣಗಳೂ ಕೊನೆಯಲ್ಲಿ ಒಂದು ಗುರುವೂ ಇರುತ್ತದೆ. ಮೂರು ಮತ್ತು ಆರನೇ ಸಾಲುಗಳ ಕೊನೆಯಲ್ಲಿ ಲಘು ಬಂದರೂ ಅದನ್ನು ಗುರು ಎಂದು ಪರಿಗಣಿಸಬೇಕು.

**ಉದಾ :**

| | | | |
|---|---|---|---|
| U U _U | _U_ | _ UUU | _ U _ |
| ಸುಡುಗಾಡ | ಕಾಹವೆಂ | ದೇ ನದಱ | ಪಂಥಮಂ |

| | | | |
|---|---|---|---|
| U U U _ | UU UUU | UUU UU | _U U U |
| ನುಡಿದು ಪೇ | ಳೆನೆ ಸುಡುವ | ನೆಲದೆಱಿಗೆ | ಹಾಗ ಹೆಣ |

| | | | | | | |
|---|---|---|---|---|---|---|
| U U U _ | _UUU | U U U _ | UU_U | _ _U | _ U _ | _ (U) |
| ದುಡುಗೆಯಂ | ತಂದೆನಗೆ | ಕೊಡುವುದಾ | ತಲೆಯಕ್ಕಿ | ಯಂ ನಿನ್ನ | ಸಂಬಳ | ಕ್ಕೆ |

**ಕೆಳಗೆ ನೀಡಿರುವ ಪದ್ಯಭಾಗದ ಸಾಲುಗಳಿಗೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿರಿ.**

ಪಡಿಯಾಗಿ ಕೊಂಡುಂಬುದಳುಪದಿರು ಹುಸಿಯದಿರು

ಬಿಡದಿರೆಂದುಡುಗೊಱೆಯ ವೀಳೆಯದ ಕೂಡೆ ತಾ

ಪಿಡಿದ ಸಂಬಳಿಗೋಲ ಮುದ್ರೆಗೊಟ್ಟಂ ವನಧಿಮುದ್ರಿತಧರಾಧಿಪತಿಗೆ

# ವಚನಗಳು

**ಶಿವಶರಣರು**



ಕಾಯಕವೇ ಕೈಲಾಸವಯ್ಯ
ಕಾಯಕದಲ್ಲಿ ನಿರತನಾದಡೆ
ಗುರುಲಿಂಗ ಜಂಗಮಕ್ಕೆ
ದಾಸೋಹವ ಮಾಡಲುಬಹುದು
ಕಾಯಕದಿಂದಲೇ ಕೈಲಾಸವಪ್ಪುದು
ಕೂಡಲಸಂಗಮದೇವಾ
ಕಾಯಕದಲ್ಲಿ ಮನವುಳ್ಳವನೇ ನಮ್ಮ ಶರಣ

**ಬಸವಣ್ಣ**

ಕಾಯಕದಲ್ಲಿ ನಿರತನಾದರೆ
ಗುರು ದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತಾದರೂ ಕಾಯಕದೊಳಗೂ

**ಆಯ್ದಕ್ಕಿ ಮಾರಯ್ಯ**

ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕರ

**ಆಯ್ದಕ್ಕಿ ಲಕ್ಕಮ್ಮ**

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ
ಆಸೆಯೆಂಬುದು ಭವದ ಬೀಜ
ನಿರಾಸೆಯೆಂಬುದು ನಿತ್ಯಮುಕ್ತಿ
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ

**ಕಾಳವ್ವೆ**

ಕಾರೆಯ ಸೊಪ್ಪಾದರೂ ಕಾಯಕದಿಂದ
ಬಂದುದು ಲಿಂಗಕ್ಕರ್ಪಿತವಲ್ಲದೆ,
ದುರಾಸೆಯಿಂದ ಬಂದುದು ಅನರ್ಪಿತ
ಇದು ಕಾರಣ, ಸತ್ಯಶುದ್ಧ ಕಾಯಕವೇ
ನಿತ್ಯದ್ರವ್ಯವಾದರೆ, ಚಂದೇಶ್ವರ ಲಿಂಗಕ್ಕೆ
ನೈವೇದ್ಯ ಸಂದಿತ್ತು ಕೇಳಯ್ಯ

**ನುಲಿಯ ಚಂದಯ್ಯ**

**ಬಸವಣ್ಣ :** 'ಭಕ್ತಿ ಭಂಡಾರಿ' ಎಂದೇ ಪ್ರಸಿದ್ಧರಾದ ಬಸವಣ್ಣನವರು ಬಿಜಾಪುರ ಜಿಲ್ಲೆಯ ಬಾಗೇವಾಡಿಯಲ್ಲಿ ಮಾದರಸ ಮತ್ತು ಮಾದಲಾಂಬಿಕೆಯರ ಪುತ್ರರಾಗಿ ಜನಿಸಿದರು. ಕಲಚೂರಿ ಅರಸ ಬಿಜ್ಜಳನ ಆಸ್ಥಾನದಲ್ಲಿ ಕರಣಿಕ, ಭಂಡಾರಿ, ಮಂತ್ರಿ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. 'ಕಾಯಕವೇ ಕೈಲಾಸ' ಎಂಬುದು ಇವರ ಧ್ಯೇಯ. 'ಕೂಡಲಸಂಗಮದೇವ' ಎಂಬುದು ಇವರ ವಚನಗಳ ಅಂಕಿತ. ಸಾಮಾಜಿಕ ಅಸಮಾನತೆಗಳ ವಿರುದ್ಧ ದನಿಯೆತ್ತಿದ ಬಸವಣ್ಣನವರು ಧಾರ್ಮಿಕ, ಸಾಮಾಜಿಕ ಕ್ರಾಂತಿಯ ಹರಿಕಾರರೆನಿಸಿದರಲ್ಲದೆ ದಾಸೋಹಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತರು.

**ಆಯ್ದಕ್ಕಿ ಮಾರಯ್ಯ :** ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ಸಮಕಾಲೀನರಾಗಿ ಕಲ್ಯಾಣದಲ್ಲಿದ್ದ ಓರ್ವ ಶರಣ. ಅನುಭವ ಮಂಟಪದ ಅನುಭಾವಿಗಳಲ್ಲಿ ಓರ್ವರಾದ ಇವರು ಬಸವಣ್ಣನವರ ಮಹಾಮನೆಯ ಮುಂದೆ ಚೆಲ್ಲಿದ ಅಕ್ಕಿಯನ್ನು ಆಯುವ ಕಾಯಕವನ್ನು ಮಾಡುತ್ತಿದ್ದರು. ಆದುದರಿಂದ ಇವರು ಆಯ್ದಕ್ಕಿ ಮಾರಯ್ಯನೆಂದು ಪ್ರಸಿದ್ಧರಾದರು. ಇವರ ಪತ್ನಿ ಆಯ್ದಕ್ಕಿ ಲಕ್ಕಮ್ಮ. ಇವರ ವಚನಗಳ ಅಂಕಿತ ಅಮರೇಶ್ವರ ಲಿಂಗ.

**ಆಯ್ದಕ್ಕಿ ಲಕ್ಕಮ್ಮ :** ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ದಂಪತಿಗಳು ಮೂಲತಃ ರಾಯಚೂರ ಜಿಲ್ಲೆ ಲಿಂಗಸೂರ ತಾಲೂಕಿನ ಅಮರೇಶ್ವರ ಗ್ರಾಮಕ್ಕೆ ಸೇರಿದವರು. ಇವರ ಇಷ್ಟದೈವ ಅಮರೇಶ್ವರ. ಆಯ್ದಕ್ಕಿ ಲಕ್ಕಮ್ಮರು ಮಾರಯ್ಯಪ್ರಿಯ ಅಮರೇಶ್ವರಲಿಂಗ ಅಂಕಿತದಲ್ಲಿ ವಚನಗಳನ್ನು ಬರೆದಿರುವರು.

**ಕಾಳವ್ವೆ :** ಬಸವಣ್ಣನವರ ಸಮಕಾಲೀನರಾದ ಕಾಳವ್ವೆ ಅವರು ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಕಂಧಾರ ಗ್ರಾಮದಲ್ಲಿ ವಾಸಿಸುತ್ತಿದ್ದರು. ಹನ್ನೆರಡನೆಯ ಶತಮಾನದ ವಚನಕಾರರಿಗೆ ಸರಿಮಿಗಿಲೆನಿಸುವಂತೆ ವಚನಗಳನ್ನು ರಚಿಸಿದ ಇವರು ಪತಿಯ ಜೊತೆಯಲ್ಲಿ ಶಿವಾನುಭವ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಪಾಂಡಿತ್ಯ, ಅನುಭವ, ನಿಷ್ಠೆ, ತತ್ವಜ್ಞಾನದ ತಿಳುವಳಿಕೆ ಮತ್ತು ಉತ್ತಮ ಗೃಹಿಣಿಯಲ್ಲಿರಬೇಕಾದ ಸದ್ಗುಣಗಳು ಇವರಲ್ಲಿ ಇದ್ದುವು. ಉರಿಲಿಂಗ ಪೆದ್ದಿಗಳರಸ ಎಂಬುದು ಇವರ ವಚನಗಳ ಅಂಕಿತವಾಗಿದೆ

**ನುಲಿಯ ಚಂದಯ್ಯ :** ನುಲಿಯ ಚಂದಯ್ಯ ಅವರು 12ನೇ ಶತಮಾನದ ಶಿವಶರಣರಲ್ಲಿ ಒಬ್ಬರಾಗಿದ್ದು, ಕಾಯಕ ನಿಷ್ಠೆಗೆ ಹೆಸರುವಾಸಿಯಾಗಿದ್ದಾರೆ. ಅವರು ಬಸವಣ್ಣನವರ ವಿಚಾರಧಾರೆಗಳಿಂದ ಪ್ರಭಾವಿತರಾಗಿ, ತಮ್ಮ ಕಾಯಕದಿಂದ ಬಂದ ಆದಾಯವನ್ನು ದಾಸೋಹಕ್ಕಾಗಿ ಬಳಸುತ್ತಿದ್ದರು. ತಮ್ಮ ವಚನಗಳ ಮೂಲಕ ಸಾಮಾಜಿಕ ಮತ್ತು ಧಾರ್ಮಿಕ ಚಿಂತನೆಗಳನ್ನು ಬೆಳೆಸಿದ ಮಹನೀಯರು ಇವರು. ಚಂದೇಶ್ವರ ಲಿಂಗ ಎಂಬುದು ಇವರ ವಚನಗಳ ಅಂಕಿತ.

## ನವೀನ ಪದಗಳ ಅರ್ಥ

ಕಾಯಕ- ಕೆಲಸ. ಕಾರೆ- ಒಂದು ಜಾತಿಯ ಸಸ್ಯ. ದ್ರವ್ಯ- ಸಂಪತ್ತು. ನೈವೇದ್ಯ- ದೇವರಿಗೆ ಅರ್ಪಿಸುವ ಭಕ್ಷ್ಯ ಭೋಜ್ಯಗಳು. ಭವ- ಹುಟ್ಟು. ಚಿತ್ತ- ಮನಸ್ಸು. ಸದರ- ಸಲುಗೆ

## ವಿಶದೀಕರಣ

**ಜಂಗಮ :** ಸಂಸಾರದ ಬಂಧವನ್ನು ಕಳಚಿ ಶಿವನನ್ನೇ ಸರ್ವಸ್ವವನ್ನಾಗಿ ಸ್ವೀಕರಿಸಿ ಶರಣ ಜೀವನ ನಡೆಸುವವರು ಜಂಗಮರು.

**ದಾಸೋಹ :** ತಮ್ಮ ಶ್ರಮದ ದುಡಿಮೆಯ ಮೂಲಕ ಜೀವನ ನಡೆಸುವುದು ಮತ್ತು ಆ ದುಡಿಮೆಯ ಫಲವನ್ನು ಸಮಾಜದೊಂದಿಗೆ ಹಂಚಿಕೊಳ್ಳುವುದನ್ನು ಶರಣರು ದಾಸೋಹ ಎಂದು ಕರೆಯುತ್ತಿದ್ದರು.

## ಉತ್ತರಿಸಿರಿ.

1. ಕಾಯಕದ ಬಗ್ಗೆ ಬಸವಣ್ಣನವರ ನಿಲುವೇನು?
2. ಕಾಯಕದ ಮಹತ್ವವನ್ನು ಆಯ್ದಕ್ಕಿ ಮಾರಯ್ಯನವರು ತಿಳಿಸಿದ ಬಗೆ ಹೇಗೆ?
3. ಚಿತ್ತ ಶುದ್ಧವಾದ ಭಕ್ತಿ ಮತ್ತು ಕಾಯಕ ನಿಷ್ಠೆಯ ಕುರಿತು ಆಯ್ದಕ್ಕಿ ಲಕ್ಕಮ್ಮ ಹೇಳಿದ ವಿಚಾರಗಳೇನು?
4. ಆಸೆ ಮತ್ತು ನಿರಾಸೆಯ ಕುರಿತು ಕಾಳವ್ವೆ ಅವರ ನಿಲುವುಗಳೇನು?
5. ಚಂದೇಶ್ವರ ಲಿಂಗಕ್ಕೆ ಯಾವುದು ನೈವೇದ್ಯವಾಗುತ್ತದೆ?

## ಟಿಪ್ಪಣಿ ಬರೆಯುವುದು

ಬಸವಣ್ಣನವರ 'ಕಾಯಕವೇ ಕೈಲಾಸವಯ್ಯ' ಎನ್ನುವ ವಚನದೊಂದಿಗೆ ಕೆಳಗೆ ನೀಡಲಾದ ಸರ್ವಜ್ಞನ ವಚನದ ಆಶಯವನ್ನು ಹೋಲಿಸಿ ಟಿಪ್ಪಣಿಯನ್ನು ಬರೆಯಿರಿ.

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು

ತನ್ನಂತೆ ಪರರ ಬಗೆದೊಡೆ

ಕೈಲಾಸ ಬಿನ್ನಾಣವಕ್ಕು ಸರ್ವಜ್ಞ

## ಆಶಯ ಬರಹ

ಕೆಳಗೆ ಕೊಟ್ಟಿರುವ ಕಾಳವ್ವೆ ಅವರ ವಚನ ಸಾಲುಗಳ ಆಶಯವನ್ನು ಬರೆಯಿರಿ

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ

ಸತ್ಯಶುದ್ಧವಿಲ್ಲದುದು ಕಾಯಕವಲ್ಲ

ಆಸೆಯೆಂಬುದು ಭವದ ಬೀಜ

ನಿರಾಸೆಯೆಂಬುದು ನಿತ್ಯಮುಕ್ತಿ

ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ

## ಪ್ರಬಂಧ ಬರಹ

ನೀವು ಓದಿದ ವಚನಗಳ ಹಿನ್ನೆಲೆಯಲ್ಲಿ ಶಿವಶರಣರ ಕಾಯಕ ನಿಷ್ಠೆಯ ಕುರಿತು ಪ್ರಬಂಧವನ್ನು ಬರೆಯಿರಿ.

## ಕಿರುಲೇಖನ ತಯಾರಿ

ವಚನಗಳು ಪಾಠದ ಮೂಲಕ ಕಾಯಕದ ಮಹತ್ವವನ್ನು ನೀವು ತಿಳಿದಿರುವಿರಿ. ಇದರ ಹಿನ್ನೆಲೆಯಲ್ಲಿ ಬದುಕಿನಲ್ಲಿ ಉದ್ಯೋಗದ ಮಹತ್ವ ಮತ್ತು ಅದರ ಮೇಲಿನ ನಿಷ್ಠೆಯ ಕುರಿತು ಕಿರುಲೇಖನ ಬರೆಯಿರಿ.

**ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು**
**ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ**
**ದಾಟವೇ ಕೆಡುಗು ಸರ್ವಜ್ಞ ॥**

# ಕೃಷಿ - ದೇಸೀಯತೆ

ಡಾ. ನರೇಂದ್ರ ರೈ ದೇರ್ಲ



ಸುಬ್ರಾಯ ಬರೀ ಹಾರೆ ತರಲಿಲ್ಲ. ಒಂದೂವರೆ ಇಂಚು ದಪ್ಪದ ಮೂರುವರೆ ಅಡಿ ಉದ್ದದ ಕಬ್ಬಿಣದ ಪೈಪೊಂದನ್ನು ಅದಕ್ಕೆ ಹಿಡಿ-ದಡೆಯನ್ನಾಗಿ ವೆಲ್ಡ್ ಮಾಡಿಯೇ ತಂದ. ಪರ್ಮನೆಂಟ್, ಇನ್ನು ಯಾವ ರಗಳೆಯೂ ಇಲ್ಲ. ಸವೆದು ಹಾರೆ ಅಂಗೈಯಗಲ ಬಂದ ಮೇಲೆ ಇದನ್ನೇ ತುಂಡರಿಸಿ ಮತ್ತೊಂದು ಹೊಸ ಹಾರೆಗೆ ಜೋಡಿಸಿದರೆ ಮುಗಿಯಿತು. ಮರದ್ದಾದರೆ ಅದು ಪದೇ ಪದೇ ಮುರಿಯುವುದು. ಕೀಲು ಹಾಕುವುದು, ಬಿಸಿಲಿಗೆ ಒಡೆಯುವುದು, ಕೈಗುಳ್ಳೆ ಬರುವುದು ಯಾವ ಕಿರಿಕಿರಿಯೂ ಈಗ ಇಲ್ಲ ಎಂದು ನಿಟ್ಟುಸಿರು ಬಿಟ್ಟ.

ಇವತ್ತು ಸುಬ್ರಾಯ, ನಾಳೆ ನಾನು, ನಾಡದು ಪಕ್ಕದ ಮನೆಯ ಪದ್ಮಣ್ಣ ಇಂಥ ರೋಗ ನಮ್ಮೂರಲ್ಲಿ ಬಹುಬೇಗ ಹಬ್ಬುತ್ತದೆ. ಸುಲಭದ್ದು ಎಲ್ಲೇ ಬರಲಿ ಇವತ್ತಿನ ಕೃಷಿಗೆ ಅದು ಬೇಕೇ ಬೇಕು. ಕೃಷಿಯನ್ನು ಉಳಿಸುವ ತುರ್ತು ಅಗತ್ಯ ಅದು. ಒಂದು ಕೊಟ್ಟು-ಹಾರೆಗೆ, ಪಿಕಾಸಿಗೆ, ಕತ್ತಿಗೆ ಹಿಡಿ-ದಡೆ ಕೂರಿಸುವುದು ಕೌಶಲ್ಯ. ಅದು ಸಾಮಾನ್ಯ ಪರಿಣತಿಯಲ್ಲ. ಜಾತಿಮರದಾಗಬೇಕು, ಒಣಗಿದ ಮೇಲೆ ಒಡೆಯಬಾರದು, ನೀರು ತಾಗಿ ಕುಂಬಾಗಬಾರದು, ಹಗುರವಾಗಿರಬೇಕು. ಅದಕ್ಕೊಂದು ನಿರ್ದಿಷ್ಟ ಉದ್ದ-ದಪ್ಪ ಬೇಕು. ತೊಗಟೆಯನ್ನು ನಯವಾಗಿ ಜಾರಿಸಬೇಕು. ಕಡೆಭಾಗಕ್ಕೆ ಚಡಿ ಕಡಿದು ಹಾರೆಯನ್ನು ಸಿಕ್ಕಿಸಿ ಬಿದಿರ-ಕಂಗಿನ ಕೀಲು ಹಾಕಿ ಬಡಿದು ಗಟ್ಟಿ ಮಾಡಬೇಕು. ಇದರ ಹಿಂದೆ ಪರಂಪರಾಗತ ಹಳ್ಳಿ ಸೃಜನಶೀಲತೆಯಿದೆ. ಅಪ್ಪನಿಂದ ಮಗನಿಗೆ, ಅವನ ಮಗನಿಗೆ ಸಾಗಿ ಬಂದ ಕೌಶಲ್ಯವಿದು. ಒಂದು ಹಾರೆ, ಪಿಕ್ಕಾಸಿಗೆ ದಡೆ ಹೇಗೆ ಹಾಕುತ್ತಾನೆ, ಅದಕ್ಕೆ ಕೀಲು ಹೇಗೆ ಬಡಿದಿದ್ದಾನೆ ಎಂಬುದರ ಆಧಾರದಲ್ಲಿ ಅವನ ಇಡೀ ಕೃಷಿ ರಂಗದ ಒಳಗೊಳ್ಳುವಿಕೆ ಪ್ರಾವಿಣ್ಯತೆಯನ್ನು ಅಳತೆ ಮಾಡಬಹುದು.

ಇದೊಂದೇ ಅಲ್ಲ. ಮನೆಯ ಮಣ್ಣಿನ ಗೋಡೆಯಿರಬಹುದು, ನೀರಕಟ್ಟದ ಕಾಡುಬೂರಿನ ಗುರ್ಜಿ ಇರಬಹುದು, ಕಣಿ ದಾಟುವ ಪಾಪು ಇರಬಹುದು, ಬೇಲಿನಡುವಿನ

ತಡಮೆ, ಭತ್ತ-ಅಕ್ಕಿಯ ಮುಡಿ, ಕಣಜ, ಮೀನು ಹಿಡಿಯುವ ಮುಂಕ್ಕರಿ, ಕಂಬಳದ ನೊಗ-ಹಲಗೆ, ದೆಂಗದ ಮೇಲಿನ ಬಲ, ಕೋಳಿಕಟ್ಟದ ಹಗ್ಗ, ಕೋಣಕ್ಕೆ ಬಡಿಯುವ ಬೆತ್ತ ಇವೆಲ್ಲವೂ ನೆಲ ಆಧಾರಿತ ಕೌಶಲ್ಯ. ಯಂತ್ರ ಸಂಸ್ಕೃತಿ ಪ್ರೀತಿಯಿಂದ ಈ ಹಸುರು ಸೃಜನಶೀಲತೆಯಿಂದು ನಾಶದ ಅಂಚಿನಲ್ಲಿದೆ.

ಇವೆಲ್ಲವೂ ಯಾವುವೂ ಜಾತಿ ಆಧಾರಿತ ಕೌಶಲ್ಯ-ಉತ್ಪನ್ನಗಳಲ್ಲ. ಕೃಷಿಕರೇ ರೂಪಿಸಿದ ಸಾಧನಗಳು. ಪ್ರಕೃತಿಯಲ್ಲಿ ಸುಲಭವಾಗಿ ಲಭ್ಯವಿರುತ್ತಿದ್ದ ಮಣ್ಣು, ಮರ, ಬಿದಿರು, ಕಬ್ಬಿಣ ಇತ್ಯಾದಿಗಳನ್ನು ಬಳಸಿ ಜೀವನಾನುಕೂಲಕ್ಕೆ ಅಗತ್ಯವಿರುವ ವಸ್ತುಗಳನ್ನು ತಯಾರಿಸುತ್ತಿದ್ದರು. ಬರೀ ಶ್ರಮ, ಪರಂಪರೆಯ ಅರಿವು ಅಷ್ಟೇ ಅಲ್ಲ; ಅಳತೆ ಪ್ರಮಾಣಗಳು ಅಲಿಖಿತವಾಗಿ ಬಾಯ್ದೆರೆಯಾಗಿ ಬಳಕೆಯಾಗುತ್ತಿತ್ತು. ಇವುಗಳ ತಯಾರಿಯ ಹಿಂದೆ ಒಂದು ಸಂಸ್ಕೃತಿ, ಮೌಲ್ಯ, ಉದ್ದೇಶ-ತತ್ತ್ವಗಳಿರುತ್ತಿದ್ದವು.

ನೆಲದ ಮಣ್ಣನ್ನು ಮನೆಯನ್ನಾಗಿ ಪರಿವರ್ತಿಸುವ ಅನ್ವೇಷಣೆ, ಪ್ರಯೋಗ-ಪ್ರಯತ್ನಗಳ ಹಿಂದಿರುವ ತರ್ಕಗಳನ್ನೇ ನೋಡಿ. ಮಣ್ಣನ್ನು ಹದ ಮಾಡಿ ಗೋಡೆ ಇಡುವುದು, ಮಣ್ಣೆ ಗೋಡೆಯಾಗಿ ಸೆಟೆದು ನಿಲ್ಲುವುದು, ಗೋಡೆಯಾದ ಅದೇ ಮಣ್ಣಿನಲ್ಲೇ ಆತ ನಿಂತು ಕೈಯಾರೆ ಅದನ್ನು ಏರಿಸುವುದು. ಮುಂದೆ ಅದರ ಮಾಡು, ಅದಕ್ಕೆ ಅದೇ ಕಾಡು ಆವಾರದಿಂದ ಬಹುಬಗೆಯ ಕಟ್ಟಿಗೆ-ಕಾಡುಬಳ್ಳಿಗಳು, ಬಳ್ಳಿಗಳನ್ನು ಗುರುತಿಟ್ಟು ಎಡಬಲ, ದಿನ ಹೊತ್ತು ಗೊತ್ತು ನೋಡಿ ಕಡಿದು ಸವರುವುದು, ನೀರಿಗೆ ಹಾಕಿ ಕೊಳೆಸುವುದು. ಐವತ್ತು-ಅರುವತ್ತು ವರ್ಷ ಅವುಗಳ ಬಾಳುವಿಕೆ. ಚಾಕೋಟೆ-ಜಾರಿಗೆ ಮರದ ದಪ್ಪ ಎಲೆಯನ್ನು ತಂದು ಅಟ್ಟದ ಹಲಗೆಯ ಮೇಲೆ ಹರಡಿ ಅದರ ಮೇಲೆ ಮಣ್ಣು ಹರಡಿ ಸೆಗಣಿ ಸಾರಿಸಿದರೆ ಮುಗಿಯಿತು. ನೂರಾರು ವರ್ಷ ಗೆದ್ದಲು ಆ ಮರ-ಹಲಗೆಗೆ ಮೂತಿ ತೂರಿಸುವುದೇ ಇಲ್ಲ. ಗೋಡಂಬಿ ಸಿಪ್ಪೆಯಿಂದ ಎಣ್ಣೆ ತೆಗೆದು ಗೋಡೆಗೆ ಹಚ್ಚಿ ಹಸಿಹಸಿಯಾಗಿ ಕಲ್ಲಿನಲ್ಲಿ ತಿಕ್ಕಿದರೆ ಮಣ್ಣಗೋಡೆ ನೀರು ಹೀರಲಾರದು. ಹೀಗೆ ಮಣ್ಣು ಮತ್ತು ಕಾಡು ಬೇರೆ ಬೇರೆ ರೂಪದಲ್ಲಿ ನಾಟೀ ರೈತರ ಸೃಜನಶೀಲತೆಗೆ ಸಾಕ್ಷಿಯಾಗಿ ತಂಪಿನ, ಸುಖದ ಮನೆಯಾಗಿ ಬದಲಾಗುತ್ತಿತ್ತು.

ನನ್ನ ಹಳೆಮನೆಯ ಪಕ್ಕದಲ್ಲಿ ಒಂದು ಹಟ್ಟಿಯಿತ್ತು. ಈಗ ಅದು ಉರುಳಿ ಬಿದ್ದು ಬರೀ ಒಂದು ತುಂಡುಗೋಡೆಯಷ್ಟೇ ಉಳಿದಿದೆ. ಆ ಗೋಡೆಯ ಮೇಲೆ ಅನಾದಿ ಕಾಲದ್ದೋ ಎಂಬಂತೆ ಒಂದಷ್ಟು ಸುಣ್ಣದ ಗೆರೆಗಳಿವೆ. ಅವು ಬಹಳದೂರದ ಚಿತ್ರಗಳಲ್ಲ. ಸ್ಕೇಲ್, ಬೀಜಗಣಿತ, ರೇಖಾಗಣಿತ ಬಳಸಿ ಬರೆದ ರಂಗೋಲಿ-ಚಿತ್ತಾರಗಳಲ್ಲ. ಸುಮಾರು ವರ್ಷಗಳ ಹಿಂದೆ ಶಾಂಬಕ್ಕ ಎಂಬವರು ನಮ್ಮ ಹಟ್ಟಿಗೆ ಸೊಪ್ಪು ತಂದು ಹಾಕುತ್ತಿದ್ದರು. ಒಂದು ಹೊರೆ ಸೊಪ್ಪು ಹಾಕಿ ತಾಂಬೂಲದ ಸಂಚಿನಿಂದ ಸುಣ್ಣದ ಬಿರುಡೆ ತೆಗೆದು ಗೋಡೆಯ ಮೇಲೆ ಒಂದು ಗೆರೆ ಬರೆದು ಹೋಗುತ್ತಿದ್ದರು. ವಾರಕ್ಕೆ ಒಂದು ಬಾರಿ ನಮ್ಮಮ್ಮ ಈ ಗೆರೆಯನ್ನು ಲೆಕ್ಕ ಹಾಕಿ ಅವರ ಸಂಬಳ ಕೊಡುತ್ತಿದ್ದರು. ಗೆರೆ ಹಾಕುವುದನ್ನು ಬಿಟ್ಟು ಮತ್ತು ಗೆರೆ ಲೆಕ್ಕ ಹಾಕುವುದನ್ನು ಬಿಟ್ಟು ಶಾಂಬಕ್ಕನಿಗೂ ನಮ್ಮಮ್ಮನಿಗೂ ಬೇರೆ ಅಕ್ಷರ ಪ್ರಪಂಚದ ಯಾವ ಅನುಭವವೂ ಇರಲಿಲ್ಲ. ಇದು ಅವರೊಳಗೆ ಪರಸ್ಪರ ಬರೀ ಸಂವಹನದ ಒಂದು ಬಗೆ. ಆದರೆ ಗತದ ಆ ಲೆಕ್ಕ ವರ್ತಮಾನಕ್ಕೆ ಒಂದು ಕಲಾತ್ಮಕ ಕಲೆಯಾಗಿ ಕಾಣಿಸುತ್ತದೆ.

ಎರಡು ದಶಕದ ಹಿಂದೆ ಆಗುಂಬೆಯಡಿಯ ಕೂಡ್ಲು ತೀರ್ಥಕ್ಕೆ ಹೋಗಿದ್ದೆ. ಅಲ್ಲೊಂದು ಹೊಳೆಯಿದೆ. ಕೂಡ್ಲು ಊರಿನ ಜನ ಪೇಟೆಯ ಮುಖ ಕಾಣಬೇಕಾದರೆ, ಒಂದು ಬೆಂಕಿಪೆಟ್ಟಿಗೆ ಬೇಕಾದರೆ ಆರೇಳು ಮೈಲು ನಡೆಯಬೇಕು. ಆ ಹೊಳೆದಾಟಲು ಊರವರೇ ಸಾಂಘಿಕವಾಗಿ

ಒಂದು ತೂಗುಸೇತುವೆ ನಿರ್ಮಿಸಿದ್ದರು. ಅರ್ಥಾತ್ ಅದು ಉಯ್ಯಾಲೆ ಸೇತುವೆ. ಕಾಡಿನಿಂದ ಮೂರೇ ಮೂರು ಬಳ್ಳಿಗಳನ್ನು ತಂದು ಹೊಳೆಯ ಆ ಬದಿಯ ಮರದಿಂದ ಈ ಬದಿಯ ಮರಕ್ಕೆ ಎಳೆದು ಕಟ್ಟಿದ್ದಾರೆ. ಒಂದು ಅಡ್ಡಬಳ್ಳಿ ಕೆಳಗೆ ಕಾಲೂರಿ ನಡೆಯಲು, ಎರಡು ಸಮಾನಾಂತರವಾಗಿ ಹಿಡಿದುಕೊಂಡು ಸಾಗುವ ಕೈಮರ. ಲೀಲಾಜಾಲವಾಗಿ ಈ ಉಯ್ಯಾಲೆ ಸೇತುವೆ ಮೇಲೆ ಹಳ್ಳಿಜನ ಅಂಜಿಕೆಯಿಲ್ಲದೆ ದಾಟುತ್ತಿದ್ದರು. ಅಕ್ಕಿ ಮುಡಿಯನ್ನು ಹೊತ್ತು ದಾಟುವ ರೈತರೊಬ್ಬರನ್ನು ಅಂದು ಕಂಡು ದಂಗಾದೆ. ಸೇತುವೆಯನ್ನು ಹಳ್ಳಿಯ ಎರಡನೆಯ ತಲೆಮಾರಿನ ನಾನು ಅಂದು ದಾಟಲು ಪಟ್ಟ ಪಾಡು ಇವತ್ತಿಗೂ ನೆನಪಿದೆ. ಹಳ್ಳಿಯ ಅಷ್ಟೂ ಮಂದಿ ಲೀಲಾಜಾಲವಾಗಿ ಹೀಗೆ ಹೀಗೆ ಬನ್ನಿ ಎಂದು ತೋರಿಸುತ್ತಾ ಆ ಕಡೆಗೆ ಸರಿದು ನನ್ನನ್ನು ಕರೆಯುತ್ತಿದ್ದರು. ದಾಟಲಾರದ ನಾನು ನಾಗರಿಕತೆಯ ಪ್ರತಿನಿಧಿಯಾಗಿ, ದಾಟಿದ ಅವರು ನಾಟೀಶಕ್ತಿಯ ಪ್ರತೀಕವಾಗಿ ಹೊಳೆಯ ಆ ಕಡೆ ಈ ಕಡೆ ನಿಂತಿದ್ದೆವು. ಹೊಳೆತುಂಬಿ ಹರಿಯುತ್ತಿತ್ತು.

ಮೊನ್ನೆ ಕಾಡುಕತೆಗಾರ ಗೆಳೆಯ ಶಿವಾನಂದ ಕಳವೆ ಅಂಕೋಲಾದ ಅಸೊಳ್ಳಿ ಎಂಬ ಹುಗಿತದ ಊರಿನ ಕತೆ ಹೇಳಿದರು. ಅದು ಭಾರೀ ಮಳೆ ಬೀಳುವ ಮಲೆನಾಡಿನ ನಡುವಿನ ನೀರೂರು. ಭತ್ತದ ಗದ್ದೆ ತುಂಬಾ ವರ್ಷದ ನಾಲ್ಕು ತಿಂಗಳು ನೀರು ನೀರು. ಎಲ್ಲೂ ಕಾಲೂರುವಂತಿಲ್ಲ. ಜೌಗುನೆಲ, ಮುಳುಗುತ್ತದೆ. ಮಳೆಗಾಲ ಮುಗಿಯುವರೆಗೆ ಊರವರಲ್ಲಿ ಅಲಿಖಿತ ಒಪ್ಪಂದ. ಆ ಕಡೆ ನಡೆದರೆ ಭೂಮಿ ಅಕ್ಟೋಪಸ್‌ನಂತೆ ನಯವಾಗಿ ನುಂಗುತ್ತದೆ. ಮಳೆನಿಂತ ಮೇಲೂ ಈ ಭೂಮಿಗೆ ಹಪಿಹಪಿಸುವಿಕೆ. ರೈತ ಹಠ ಬಿಡಲಾರ. ಕೆರೆಗದ್ದೆಯಲ್ಲೂ ಬಿತ್ತನೆ ಮಾಡಿ ಫಲ ಕೊಯ್ಯುವ ಸಾಹಸ.

ಗದ್ದೆಯ ಬದುವಿನ ಮೇಲೆ ಅಡಿಕೆಯ ದಬ್ಬೆಯನ್ನು ಹರಡುತ್ತಾ ಹೋಗುತ್ತಾರೆ. ಅದರ ಮೇಲೆಯೇ ಕಾಲಿಟ್ಟು ನಡೆಯಬೇಕು. ಆಯ ತಪ್ಪುವಂತಿಲ್ಲ. ವಾಲದಂತೆ, ಜಾರದಂತೆ ಹತ್ತಡಿ ಉದ್ದದ ಕಂಗಿನ ಸಲಾಕೆ ಕೈಯಲ್ಲಿ. ತಂತಿ ಮೇಲಿನ ಸರ್ಕಸ್‌ನಂತೆ ಮುಂದೆ ಮುಂದೆ... ಹಾಗೆ ನಡೆಯುವಾಗ ಒಂದು ಕೈಯಲ್ಲಿ ಬೊಗಸೆ ತುಂಬಾ ಬೀಜ ಹಿಡಿದು ಗದ್ದೆಯ ಮೇಲೆ ಹರಹಾಕಬೇಕು. ಬದುವಿನ ಮೇಲೆ ನಿಂತವ ತಕಥೈ ಯಕ್ಷಗಾನ ಕುಣಿದರೆ ಮುಗಿದೇ ಹೋಯಿತು. ಸುತ್ತಲಿನ ಗದ್ದೆ ಪೈರು ಸಮೇತ ಭೂಕಂಪ ಆದಂತೆ ನೆಲ ನಲಿಯುತ್ತದೆ ಎನ್ನುತ್ತಾರೆ ಕಳವೆ.

ಅನ್ನದ ಹಿಂದೆ ಮನುಷ್ಯನ ಇಂಥ ಸೃಜನಶೀಲತೆಯ ಸರಕು ಮಾಲೆಕಟ್ಟುತ್ತದೆ. ಇದೇ ಕೆರೆಗದ್ದೆಯ ಮೇಲೆ ಕೆಂಪು ಮಣ್ಣು ಸುರಿದು ಕಟ್ಟಡ ಏರಿಸುವ ವಿಜ್ಞಾನವನ್ನು, ತೇಲುವ ಮಣ್ಣಿನ ಮೇಲೆ ಬೀಜ ಬಿತ್ತಿ ಫಲಕೊಯ್ಯುವ ನಾಟೀ ತಂತ್ರಕ್ಕೆ ಮುಖಾಮುಖಿ ಗೊಳಿಸಿ ನೋಡುವ. ಸುಸಜ್ಜಿತ ಸೇತುವೆಯ ಮುಂದೆ ಕಾಡುಬೂರಿನ ಸಂಕ, ಕಾಲ್ಕುಲೇಟರ್ ಮುಂದೆ ಶಾಂಬಕ್ಕನ ಸುಣ್ಣದ ಗೆರೆ, ಸಿಮೆಂಟಿನ ಮುಂದೆ ಮಣ್ಣಿನ ಗೋಡೆ, ಕೆರೆಕಟ್ಟೆಗಳು ಕುಂಟೆ, ಬೆಂಚೆ ಪೆಂಚೆ ತಲಪರಿಗೆಗಳ ಹಿಂದೆ ನೆಲಮೂಲ ವಿಜ್ಞಾನ ಇತ್ತು. ಇಂದು ಕೃಷಿಯಾಧರಿತ ಕೈಗಾರಿಕೋದ್ಯಮ ಇವುಗಳನ್ನೆಲ್ಲಾ ಚಿತ್ರಕ್ಕೆ ಸರಿಸಿದೆ.

ಕರ್ನಾಟಕದಲ್ಲಿಂದು ಎಲ್ಲೇ ಕೃಷಿಮೇಳ ನಡೆಯಲಿ ಪ್ರಧಾನ ವೇದಿಕೆಯ ಮುಂಭಾಗದಲ್ಲೇ ಮಡಿಕೆ ಮಾಡುವ ಕುಂಬಾರ, ಕಬ್ಬಿನ ರಸ ತೆಗೆಯುವ ಆಲೆಮನೆ, ಚಾಪೆನೆಯ್ಯನವರು, ಕೈಮಗ್ಗದ ನೇಕಾರ, ನೇಗಿಲು ಮಾಡುವ ಬಡಗಿಯನ್ನು ತೋರಿಸುತ್ತಾರೆ. ಇವರನ್ನೆಲ್ಲಾ ಸಂಯೋಜಕರು ಎಲ್ಲೆಂದಿಲ್ಲೋ ಹುಡುಕಿ ತಂದಿರುತ್ತಾರೆ. ಗ್ರಾಮ ಕೌಶಲ್ಯ ಬಹುತ್ವ ಮೂಲದ ಈ ಕೊನೆಯ ಕೊಂಡಿ ನಮ್ಮ ನೆಲ ಮೂಲದ ಏಕ ಮಾದರಿಯಲ್ಲ. ಬಹುತ್ವ ಮೂಲದ ಪ್ರದೇಶ ನಿಷ್ಠೆಯ ಇವು ಉಳಿಯದೇ ಹೋದಾಗ ನೆಲ, ಕೃಷಿಯೂ ಉಳಿಯದು.



**ಡಾ. ನರೇಂದ್ರ ರೈ ದೇರ್ಲ :** ನರೇಂದ್ರ ರೈ ದೇರ್ಲ ಅವರು 14 ಅಕ್ಟೋಬರ್ 1964 ರಂದು ಜನಿಸಿದರು. ಸಾಹಿತಿ, ಅಂಕಣಕಾರರಾದ ಇವರು ಪರಿಸರ ಸಂಬಂಧಿ ಬರಹಗಳಿಂದ ಗುರುತಿಸಿಕೊಂಡವರು. ಉತ್ತಮ ವಾಗ್ಮಿ, ಸಾಹಿತಿ ಹಾಗೂ ಪ್ರಗತಿಪರ ಚಿಂತಕರಾದ ದೇರ್ಲ ಅವರು, ತೇಜಸ್ವಿ ಪತ್ರಗಳು, ಹಸಿರು ಉಸಿರು, ನಿರ್ಮಾಣ, ನೆಲದವರು, ಹಸಿರು ಕೃಷಿಯ ನಿಟ್ಟುಸಿರು, ಇದೂ ಪತ್ರಿಕೋದ್ಯಮ, ನೆಲ ಮುಖಿ, ಬೇರು ಬದುಕು, ಕಾಂಕ್ರೀಟ್ ಕಾಡಿನ ಪುಟ್ಟ ಕಿಟಕಿ, ಎಂಟು ಲೋಕ, ಬೊಗಸೆ ತುಂಬಾ ಬೀಜ, ಕನ್ನಡದಲ್ಲಿ ಬೇಟೆ ಸಾಹಿತ್ಯ, ಸಾವಯವ ಕೃಷಿ, ನೆಲದವರು, ಬೇಟೆ, ಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ ಮುಂತಾದ 40ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಇದುವರೆಗೆ ಇವರ ಇಪ್ಪತ್ತೆರಡು ಕೃಷಿ ಹಾಗೂ ಪರಿಸರದ ಕುರಿತಾದ ಲೇಖನಗಳು ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳ ಪಠ್ಯದಲ್ಲಿ ಸ್ಥಾನ ಪಡೆದುಕೊಂಡಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯ ಪರಿಸರ ಪತ್ರಿಕೋದ್ಯಮ ಪ್ರಶಸ್ತಿ, ಕುವೆಂಪು ಭಾಷಾ ಅಭಿವೃದ್ಧಿ ಪ್ರಾಧಿಕಾರದ ಅನುವಾದ ಪ್ರಶಸ್ತಿ, ಬೆಂಗಳೂರು ಕೃಷಿ ವಿ.ವಿ.ಯ ಅತ್ಯುತ್ತಮ ಕೃಷಿ ಪುಸ್ತಕ ಪ್ರಶಸ್ತಿ, ಡಾ। ಹಾ. ಮಾ. ನಾಯಕ ಅಂಕಣ ಸಾಹಿತ್ಯ ಪ್ರಶಸ್ತಿ, ಅಕ್ಷರ ಪ್ರತಿಷ್ಠಾನದ ಅತ್ಯುತ್ತಮ ಪರಿಸರ ಪುಸ್ತಕ ಪ್ರಶಸ್ತಿ, ಫ. ಗೊ. ಪ್ರಶಸ್ತಿ, ಹೀಗೆ ಹತ್ತು ಹಲವು ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ. ಪ್ರಸ್ತುತ ಪಾಠವನ್ನು ಅವರ 'ಹಸಿರು-ಉಸಿರು' ಎನ್ನುವ ಪುಸ್ತಕದಿಂದ ಆರಿಸಲಾಗಿದೆ.

## ನವೀನ ಪದಗಳ ಅರ್ಥ

ತುರ್ತು- ಅತ್ಯಗತ್ಯ. ಪರಿಣತಿ- ನೈಪುಣ್ಯ. ಕುಂಬು- ಶಿಥಿಲವಾದ; ಗಟ್ಟಿಯಲ್ಲದುದು. ತೊಗಟೆ- ಸಿಪ್ಪೆ. ಕಣಿ- ಸಣ್ಣ ತೋಡು. ಅನ್ವೇಷಣೆ- ಹುಡುಕಾಟ. ಆವಾರ- ಆವರಣ. ಸುಣ್ಣದ ಬಿರುಡೆ - ಸುಣ್ಣದ ಡಬ್ಬಿ. ಸರಕು- ಸಾಮಗ್ರಿ; ಸರಂಜಾಮು. ನಿಷ್ಠೆ- ನಿಯತ್ತು. ಬಲ - ಸಿಕ್ಕ.

## ವಿಶದೀಕರಣ

**ಹಿಡಿ-ದಡೆ** - ಹಾರೆ, ಪಿಕ್ಕಾಸು, ಕತ್ತಿ ಮೊದಲಾದ ಸಲಕರಣೆಗಳ ಹಿಡಿ

**ಕೀಲು** - ವಸ್ತುಗಳೆರಡನ್ನು ಅಲುಗಾಡದಂತೆ ಜೋಡಿಸುವ ಸಲಕರಣೆ

**ಚಡಿ** - ಎರಡು ಮರದ ತುಂಡುಗಳನ್ನು ಕೂಡಿಸಲು ಉಳಿಯಿಂದ ಮಾಡುವ ಸಣ್ಣ ಜಾಗ

**ಗುರ್ಜಿ** - ಸಣ್ಣ ಅಣೆಕಟ್ಟು

**ಪಾಪು** - ತೋಡು ದಾಟಲು ತೆಂಗು, ಕಂಗು, ಬಿದಿರು ಮುಂತಾದವುಗಳಿಂದ ತಯಾರಿಸಿದ ಕಿರು ಸೇತುವೆ

**ತಡಮೆ** - ಕಾಲುದಾರಿಗೆ ಅಡ್ಡವಾಗಿ ಕಟ್ಟಿದ ತಡೆ. ಪಾದಚಾರಿಗಳಿಗೆ ಇದನ್ನು ದಾಟಿ ಹೋಗಲು ಸಾಧ್ಯವಾಗಬೇಕು.

**ಅಕ್ಕಿಮುಡಿ** - ಅಕ್ಕಿಯು ಕೆಡದಂತೆ ಸಂರಕ್ಷಿಸಲು ಮಾಡುವ ಬೈಹುಲ್ಲಿನ ಕಟ್ಟು

**ಕಣಜ** - ಕಾಳುಗಳು ಕೆಡದಂತೆ ಕೂಡಿಡುವ ಬೆಚ್ಚಗಿನ ಕೋಣೆ

**ಮುಂಕ್ಕರಿ** - ಮೀನು ಹಿಡಿಯಲು ಬಳಸುವ ಒಂದು ರೀತಿಯ ಬುಟ್ಟಿ

**ನೊಗ** - ಎರಡು ಎತ್ತು ಅಥವಾ ಕೋಣಗಳನ್ನು ಒಟ್ಟಿಗೆ ಜೋಡಿಸಲು ಅವುಗಳ ಕುತ್ತಿಗೆಗೆ ಜೋಡಿಸುವ ಸಾಧನ

**ದೆಂಗ** - ಗೃಹಬಳಕೆಯ ವಸ್ತುಗಳನ್ನು ಬೆಚ್ಚಗೆ ಸಂಗ್ರಹಿಸಲು ಸಾಂಪ್ರದಾಯಿಕ ಒಲೆಯ ಮೇಲೆ ನಿರ್ಮಿಸುವ ಅಟ್ಟಣಿಗೆ.

**ಕೈಮರ** - ಕಾಲು ದಾರಿಯ ಸಂಕ ದಾಟಲು ಆಧಾರವಾಗುವ ಮರದ ಹಿಡಿ.

**ಅಕ್ಟೋಪಸ್** - ಅಕ್ಟೋಪಸ್ ಒಂದು ಸಮುದ್ರ ಜೀವಿಯಾಗಿದ್ದು, ಎಂಟು ತೋಳುಗಳು, ಮೂರು ಹೃದಯಗಳು, ನೀಲಿ ರಕ್ತ ಮತ್ತು ಅತ್ಯಂತ ಬುದ್ಧಿವಂತಿಕೆಗೆ ಹೆಸರುವಾಸಿಯಾಗಿದೆ. ಇದು ಕವಚವಿಲ್ಲದ ಕಡಲ ಮೃದ್ವಂಗಿಯಾಗಿದ್ದು, ದೊಡ್ಡ ಕಣ್ಣುಗಳು ಮತ್ತು ಮೃದುವಾದ, ಚೀಲದಂತಹ ದೇಹವನ್ನು ಹೊಂದಿದೆ. ಅವು ತಮ್ಮ ಬಣ್ಣವನ್ನು ಮತ್ತು ಆಕಾರವನ್ನು ತಕ್ಷಣವೇ ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿವೆ.

**ಗದ್ದೆಯ ಬದು** - ಗದ್ದೆ ಹುಣಿ (ಪುಣಿ)

**ತಲಪರಿಗೆ** - ಬಯಲು ಸೀಮೆ ಪ್ರದೇಶಗಳಲ್ಲಿ ಬೆಟ್ಟಗಳಿಂದ ಇಳಿದು ಬರುವ ಮಳೆ ನೀರನ್ನು ಕೂಡಿಡಲು ಮಾಡಿಸಿದ ಕೆರೆ

## ಉತ್ತರಿಸಿರಿ

1. ಕೊಟ್ಟು-ಹಾರೆಗೆ ಹಿಡಿದಡೆ ಕೂರಿಸುವ ದೇಸೀ ಕೌಶಲ ಯಾವುದು?
2. ಯಂತ್ರ ಸಂಸ್ಕೃತಿಯ ಪ್ರೀತಿಯಿಂದ ಅಳಿವಿನಂಚಿಗೆ ಬಿದ್ದ ಪರಂಪರಾಗತ ಕೌಶಲಗಳು ಏನಾಗಿದ್ದವು?
3. ಮನೆಯ ನಿರ್ಮಾಣದಲ್ಲಿ ನಾಟೀ ರೈತರು ಅನುಸರಿಸುತ್ತಿದ್ದ ಸೃಜನಶೀಲ ತಂತ್ರಗಳು ಯಾವುವು?
4. ಉರುಳಿ ಬಿದ್ದ ಹಳೆ ಮನೆಯ ತುಂಡು ಗೋಡೆಯ ಮೇಲೆ ಬರೆದ ಸುಣ್ಣದ ಗೆರೆಗಳ ಹಿಂದೆ ಅಡಗಿರುವ ಲೆಕ್ಕಾಚಾರ ಏನಾಗಿತ್ತು?
5. ಶಿವಾನಂದ ಕಳವೆಯವರು ಹೇಳಿದ ಅಸೊಳ್ಳಿ ಊರಿನ ವಿಶೇಷತೆ ಏನು?

## ಸ್ವಾರಸ್ಯ ಬರಹ

ಲೇಖಕರು ಆಗುಂಬೆಯ ಕೂಡ್ಲು ತೀರ್ಥಕ್ಕೆ ಹೋದ ಸಂದರ್ಭದಲ್ಲಿ ತೂಗುಸೇತುವೆಯನ್ನು ದಾಟಬೇಕಾದ ಘಟನೆಯ ಸ್ವಾರಸ್ಯವನ್ನು ತಿಳಿಸಿರಿ.

## ಪ್ರಬಂಧ ತಯಾರಿ

ಯಂತ್ರ-ತಂತ್ರಗಳ ಬಳಕೆಯಿಂದ ಪರಂಪರಾಗತ ದುಡಿಮೆ ಇಂದು ಮೂಲೆ ಗುಂಪಾಗುತ್ತಿದೆಯೇ? ನಿಮ್ಮ ಅನಿಸಿಕೆಗಳನ್ನು ಪ್ರಬಂಧ ರೂಪದಲ್ಲಿ ಬರೆದು ಮಂಡಿಸಿರಿ.

## ಸಂದರ್ಶನ ಲೇಖನ

ನಿಮ್ಮ ಊರಿನ ಬೇಸಾಯಗಾರರನ್ನು ಸಂದರ್ಶಿಸಿ ಪರಂಪರಾಗತ ಕೃಷಿ ವಿಧಾನಗಳು ಮತ್ತು ಸಲಕರಣೆಗಳ ಬಗ್ಗೆ ಮಾಹಿತಿ ಪಡೆದು ಸಂದರ್ಶನ ಲೇಖನವೊಂದನ್ನು ತಯಾರಿಸಿರಿ.

## ಪಟ್ಟಿ ತಯಾರಿ

ನಿಮ್ಮ ಸುತ್ತಮುತ್ತ ಬಳಕೆಯಲ್ಲಿರುವ ದುಡಿಮೆಗೆ ಸಂಬಂಧಿಸಿದ ಪರಂಪರಾಗತ ಸಲಕರಣೆಗಳ ಹೆಸರುಗಳನ್ನು ಪಟ್ಟಿ ಮಾಡಿರಿ.

## ಕರಪತ್ರ

ಕೃಷಿ ಭವನಕ್ಕೆ ಭೇಟಿ ನೀಡಿ ಕೃಷಿ ಉತ್ತೇಜನಕ್ಕಾಗಿ ಸರಕಾರವು ಹಮ್ಮಿಕೊಂಡಿರುವ ವಿವಿಧ ಪದ್ಧತಿಗಳ ಬಗ್ಗೆ ಮಾಹಿತಿ ಪಡೆದು, ಅದನ್ನು ಕೃಷಿಕರಿಗೆ ತಿಳಿಸುವ ಉದ್ದೇಶದಿಂದ ಕರಪತ್ರವೊಂದನ್ನು ಸಿದ್ಧಪಡಿಸಿರಿ.

## ಭಾವನಾಮಗಳನ್ನು ಬರೆಯಿರಿ

| ನಾಮಪದ | ಭಾವನಾಮ |
|---|---|
| ಕೌಶಲ | ಕೌಶಲ್ಯ |
| ಪರಂಪರೆ | |
| ಪ್ರವೀಣ | |
| ಸಂಸ್ಕೃತಿ | |
| ಪ್ರಕೃತಿ | |
| ಪ್ರಪಂಚ | |
| ವಿಜ್ಞಾನ | |
| ತಂತ್ರ | |
| ಯಂತ್ರ | |
| ವರ್ಷ | |

## ಪರ್ಯಾಯ ಪದಗಳನ್ನು ಬರೆಯಿರಿ

| ಪದ | ಪರ್ಯಾಯ ಪದ |
|---|---|
| ಮರ | ವೃಕ್ಷ, ತರು, ದ್ರುಮ, ವಿಟಪಿ |
| ಮಗ | |
| ನೀರು | |
| ಕಾಡು | |
| ಬೆಂಕಿ | |
| ಭೂಮಿ | |

## ಅನ್ಯದೇಶೀಯ ಪದ

ಈ ಪಾಠದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಹುಡುಕಿ ಬರೆಯಿರಿ.

## ಘಟಕ ಮೌಲ್ಯಮಾಪನ

1. ಹರಿಶ್ಚಂದ್ರ ಕಾವ್ಯ ಯಾವ ಛಂದಸ್ಸಿನಲ್ಲಿದೆ?
(ಭಾಮಿನಿ ಷಟ್ಪದಿ, ವಾರ್ಧಕ ಷಟ್ಪದಿ, ಶರಷಟ್ಪದಿ, ಕುಸುಮ ಷಟ್ಪದಿ)
2. ಸುಡುಗಾಡಿನಲ್ಲಿ ಯಾರ ಧ್ವನಿಯು ಹರಿಶ್ಚಂದ್ರ ಭೂಪಾಲನನ್ನು ನಿದ್ದೆಯಿಂದ ಎಚ್ಚರವಾಗುವಂತೆ ಮಾಡಿತು?
3. ತನ್ನ ಕಂದನನ್ನು ಚಿತೆಗೇರಿಸಲು ಅಡ್ಡಿಪಡಿಸಿದ ಹರಿಶ್ಚಂದ್ರನಲ್ಲಿ ಚಂದ್ರಮತಿಯು ಏನೆಂದು ಬೇಡಿಕೊಂಡಳು?
4. 'ಹಾಗವನು ಕೊಟ್ಟಲ್ಲದೇನೆಂದಡಂ ಬಿಡೆನೆಂದನು' ಕಾವ್ಯಭಾಗದಲ್ಲಿ ಚಿತ್ರಿತವಾದ ಹರಿಶ್ಚಂದ್ರನ ಕರ್ತವ್ಯ ಪ್ರಜ್ಞೆಯ ಕುರಿತು ಕಿರುಲೇಖನವೊಂದನ್ನು ಬರೆಯಿರಿ.
5. ಕೆಳಗೆ ಕೊಟ್ಟಿರುವ ಪದ್ಯಸಾಲುಗಳಿಗೆ ಪ್ರಸ್ತಾರ ಹಾಕಿ, ಗಣವಿಭಜನೆ ಮಾಡಿ, ಛಂದಸ್ಸನ್ನು ಹೆಸರಿಸಿರಿ.
ವನಿತೆಯಳಲಂ ಕೇಳ್ದು ನಡುಗಿ ವಿಶ್ವಾಮಿತ್ರ
ಮುನಿಯೆನಗೆ ಮತ್ತೆ ಮಾಡಿದ ತೊಡಕಿದಾಗದಿರ
ದೆನುತ ಮನದೊಳು ಮಱುಗುತಾವ ಲೋಕದೊಳಾಣೆ ಸಲುವುದೆನಿಸುವ ಭೂಪನ
ತನಯನೀ ತರಳನೆಲೆ ತರುಣಿ ನೆಲದೆಱೆಯನಿ
ಕ್ಕೆನಲು ಕೊಡಲದಿಲ್ಲದಧಿಕರ ಪೆಸರ್ಗೊಳಲು ಬಿಡು
ವೆನೆ ಶೋಕಿಸುವ ಹೊತ್ತು ಹುಸಿದು ಶೋಕಿಸುವೊಡೇನಹುದೆಂದನವನೀಶನು
6. ಕಾಯಕವೇ ಕೈಲಾಸ ಎಂದು ಹೇಳಿದವರು ಯಾರು?
(ಬಸವಣ್ಣ, ಅಕ್ಕಮಹಾದೇವಿ, ದಾಸಿಮಯ್ಯ. ಅಲ್ಲಮಪ್ರಭು)
7. ಕಾಯಕ ಮತ್ತು ಕೈಲಾಸದ ಕುರಿತಾಗಿರುವ ಬಸವಣ್ಣನವರ ನಿಲುವೇನು?
8. ಸ್ವಾರಸ್ಯ ಬರೆಯಿರಿ.
ಆಸೆಯೆಂಬುದು ಭವದ ಬೀಜ
ನಿರಾಸೆಯೆಂಬುದು ನಿತ್ಯ ಮುಕ್ತಿ
9. ಆಯ್ದಕ್ಕಿ ಲಕ್ಕಮ್ಮ ಅವರ ಅಭಿಮತದಂತೆ ಭಕ್ತನಾದವನಿಗೆ ಸಂಪತ್ತು ಯಾವಾಗ ಪ್ರಾಪ್ತಿಯಾಗುತ್ತದೆ?
10. ಶಿವಶರಣರ ಕಾಯಕ ನಿಷ್ಠೆಯ ಕುರಿತು ನೀವು ಓದಿದ ವಚನಗಳ ಹಿನ್ನೆಲೆಯಲ್ಲಿ ಟಿಪ್ಪಣಿ ಬರೆಯಿರಿ.
11. ಅಡಿಗೆರೆ ಎಳೆದ ಆಂಗ್ಲ ಪದದ ಕನ್ನಡ ಪದವನ್ನು ಬಳಸಿಕೊಂಡು ಬೇರೊಂದು ವಾಕ್ಯವನ್ನು ಬರೆಯಿರಿ.
ಬೇಸಾಯದ ಕಾಯಕದಲ್ಲಿ ನಿರತನಾದ ಮಹೇಶನು <u>ಪರ್ಮನೆಂಟಾಗಿ</u> ಗ್ರಾಮದಲ್ಲಿ ನೆಲೆಸಿದನು.
12. ಕೆಳಗೆ ಕೊಟ್ಟಿರುವ ಪದಗಳನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ.
ಜೀವನಾನುಕೂಲ, ಬಳಕೆಯಾಗು, ಕಾಲೂರು, ಕೈಗಾರಿಕೋದ್ಯಮ
13. ರೈತರ ಸೃಜನಶೀಲತೆಯ ಮನೋಭಾವದಿಂದ ಮಣ್ಣು ಮತ್ತು ಕಾಡು 'ತಂಪಿನ ಸುಖದ ಮನೆಯಾಗಿ' ಹೇಗೆ ಸೃಷ್ಟಿಗೊಳ್ಳುತ್ತಿತ್ತು? ವಿವರಿಸಿರಿ.

| ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಸಾಹಿತಿಗಳು | | | ಕೃತಿ | ವರ್ಷ |
|---|---|---|---|---|
| 1 |  | ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ (ಕುವೆಂಪು) | ಶ್ರೀ ರಾಮಾಯಣ ದರ್ಶನಂ | 1968 |
| 2 |  | ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ದ.ರಾ. ಬೇಂದ್ರೆ) | ನಾಕುತಂತಿ | 1974 |
| 3 |  | ಶಿವರಾಮ ಕಾರಂತ | ಮೂಕಜ್ಜಿಯ ಕನಸುಗಳು | 1978 |
| 4 |  | ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಚಿಕ್ಕವೀರ ರಾಜೇಂದ್ರ | 1983 |
| 5 |  | ವಿನಾಯಕ ಕೃಷ್ಣ ಗೋಕಾಕ್ | ಭಾರತ ಸಿಂಧೂ ರಶ್ಮಿ | 1990 |
| 6 |  | ಯು. ಆರ್. ಅನಂತಮೂರ್ತಿ | ಸಮಗ್ರ ಸಾಹಿತ್ಯ | 1995 |
| 7 |  | ಗಿರೀಶ್ ಕಾರ್ನಾಡ್ | ಸಮಗ್ರ ಸಾಹಿತ್ಯ | 1998 |
| 8 |  | ಚಂದ್ರಶೇಖರ ಕಂಬಾರ | ಸಮಗ್ರ ಸಾಹಿತ್ಯ | 2010 |

# ಕೇರಳದಲ್ಲಿ ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆ ಪ್ರಮುಖ ಮಾಹಿತಿಗಳು

1965ರ ಭಾಷಾ ಅಲ್ಪಸಂಖ್ಯಾತರ ಕಮಿಷನಿನ ಐದನೆಯ ವರದಿಯಲ್ಲಿ ಶಿಫಾರಸು ಮಾಡಲಾದಂತೆ ಕೇರಳರಾಜ್ಯದ ಭಾಷಾ ಅಲ್ಪಸಂಖ್ಯಾತರಾದ ಕನ್ನಡ ಮತ್ತು ತಮಿಳು ಭಾಷಿಗರಿಗೆ ಸರಕಾರವು ಒದಗಿಸಿರುವ ಹಿತರಕ್ಷಣೆಗಳು ಮತ್ತು ಸೌಲಭ್ಯಗಳ ಕೆಲವು ಪ್ರಮುಖ ಮಾಹಿತಿಗಳನ್ನು ಮಾತ್ರ ಇಲ್ಲಿ ನೀಡಲಾಗಿದೆ. ಕಾಸರಗೋಡು ಮತ್ತು ಮಂಜೇಶ್ವರ ತಾಲೂಕುಗಳು ಕೇರಳ ರಾಜ್ಯದ ಕನ್ನಡ ಭಾಷಾ ಅಲ್ಪಸಂಖ್ಯಾತ ಪ್ರದೇಶವೆಂದು ಕೇರಳ ಸರಕಾರದಿಂದ ಘೋಷಿಸಲ್ಪಟ್ಟ ಪ್ರದೇಶಗಳಾಗಿದ್ದು ಇಲ್ಲಿನ ಕನ್ನಡಿಗರಿಗೆ ಸಂವಿಧಾನಬದ್ಧವಾದ ಹಲವು ವಿಶೇಷ ಸವಲತ್ತುಗಳಿರುವುದನ್ನು ಗಮನಿಸಬಹುದು. ಸಂವಿಧಾನದ ಅನುಚ್ಛೇದ 350ಎ ಮತ್ತು 350ಬಿ ಪ್ರಕಾರ ಭಾಷಾ ಅಲ್ಪಸಂಖ್ಯಾತ ಪಂಗಡಗಳಿಗೆ ಸೇರಿದ ಮಕ್ಕಳಿಗೆ ಆಯಾ ಭಾಷೆಯಲ್ಲಿ ಪ್ರಾಥಮಿಕ ಹಂತದ ಶಿಕ್ಷಣವನ್ನು ನೀಡುವುದು ಮತ್ತು ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಯನ್ನು ನೋಡಿಕೊಳ್ಳುವುದು ಆಯಾ ರಾಜ್ಯದ ಮತ್ತು ಸ್ಥಳೀಯ ಆಡಳಿತದ ಕರ್ತವ್ಯವಾಗಿರುತ್ತದೆ. ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಗಳನ್ನು ಕಾಪಾಡಲು ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುವ ಸಮಿತಿ ಹಾಗೂ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುವ ಸಮಿತಿಯು ಕಾರ್ಯವೆಸಗುತ್ತಿದೆ. ಭಾಷಾ ಅಲ್ಪಸಂಖ್ಯಾತರಿಗೆ ಸಾರ್ವಜನಿಕ ವಲಯದಲ್ಲಿರುವ ಕೆಲವು ಸವಲತ್ತುಗಳನ್ನು ಈ ಕೆಳಗೆ ಮಾಹಿತಿಗಾಗಿ ನೀಡಲಾಗಿದೆ..

1. ರಾಜ್ಯದ ಭಾಷಾ ಅಲ್ಪಸಂಖ್ಯಾತ ಪ್ರದೇಶದಲ್ಲಿ ಮುಖ್ಯ ಸರಕಾರಿ ಸುತ್ತೋಲೆಗಳು ಮತ್ತು ನಿಯಮಗಳು, ಮತದಾರ ಪಟ್ಟಿ ಈ ಮುಂತಾದುವುಗಳು ಭಾಷಾ ಅಲ್ಪಸಂಖ್ಯಾಕರ ಭಾಷೆಗಳಲ್ಲಿ ಪ್ರಕಟವಾಗಬೇಕು.

2. ಸಾರ್ವಜನಿಕರು ಬಳಸಬೇಕಾದ ಅರ್ಜಿಗಳು ಇತ್ಯಾದಿ ಸ್ಥಳೀಯ ಭಾಷೆ ಹಾಗೂ ಭಾಷಾ ಅಲ್ಪಸಂಖ್ಯಾತರ ಭಾಷೆಯಲ್ಲೂ ಮುದ್ರಿಸಬೇಕು.

3. ಭಾಷಾ ಅಲ್ಪಸಂಖ್ಯಾತರ ಭಾಷೆಯಲ್ಲಿ ದಾಖಲೆಪತ್ರಗಳ ನೋಂದಾವಣಿ ಸೌಲಭ್ಯಗಳು ಇರಬೇಕು.

4. ಭಾಷಾ ಅಲ್ಪಸಂಖ್ಯಾತರ ಭಾಷೆಯಲ್ಲಿ ಸರಕಾರಿ ಕಛೇರಿಗಳೊಂದಿಗೆ ಪತ್ರವ್ಯವಹಾರಕ್ಕೆ ಅನುಮತಿಯಿರಬೇಕು.

5. ಆ ಪ್ರದೇಶಗಳ ನ್ಯಾಯಾಲಯಗಳಲ್ಲಿ ಅಲ್ಪಸಂಖ್ಯಾತರ ಭಾಷೆಯಲ್ಲಿ ಪ್ರಮಾಣಪತ್ರಗಳನ್ನು ದಾಖಲೆಪಡಿಸಲು ಅನುಮತಿಯಿರಬೇಕು.

6. ಸಾಧ್ಯವಾಗುವಷ್ಟರಮಟ್ಟಿಗೆ ಆಡಳಿತ ಅನುಕೂಲತೆಗಳಿಗೆ ತಕ್ಕ ಗಮನದೊಂದಿಗೆ ಅಂತಹ ಪ್ರದೇಶಗಳಲ್ಲಿ ನೇಮಕ ಮಾಡಲ್ಪಡುವ ಅಧಿಕಾರಿಗಳು ಅಲ್ಪಸಂಖ್ಯಾತರ ಭಾಷೆಯ ಸಾಕಷ್ಟು ಪರಿಜ್ಞಾನವುಳ್ಳವರಾಗಿರಬೇಕು.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದ ಸರಕಾರದ ಆದೇಶಗಳು ಹಾಗೂ ಭಾಷಾ ಅಲ್ಪಸಂಖ್ಯಾತರಿಗಿರುವ ಶೈಕ್ಷಣಿಕ, ಔದ್ಯೋಗಿಕ ಸವಲತ್ತುಗಳ ಪೂರ್ಣ ಮಾಹಿತಿಗಳನ್ನು ಕೇರಳ ಸರಕಾರವು ಪ್ರಕಟಿಸಿದ 'ಕೇರಳದಲ್ಲಿ ಭಾಷಾ ಅಲ್ಪಸಂಖ್ಯಾತರ ಹಿತರಕ್ಷಣೆಗಳು' ಎಂಬ ಮಾಹಿತಿ ಪುಸ್ತಕದಿಂದ ಹಾಗೂ ಸರಕಾರದ ಅಧಿಕೃತ ವೆಬ್ಸೈಟ್ ಅಥವಾ ಇತರ ಸರಕಾರೀ ಅಧಿಕೃತ ಮೂಲಗಳಿಂದ ತಿಳಿದುಕೊಳ್ಳಬಹುದು.